SRI H. M. CHANNABASAPPA.—It is not the intention of the Government to hide anything that the hon. Members are legitimately entitled to. But it depends upon the nature of the question. Sometimes if the information is readily available at the Secretariat level, we shall certainly make it available immediately. Without knowing what exactly is the nature of the question, if the hon. Member goes on accusing the Government, what can Government do ?

ಶ್ರೀ ಎಸ್. ಬಂಗಾರಪ್ಪ.—ಸೆಕ್ರೆಟೇರಿಯಟ್ ಲೆವೆಲ್ಲಿನಲ್ಲಿರತಕ್ಕ ಉತ್ತರವನ್ನು ತರಿಸುವುದಕ್ಕೆ ಎಷ್ಟು ದಿವಸ ಬೇಕು ? ಹಿಂದೆ ಶ್ರೀಮಾನ್ ಚನ್ನಬಸಪ್ಪನವರು ಮತ್ತು ಸಿದ್ಧವೀರಪ್ಪನವರು ಈ ಕಡೆ ಇದ್ದಾಗ ಎಷ್ಟು ದಿವಸಗಳಾದರೂ ಸದಸ್ಯರು ಕಳುಹಿಸಿರತಕ್ಕ ಪ್ರಶ್ನೆಗಳಿಗೆ ಉತ್ತರ ಬರುವುದಿಲ್ಲ ಎಂದು ಗಲಾಟೆ ಮಾಡುತ್ತಿದ್ದರು. ಈಗ ಅವರು ಆ ಕಡೆ ಹೋಗಿ ಮಂತ್ರಿಗಳಾಗಿರುವಾಗ ಸದಸ್ಯರ ಪ್ರಶ್ನೆಗಳಿಗೆ ಏತಕ್ಕೆ ಬೇಗ ಉತ್ತರಗಳನ್ನು ತರಿಸುವ ಪ್ರಯತ್ನ ಮಾಡಬಾರದು ?

ಅಧ್ಯಕ್ಷರು.—ಆ ಪ್ರಶ್ನೆಗೆ ಉತ್ತರ ಬಂದ ಕೂಡಲೇ ಇಲ್ಲಿ ತೆಗೆದುಕೊಳ್ಳುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಯಾವ ಪ್ರಶ್ನೆಗೆ ಎಷ್ಟು ಕಾಲದಲ್ಲಿ ಉತ್ತರ ಕೊಡಬೇಕು ಎಂಬುದನ್ನು ನಿರ್ಣಯಮಾಡಬೇಕು. ಷಾರ್ಟ್‌ನೋಟೀಸ್ ಪ್ರಶ್ನೆಗೆ ಸೆಕ್ರೆಟೇರಿಯಟ್ ಲೆವೆಲ್‌ನಲ್ಲಿ ಉತ್ತರ ದೊರೆಯುವಾಗ ಅದಕ್ಕೆ ಉತ್ತರ ಕೊಡಲು ತಿಂಗಳುಗಟ್ಟಲೇ ಬೇಕಾಗುತ್ತದೆಯೇ ಇಂಥಾ ಸನ್ನಿವೇಶದಲ್ಲಿ ಉದಾಸೀನ ಕಂಡುಬಂದರೆ ಅಧ್ಯಕ್ಷರು ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಮತ್ತು ಆದೇಶವನ್ನು ಕೊಡಬೇಕು ಎಂದು ನಾನು ಹೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಿ.—ಮಾನ್ಯ ಅಧ್ಯಕ್ಷಿಣಿಯವರೇ, ನಾನು 9-10 ಕಾಲ್ ಅಟೆನ್‌ಷನ್ ನೋಟಿಸ್‌ಗಳನ್ನು ಕೊಟ್ಟಿದ್ದೇನೆ. ರೆವಿನ್ಯೂ ಸಚಿವರ ಗಮನ ಸೆಳೆದಿದ್ದೇನೆ. 14 ಡಿಸ್ಟ್ರಿಕ್ಟ್‌ಗಳಿಗೆ ಅನ್ಯಾಯವಾಗಿದೆ.

ಅಧ್ಯಕ್ಷರು.—ತಾವು ದಯವಿಟ್ಟು ಕುಳಿತುಕೊಳ್ಳಬೇಕು. ತಾವು ಈ ರೀತಿ ಮಾಡಿದರೆ ತೊಂದರೆಯಾಗುತ್ತದೆ. ಕಾಲ್ ಅಟೆನ್‌ಷನ್ ನೋಟೀಸ್ ಸರ್ಕಾರದಿಂದ ಉತ್ತರ ಬಂದ ತಕ್ಷಣ ತೆಗೆದುಕೊಳ್ಳುತ್ತೇವೆ.

Mysore Land Reforms (Amendment) Bill, 1972—Motion to Consider

(Debate Continued)

ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷಿಣಿಯವರೇ, ನಾನು ನಿನ್ನೆ ಭೂಸುಧಾರಣಾ ವಿಧೇಯಕದ ಮೇಲೆ ಭಾಷಣ ಮಾಡುತ್ತಾ ಪಟ್ಟಣಗಳ ಹಾಗೂ ಹಳ್ಳಿಗಳ ಮಧ್ಯೆ ಆರ್ಥಿಕವಾಗಿಯಾಗಲೀ, ಸಾಮಾಜಿಕವಾಗಿಯಾಗಲೀ ಬಹಳ ವ್ಯತ್ಯಾಸಗಳು ಇವೆ ಎಂದು ಮಾತನಾಡುತ್ತಿದ್ದೆ. ಹಿಂದೆ ಜಮೀನ್ದಾರಿ ಪದ್ಧತಿ ರದ್ದಾಯಿತು. ಇನಾಂದಾರಿ ಪದ್ಧತಿ ರದ್ದಾಯಿತು. ಈಗ ನಮ್ಮ ಮುಂದೆ ಇರತಕ್ಕ ಸಮಸ್ಯೆ ಏನೆಂದರೆ ಭೂಸುಧಾರಣೆಯ ಸಮಸ್ಯೆ. 100 ಎಕರೆಗಳಿಗಿಂತ ಕಡಿಮೆ ವಿಸ್ತೀರ್ಣ ಇರತಕ್ಕಂಥಾ ಭೂಹಿಡುವಳಿದಾರರ ವಿಚಾರವಾಗಿ ನಾವು ಮಾತನಾಡಬೇಕಾಗಿದೆ. ಪಟ್ಟಣ ಹಾಗೂ ಹಳ್ಳಿಗಳ ಮಧ್ಯೆ ಸುಖ ಸೌಲಭ್ಯಗಳಲ್ಲಿ ಬಹಳ ಅಂತರ ಇದೆ. ಜಮೀನ್ದಾರಿ ಸಿಸ್ಟಂ ಹೋದರೆ ಪಟ್ಟಣಗಳಲ್ಲಿ ಬಂಡವಾಳ ಷಾಹಿಗಳು, ಕೋಟ್ಯಾಂತರ ರೂಪಾಯಿ ಆಸ್ತಿಯನ್ನು ಇಟ್ಟುಕೊಂಡಿರುವವರು ಒಂದು ಕಡೆ ಇದ್ದಾರೆ. ಮತ್ತೊಂದು ಕಡೆ ಕೋಟ್ಯಾಂತರ ಜನರು ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. ಇಂದು ನಾವು ಬಂಡವಾಳಶಾಹಿಗಳ ಬಗ್ಗೆ ಮಾತನಾಡುತ್ತಾ ಇಲ್ಲದಿದ್ದರೂ ಸಹ ಮಿಶ್ರಿಯ ನೀತಿಯನ್ನು ಎಲ್ಲ ರಾಜಕಾರಣಿಗಳು ಮಾತನಾಡುತ್ತಾ ಇದ್ದಾರೆ. ಅದರಲ್ಲೂ ಮುಖ್ಯವಾಗಿ ಎಲ್ಲ ರಾಜಕಾರಣಿಗಳು ಮಧ್ಯಮವರ್ಗದ ರೈತರಲ್ಲಿ ಐಶ್ವರ್ಯವೆಲ್ಲಾ ಕ್ರೋಢೀಕರಿಸಿದೆ, ಅದರ ಹಂಚಿಕೆಯಾಗಬೇಕಾಗಿದೆ ಎಂದು ಹೇಳುತ್ತಿದ್ದಾರೆ. ನನ್ನ ಒಂದು ಅನುಭವದಲ್ಲಿ ಹೇಳುವುದಾದರೆ, ನಮಗೆ ಸ್ವಾತಂತ್ರ್ಯ ಬಂದು 25 ವರ್ಷಗಳಾಗಿದ್ದರೂ ಸಹ, ರೈತರ ಸ್ಥಿತಿ ನಾವು ನಿರೀಕ್ಷೆ ಮಾಡಿದಷ್ಟು ಉತ್ತಮಗೊಂಡಿಲ್ಲ, ಅವರು ಬಹಳ ಹೀನ ಸ್ಥಿತಿಯಲ್ಲಿದ್ದಾರೆ, ಬಹಳ ಅಧೋಗತಿಯಲ್ಲಿದ್ದಾರೆಂದು

(ಶ್ರೀ ಎಚ್. ಬಿ. ಕೆಂಚೇಗೌಡ)

ಹೇಳಿದರೆ ಅತಿಶಯೋಕ್ತಿ ಅಲ್ಲ. ಸಾಧಾರಣವಾದಂಥ ಜೀವನವನ್ನು ಸಾಗಿಸುವುದು ಸಹ ರೈತನಾದವನಿಗೆ ಕಷ್ಟವಾಗಿದೆ. ನನ್ನ ತಾಲ್ಲೂಕಿನ ವಿಚಾರವನ್ನೇ ಹೇಳುವುದಾದರೆ, ನಾನು 6 ವರ್ಷ ಕಾಲ ತಾಲ್ಲೂಕ್ ಬೋರ್ಡಿನ ಅಧ್ಯಕ್ಷನಾಗಿ ಕೆಲಸ ಮಾಡಿ ಪ್ರತಿಯೊಂದು ಹಳ್ಳಿಗೂ ಹತ್ತಾರು ಸಲ ಹೋಗಿ ಪ್ರತಿಯೊಬ್ಬ ರೈತನ ಸ್ಥಿತಿಗತಿಗಳನ್ನು ನೋಡಿ ಮನಗಂಡಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಸುಮಾರು 50 ಸಾವಿರ ಎಕರೆಗಳವರೆಗೆ ತರೀ ಜಮೀನು ಇದ್ದು, ಅಕ್ಕಪಕ್ಕದ ತಾಲ್ಲೂಕ್‌ಗಳ ರೈತರಿಗಿಂತಲೂ ನಮ್ಮ ತಾಲ್ಲೂಕ್‌ನ ರೈತರು ಉತ್ತಮವಾಗಿದ್ದಾರೆಂದು ಹೇಳಬಹುದಾದರೂ ಸಹ, ಯಾವ ಒಬ್ಬ ರೈತನ ಮನೆಗೆ ಹೋಗಿ ನೋಡಿದರೂ ಸಹ, ಅವರ ಆರ್ಥಿಕ ಪರಿಸ್ಥಿತಿ ಪಟ್ಟಣಗಳಲ್ಲಿ ವಾಸ ಮಾಡುವ 3 ಮತ್ತು ನಾಲ್ಕನೇ ದರ್ಜೆಯ ನೌಕರರಿಗಿಂತ ಉತ್ತಮಗೊಂಡಿಲ್ಲ. ಈ ನೌಕರರು ಊಟ ಉಪಚಾರದಲ್ಲಿ ತೃಪ್ತಿಯಾಗಿರುವಂತೆ ಅವರು ತೃಪ್ತರಾಗಿಲ್ಲ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಮತ್ತೊಂದು ವಿಚಾರವೆಂದರೆ, ಯಾರು ಬೇರೆಯವರ ಸಹಾಯವಿಲ್ಲದೆ ವ್ಯವಸಾಯ ಮಾಡುತ್ತಾರೋ ಅಂತವರಿಗೆ ಮಾತ್ರ ಭೂಮಿ ಇರಬೇಕೆಂದು ನನ್ನ ಕೆಲವು ಸ್ನೇಹಿತರು ಮಾತನಾಡುವಾಗ ಹೇಳಿದರು. ಅದು ಸಾಧ್ಯವೇ ಎಂಬುದನ್ನು ನೋಡಬೇಕಾಗಿದೆ. ರೈತನ ಹೆಂಡತಿಯಾದವಳು ಅಡಿಗೆ ಕೆಲಸ ಮಾಡಬೇಕು, ಹೊಲಕ್ಕೆ ಹೋಗಿ ಕಳೆ ಕೀಳಬೇಕು, ಕಸವನ್ನು ಎತ್ತಿ ತಿಪ್ಪೆಗೆ ಹಾಕಬೇಕು, ರೈತನಾದವನು ಹೊಲವನ್ನು ಉಳಬೇಕು, ಬದು ಕಟ್ಟಬೇಕು ಮತ್ತು ಇತರೇ ಎಲ್ಲ ಕೆಲಸಗಳನ್ನು ಅವನೇ ಮಾಡಬೇಕು ಎಂದು ಹೇಳಿದರೆ ಹೇಗೆ ಸಾಧ್ಯ. ಇತರೇ ವೃತ್ತಿಯುಳ್ಳವರು ಎಲ್ಲ ಕೆಲಸಗಳನ್ನು ತಾವೇ ಮಾಡಿಕೊಳ್ಳುತ್ತಿದ್ದಾರೆಯೇ ಎಂಬುದನ್ನು ನೋಡಬೇಕಾಗಿದೆ. ಇಂದು ಅಧಿಕಾರಿಗಳೇ ಎಲ್ಲ ಕೆಲಸವನ್ನು ಮಾಡುತ್ತಿಲ್ಲ. ಅವರ ಕೈಕೆಳಗೆ ಗುಮಾಸ್ತರು, ಜವಾನರು ಕೆಲಸ ಮಾಡುತ್ತಾರೆ. ಅದರಂತೆ ಹೋಟೆಲ್ ಮಾಲೀಕರೇ ಎಲ್ಲ ತಿಂಡಿಗಳನ್ನು ತಯಾರುಮಾಡಿ ಗಿರಾಕಿಗಳಿಗೆ ಸಪ್ಲೈ ಮಾಡುವುದಿಲ್ಲ. ಹಲವಾರು ನೌಕರರನ್ನು ಇಟ್ಟುಕೊಂಡಿರುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಕ್ಷೌರವನ್ನು ತಾವೇ ಮಾಡಿಕೊಂಡರೂ ಸಹ, ಕಟಿಂಗನ್ನು ಸಹ ತಾವೇ ಮಾಡಿಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ. ಅಂದಮೇಲೆ ಯಾವ ಕೆಲಸ ಮಾಡಬೇಕಾದರೂ, ಎಲ್ಲವನ್ನು ತಾವೇ ಸ್ವಂತವಾಗಿ ನಿರ್ವಹಿಸುವುದಕ್ಕೆ ಸಾಧ್ಯವಿಲ್ಲ. ನಮ್ಮ ತಾಲ್ಲೋಕ್‌ನಲ್ಲಿ ಉನ್ನತಮಟ್ಟದಲ್ಲಿರತಕ್ಕಂಥ ರೈತರು ಸಹ ಕಾರನ್ನು ಇಟ್ಟುಕೊಂಡಿಲ್ಲ. ಒಬ್ಬರು ಮಾತ್ರ ಕಾರನ್ನು ಇಟ್ಟುಕೊಂಡಿದ್ದಾರೆ. ಅವರಿಗೆ 50 ಎಕರೆ ಜಮೀನು ಇದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಂದು 50 ಅಥವಾ 100 ಎಕರೆ ಜಮೀನು ಇರುವವರು ಸಹ 50 ಸಾವಿರ ಅಥವಾ ಒಂದು ಲಕ್ಷ ರೂಪಾಯಿಗಳನ್ನು ಸಂಪಾದನೆ ಮಾಡಿ ಇಡುವುದಕ್ಕೆ ಸಾಧ್ಯವಾಗಿಲ್ಲ. ಇಂದು ಯಾರಾದರು ಐಶ್ವರ್ಯವನ್ನು ಸಂಪಾದನೆ ಮಾಡಿದ್ದರೆ, ಅದನ್ನು ಸತ್ಯದಿಂದ ಮತ್ತು ನಿಷ್ಠೆಯಿಂದ ಸಂಪಾದನೆ ಮಾಡಿಲ್ಲ ಎಂದು ಹೇಳಬಹುದು. ಇಂದು ಪಟ್ಟಣಗಳಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಆಸ್ತಿ ಮಾಡಿರುವವರು ಬಹಳ ಮಂದಿ ಇದ್ದಾರೆ. ಇಷ್ಟೊಂದು ಹಣವನ್ನು ಅವರು ಯುದ್ಧದ ಸಮಯದಲ್ಲಿ ಮಾಡಿದ್ದಾರೆಂದು ಹೇಳಬಹುದು. ಆಕಸ್ಮಿಕ ಸನ್ನಿವೇಶಗಳು ಒದಗಿಬರದಿದ್ದರೆ ಹಣವನ್ನು ಸಂಪಾದನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಯಾವುದಾದರೂ ಸಾಮಾನುಗಳ ಮೇಲೆ ಕಂಟ್ರೋಲ್ ಬಂದಾಗ ಸಂಪಾದನೆ ಮಾಡಿರುವವರು ಇದ್ದಾರೆ. ನಾನು ಹತ್ತಾರು ವರ್ಷ ಕಾಲ ಬೆಂಗಳೂರಿನ ಬಳೇಪೇಟೆಯಲ್ಲಿ ಬಟ್ಟೆಗಳ ಹೋಲ್ ಸೇಲ್ ವ್ಯಾಪಾರವನ್ನು ಮಾಡುತ್ತಿದ್ದೆ. ಬಟ್ಟೆಗಳ ಮೇಲೆ ಕಂಟ್ರೋಲ್ ಬರುತ್ತದೆ ಎಂದು ತಿಳಿದುಬಂದಾಗ, ಕೆಲವರು ವರ್ತಕರು ತಮ್ಮಲ್ಲಿದ್ದ 500-600 ಬೇಲ್‌ಗಳಷ್ಟು ಬಟ್ಟೆಯನ್ನು ಬೇಲ್ ಒಂದಕ್ಕೆ 500 ರಿಂದ ಒಂದು ಸಾವಿರದವರೆಗೆ ಲಾಭಕ್ಕೆ ಮಾರಿ, ಒಂದೇ ದಿನದಲ್ಲಿ ಶ್ರೀಮಂತರಾದವರೂ ಸಹ ಇದ್ದಾರೆ. ಇದರ ಜೊತೆಗೆ ವ್ಯವಹಾರ ಮಾಡುವವರು, ವ್ಯಾಪಾರ ಮಾಡುವವರು ತಮ್ಮ ಒಟ್ಟು ಲೆಕ್ಕದಲ್ಲಿ ಶೇಕಡ 60—70ರಷ್ಟು ಲೆಕ್ಕವನ್ನು ಮುಚ್ಚಿಟ್ಟು, ಇನ್‌ಕಮ್ ಟ್ಯಾಕ್ಸ್ ಕೊಡುವುದನ್ನು ತಪ್ಪಿಸಿಕೊಂಡು ಶ್ರೀಮಂತರಾಗಿರುವವರೂ ಇದ್ದಾರೆ. ಸಂಪಾದನೆ ಮಾಡಿರುವ ಹಣವನ್ನು ಚಿನ್ನದ ರೂಪದಲ್ಲಿ ಇಟ್ಟಿರುವವರು ಸಹ ಇದ್ದಾರೆ. ಇಂತಹವರನ್ನು ಬಿಟ್ಟು, ಮಧ್ಯಮ ದರ್ಜೆಯಲ್ಲಿರುವ ರೈತರನ್ನು ತನಿಖೆ ಮಾಡುವುದಕ್ಕೆ ಹೊರಟಿದ್ದಾರೆ. ಈಗ ಅವರು ಸಾಮಾನ್ಯ ಸ್ಥಿತಿಯಲ್ಲಿದ್ದಾರೆ. ಅವರಲ್ಲಿರುವುದನ್ನು ಪಡೆದುಕೊಂಡರೆ ಸಮಾಜದ ಸುಧಾರಣೆಯಾಗುವುದಿಲ್ಲ. ಬಡತನ ಇನ್ನೂ ಜಾಸ್ತಿಯಾಗುತ್ತದೆ. ಭೂಸುಧಾರಣಾ ತಿದ್ದುಪಡಿ ವಿಧೇಯಕದ ಮೇಲೆ ಮಾತನಾಡುವಾಗ ಎಲ್ಲರೂ ಅದರ ಮಿತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಇಂದು ರಾಷ್ಟ್ರದ ಅಸ್ಥಿತ್ವಕ್ಕೆ ಅತ್ಯಂತ ಮಹತ್ವಪೂರ್ಣವಾದುದೆಂದರೆ ಭೂಮಿ. ಇದು ಒಂದು ಅಪರೂಪದ ಸಂಪನ್ಮೂಲ. ಇದರ ಮೇಲೆ ಆಡಳಿತ ನಿಯಂತ್ರಣ ಮತ್ತು ಸಾಮಾಜಿಕ ನಿಯಂತ್ರಣ ಇರಬೇಕಾದುದು ಅಗತ್ಯವಿದೆ. ಭೂಸುಧಾರಣೆಯ ಉದ್ದೇಶವೇನೆಂದರೆ,

ಮೊದಲನೆಯದು ಉತ್ಪಾದನೆ, ಎರಡನೆಯದು ಸಾಮಾಜಿಕ ನ್ಯಾಯ. ಇವೆರಡರಲ್ಲಿ ಮೊದಲನೆಯದಕ್ಕೆ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ವಿಶಾಲದೃಷ್ಟಿಯಿಂದ ನೋಡುವುದಾದರೆ, ಭೂಸುಧಾರಣೆಯಲ್ಲಿ ಅನೇಕ ಅಂಶಗಳು ಎದಕವಾಗಿವೆ. ಇಂದು ನಮ್ಮ ಮುಂದೆ ಜಮೀನುದಾರರ ವಿಷಯವಾಗಲೀ, ನೂರಾರು ಎಕರೆಗಳಷ್ಟು ಜಮೀನು ಇರುವ ಇನಾಂದ್ದಾರರ ವಿಷಯವಾಗಲಿ ಇಲ್ಲ. ಇವೊತ್ತು ನಮ್ಮ ಮುಂದೆ ಇರತಕ್ಕದ್ದು ಗೇಣಿದಾರರ ವಿಷಯ. ಗೇಣಿದಾರರು ತಾವೇ ಸ್ವಂತವಾಗಿ ವ್ಯವಸಾಯ ಮಾಡಿ ಆಹಾರಪದಾರ್ಥಗಳನ್ನು ಬೆಳೆದು, ತನ್ಮೂಲಕ ಜೀವನವನ್ನು ಮಾಡತಕ್ಕಂಥ ಮಾರ್ಗವನ್ನು ಕಂಡುಹಿಡಿಯಬೇಕಾಗಿದೆ. ಅವರ ಸ್ಥಿತಿಗತಿ ಎಷ್ಟರಮಟ್ಟಿಗೆ ಇರಬೇಕು ಎಂಬ ವಿಚಾರದಲ್ಲಿ ನಾವು ಮಾತನಾಡಬೇಕಾಗಿದೆ. ಗೇಣಿ ಕೊಡುವುದನ್ನು ರದ್ದುಪಡಿಸಿ, ಗೇಣಿದಾರರೇ ಭೂಮಾಲೀಕರಾಗಬೇಕು, ತನ್ಮೂಲಕ ಸಾಮಾಜಿಕ ನ್ಯಾಯ ದೊರಕಬೇಕು ಎಂಬುದರಲ್ಲಿ ಯಾವ ಬಿನ್ನಾಭಿಪ್ರಾಯವೂ ಇಲ್ಲ ಭೂ ಮಾಲೀಕತ್ವ ಎನ್ನುವುದರಲ್ಲಿ ಬಹಳ ಮುಖ್ಯವಾದುದು ಅವನ ಜಮೀನು, ಅದು ಅವನ ಸ್ವಂತದ್ದು ಎನ್ನುವುದು, ಅಂದ ಮೇಲೆ ಭೂಮಿಯ ಮೇಲೆ ಅವನಿಗೆ ಒಂದು ರೀತಿ ಅಭಿಮಾನ ಬರುತ್ತದೆ. ಇಂದು ನಿಜವಾಗಿಯೂ ಭೂಮಿಯ ಮೇಲೆ ಇರುವವರು ಬಹಳ ಬಡವರಾಗಿರುವವರು, ಇವರಿಗೆ ಬೇರೆ ಉದ್ಯೋಗಗಳಿಗೆ ಅವಕಾಶವಿಲ್ಲ. ಇಂತಹ ಜನರನ್ನು ಶೋಷಣೆ ಮಾಡುತ್ತಿದ್ದಾರೆ. ಇಲ್ಲಿ ಮಾತನಾಡುವಾಗ ಭೂ ಸ್ವಾಮಿಗಳ ಪರವಾಗಿ ಇಲ್ಲವೇ ಜಮೀನು ಇಟ್ಟುಕೊಂಡಿರುವವರ ಪರವಾಗಿ ಮಾತನಾಡುತ್ತಿದ್ದೇನೆ ಮತ್ತು ಅವರಿಂದ ಕಮಿಷನ್ ಪಡೆಯಲು ಮಾತಾಡುತ್ತೇನೆ ಎಂದು ನಮ್ಮ ಸ್ನೇಹಿತರು ತಿಳಿದುಕೊಂಡಿದ್ದರೆ ಅದು ತಪ್ಪು ಅಭಿಪ್ರಾಯ. ನಾನೇನೂ ಅಂತಹ ದೊಡ್ಡ ಭೂ ಮಾಲೀಕನಾಗಿಲ್ಲ. ಕೇವಲ ನನಗೆ ಇರತಕ್ಕದ್ದು 15 ಎಕರೆ ತರಿ ಭೂಮಿ ಮತ್ತು ಆರು ಎಕರೆ ಖುಷ್ಕಿ ಭೂಮಿ ಇದೆ, ಇದು ಕೂಡ ಒಂದೆ ಬೆಳೆ ಮಾಡುವ ಭೂಮಿ. ಡಬ್ಬಲ್ ಕ್ರಾಪ್ ಮಾಡುವ ಭೂಮಿ ಏನಲ್ಲ. ಇದನ್ನು ನಾನೇ ಸ್ವಂತವಾಗಿ ಹತ್ತಾರು ವರ್ಷಗಳಿಂದಲೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದೇನೆ. ಇದರಿಂದ ಎಷ್ಟು ಚೆನ್ನಾಗಿ ರೈತರು ಜೀವನ ಮಾಡುತ್ತಾರೆ ಎನ್ನುವುದನ್ನು ಹೇಳಲು ಇಲ್ಲಿ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರಾದ ಶ್ರೀ ಕಾಗೋಡು ತಿಮ್ಮಪ್ಪನವರು ನಿನ್ನೆ ಹೇಳುವಾಗ ಸುಮಾರು ಐದು ಎಕರೆಗಳಷ್ಟು ಭೂಮಿ ಇರಬಹುದು ಎನ್ನುವ ಮಾತನ್ನು ಇಲ್ಲಿ ಹೇಳಿದರು. ಅವರಿಗೆ ನಾನು ಇಲ್ಲಿ ಒಂದು ಪ್ರಶ್ನೆ ಕೇಳಬೇಕಾಗಿದೆ. ಈಚೆಗೆ ನಾವೆಲ್ಲರೂ ಶರಾವತಿಗೆ ಪ್ರವಾಸ ಹೋಗಿದ್ದಾಗ ಶ್ರೀಮಾನ್ ತಿಮ್ಮಪ್ಪನವರ ಮನೆಗೂ ಹೋಗಿ ನೋಡಿದ್ದೇನೆ. ಅವರ ಮನೆ ನೋಡಿದ ಮೇಲೆ ಅವರು ಯಾವ ಆದಾಯದಿಂದ ಇಂತಹ ಮನೆಯನ್ನು ಕಟ್ಟಿದ್ದಾರೆ ಎನ್ನುವುದೇ ಒಂದು ಪ್ರಶ್ನೆಯಾಗಿದೆ, ಎರಡನೇದು ಅವರು ಸಾಯಂಕಾಲದ ವೇಳೆಯಲ್ಲಿ ಮಾಡುವ ಅಡಂಬರದ ಖರ್ಚುಗಳು ಯಾವ ರೀತಿ ಬರುತ್ತವೆ ಮತ್ತು ಯಾವ ರೀತಿ ಸಂಪಾದನೆ ಮಾಡುತ್ತಾರೆ ಎನ್ನುವುದೇ ಒಂದು ಪ್ರಶ್ನೆ. ಇದನ್ನು ಏತಕ್ಕಾಗಿ ಇಲ್ಲಿ ಹೇಳುತ್ತೇನೆ ಎಂದರೆ ನಿನ್ನೆ ಇಲ್ಲಿ ನಾನು ಹೇಳಿದ ಮಾತುಗಳನ್ನು ಮತ್ತೆ ರಿಪೀಟ್ ಮಾಡಿ ಹೇಳಬೇಕಾಗಿದೆ. ಎಲ್ಲರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕು ಎನ್ನುವುದೇ ಸಮಾಜ ವಾದದ ನೀತಿ. ಇಂತಹ ಸಾಮಾಜಿಕ ನೀತಿಯನ್ನು ಹೇಗೆ ಪಡೆಯುತ್ತಿದ್ದಾರೆ ಎನ್ನುವುದಾಕ್ಕಾಗಿ ನಾನು ಇಲ್ಲಿ ಹೇಳುತ್ತಿದ್ದೇನೆ. ಇಂದು ದೇಶದಲ್ಲಿ ವಾಸ್ತವವಾಗಿ ಇರುವ ರೈತರ ಸ್ಥಿತಿ ಅವನಿಗಿರುವ ವಸತಿ ಸೌಕರ್ಯಗಳು ಇತ್ಯಾದಿ ಇವೆಲ್ಲವೂ ಈಗ ತಂದಿರುವ ಭೂಸುಧಾರಣೆ ಮಸೂದೆಯಲ್ಲಿ ಪಡೆಯಲು ಸಾಧ್ಯವೇ ಎನ್ನುವುದನ್ನು ಇಲ್ಲಿ ಪ್ರಶ್ನೆ ಮಾಡಬೇಕಾಗಿದೆ. ಸೋಷಿಯಲಿಸಂ ತತ್ವ ಇರುವುದು ಎಲ್ಲರಿಗೂ ಇದನ್ನು ಅನ್ವಯಿಸಬೇಕು ಎಂದೇ ಇಂದು ಶೇಕಡಾ 70—80 ಜನರು ಇರುವಷ್ಟು ರೈತರು ಭೂಮಿ ಮಾಡುವವರು ಇಂದು ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ವೋಟು ಕೊಟ್ಟು ಇಲ್ಲಿಗೆ ಆರಿಸಿ ಅವರಿಗೆ ಅಧಿಕಾರ ಕೊಟ್ಟು ರೈತರ ಹಿತವನ್ನು ಕಾಪಾಡಬೇಕೆಂದೇ ಇಲ್ಲಿ ಹೇಳುತ್ತಿರುವುದು. ಇಂತಹ ರೈತರ ಸಹಾಯವಿಲ್ಲದ ಪಕ್ಷದಲ್ಲಿ ಇಂದು ಇವರು ಆಡಳಿತ ಮಾಡುತ್ತಿರಲಿಲ್ಲ. ನಮ್ಮ ಸರ್ಕಾರದವರು ರೈತರ ಆರ್ಥಿಕ ಸ್ಥಿತಿ ಎಷ್ಟು ಇರಬೇಕು ಎನ್ನುವುದನ್ನು ನಿರ್ಧಾರ ಮಾಡಿಕೊಂಡು ಹೇಳುತ್ತಾರೆ, ಇದಕ್ಕೆ ಮಿತಿ ಯಾವ ರೀತಿ ಇರಬೇಕೆನ್ನುವುದನ್ನು ವಿಚಾರ ಮಾಡುವಾಗ ಇದೇ ರೀತಿ ಇನ್ನಿತರ ವರ್ಗಗಳ ಎಂದರೆ ಸಿನಿಮಾ ಮಾಲೀಕರುಗಳ ಹಾಗೂ ಹೋಟೆಲ್ ಮಾಲೀಕರುಗಳ ವರಮಾನ ಮತ್ತು ಸುಮಾರು ಮೂರು ಸಾವಿರ ರೂಪಾಯಿಗಳ ಸಂಬಳವನ್ನು ಸೂಪರ್‌ಟೈಂ ಸ್ಕೇಲ್‌ನಲ್ಲಿ ಪಡೆಯುತ್ತಿರುವ ಉದ್ಯೋಗಿಗಳ ಬಗ್ಗೆ ಇದುವರೆಗೆ ಯಾರೂ ಕೈ ಹಾಕಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಇದನ್ನು ತಿವಿದು ತಿವಿದು ನಿಮ್ಮ ಪಕ್ಷದವರಿಗೆ ಚೆನ್ನಾಗಿ ತಿಳಿಸಿ, ಹೇಳಿ.

ಶ್ರೀ ಹೆಚ್. ಬಿ. ಕೆಂಚೇಗೌಡ.—ಇಂದು ಹೋಟೆಲು ಮಾಲೀಕರು ಯಾವ ರೀತಿಯಾದ ಆಡಂಬರದ ಜೀವನ ಮಾಡುತ್ತಿದ್ದಾರೆ ಮತ್ತು ಸಿನಿಮಾ ಮಾಲೀಕರು ಯಾವ ರೀತಿ ಜೀವನ ಮಾಡುತ್ತಿ

(ಶ್ರೀ ಹೆಚ್. ಬಿ. ಕೆಂಚೇಗೌಡ)

ದ್ದಾರೆ, ಇವರಿಗೆ ಯಾವ ಮಿತಿಯನ್ನು ಇನ್ನೂ ಮಾಡಿಲ್ಲ. ಎಲ್ಲರಿಗೂ ಸರಿಸಮಾನವಾದ ಆರ್ಥಿಕ ಸ್ಥಿತಿ ಇರಬೇಕೆಂದು ಹೇಳುವಾಗ ಸಾಮಾಜಿಕ ನ್ಯಾಯವನ್ನು ಎಲ್ಲರಿಗೂ ದೊರಕಿಸಿ ಕೊಡಬೇಕು. ಶ್ರೀಮಂತರು ಹಾಗೂ ಬಡವರಲ್ಲಿರುವ ಅಂತರವನ್ನು ಕಡಿಮೆ ಮಾಡಬೇಕೆಂದಾದರೆ ಇಂದು ನಾವು ಭೂಸುಧಾರಣೆ ತಿದ್ದುಪಡಿ ಮಸೂದೆ ತರುವಾಗ ಈ ಅಂಶವನ್ನೂ ಗಮನದಲ್ಲಿಟ್ಟುಕೊಂಡು ಇದನ್ನೂ ಮಿತಿಗೊಳಿಸಬೇಕು, ಇದಕ್ಕಾಗಿ ರೈತನ ಆರ್ಥಿಕ ಸ್ಥಿತಿಯನ್ನೂ ತಗೆದುಕೊಂಡು ಕನಿಷ್ಠವಾದ ಭೂಮಿತಿಯನ್ನು ಹಿಡುವಳಿ ಮಾಡುವಾಗ ಪ್ರಾಮಾಣಿಕವಾಗಿ ಹೊಂದಿಕೊಂಡಿರುವಂತೆ ಮಾಡಬೇಕು. ಕನಿಷ್ಠ ಮಿತಿಯನ್ನು ರೈತರ ಬಗ್ಗೆ ವ್ಯವಸ್ಥೆ ಮಾಡಿ ಎಷ್ಟು ಇರಬೇಕೆಂದು ಮಾಡುವಾಗ ಇತರೇ ವರ್ಗಗಳಲ್ಲಿರುವ ಜನರ ಆದಾಯ ಯಾವ ರೀತಿ ಇದೆ, ಅವರ ಆರ್ಥಿಕ ಸ್ಥಿತಿ ಹೇಗಿದೆ ಎನ್ನುವುದನ್ನೆಲ್ಲಾ ಗಮನಕ್ಕೆ ತಗೆದುಕೊಂಡು ಎಲ್ಲರಿಗೂ ಸರಿಸಮಾನವಾದ ಸೌಲಭ್ಯವನ್ನು ಮಾಡಿಕೊಡಬೇಕು ಎನ್ನುವುದೇ ನಮ್ಮ ಮುಂದಿರುವ ವಾದ. ಇಂದು ಸರಕಾರದ ನೌಕರರುಗಳಿಗೆ ಯಾವ ರೀತಿ ಆದಾಯ ಬರುತ್ತಿದೆಯೋ ಅದರ ಹೋಲಿಕೆಮಾಡಿ ರೈತರ ಆರ್ಥಿಕ ಸ್ಥಿತಿಯನ್ನೂ ತುಲನೆ ಮಾಡಿ ನೋಡಿದರೆ ಎಲ್ಲರಿಗೂ ಸರಿಸಮಾನವಾದ ಮಿತಿಯನ್ನು ಇರುವಂತೆ ಮಾಡಬೇಕು, ಎರಡು ವರ್ಗಗಳಲ್ಲೂ ಹೆಚ್ಚು ಅಂತರ ಇರುವ ಹಾಗೆ ಮಾಡ ಬಾರದು. ನಾನೆ ಸ್ವತಃ ರೈತನಾಗಿರುವುದರಿಂದ ಇಂದು ರೈತರ ಸ್ಥಿತಿ ಯಾವ ರೀತಿ ಅಧೋಗತಿಗೆ ಇಳಿದಿದೆ ಎನ್ನುವುದಕ್ಕಾಗಿ ಇಲ್ಲಿ ಹೇಳುತ್ತಿದ್ದೇನೆ. ಇಂತಹ ಸಂದರ್ಭದಲ್ಲಿ ಭೂಸುಧಾರಣೆಯನ್ನು ವಿಚಾರ ಮಾಡುವಾಗ ಹೇಳುವುದಾದರೆ ನಮ್ಮ ಇಂಡಿಯಾ ದೇಶದಲ್ಲಿ ಸುಮಾರು ನೂರರಲ್ಲಿ 70-75 ಜನರು ಬರೀ ಭೂಮಿಯ ಮೇಲೇ ಅವಲಂಬನೆ ಮಾಡಿಕೊಂಡಿದ್ದಾರೆ. ಇವತ್ತಿನವರಿಗೂ ಭೂಮಿಯನ್ನು ಹಂಚಿ ಬಡತನವನ್ನು ನಿವಾರಣೆ ಮಾಡಿ ಎಲ್ಲರಿಗೂ ಸರಿಸಮಾನವಾದ ನ್ಯಾಯವನ್ನು ದೊರಕಿಸಿಕೊಡಲು ಸಾಧ್ಯವೇ ? ಇದನ್ನು ವಿಚಾರಮಾಡಬೇಕು. ಇಂತಹ ಸಂದರ್ಭದಲ್ಲಿ ಭೂಮಿಯನ್ನು ಮಿತಿಗೊಳಿಸುವಾಗ ಇವೆಲ್ಲಾ ವಿಚಾರಗಳನ್ನೂ ಪರಿಶೀಲನೆ ಮಾಡತಕ್ಕದ್ದು ಅಗತ್ಯವಾಗಿದೆ. ಇತರ ವರ್ಗಗಳಲ್ಲಿ ಎಂದರೆ ಹೋಟೆಲು ಮಾಲೀಕರುಗಳ ಹಾಗೂ ಸಿನಿಮಾ ಮಾಲೀಕರುಗಳ ಆದಾಯದೊಡನೆ ರೈತರ ಆರ್ಥಿಕ ಸ್ಥಿತಿಯನ್ನೂ ಹೋಲಿಸಿ ನೋಡಿದರೆ ಆರ್ಥಿಕವಾಗಿ ಹಿಂದುಳಿದಿರುವ ಬಡವರು ಬಡವರಾಗಿಯೇ ಇದ್ದಾರೆ, ಇವರು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಇನ್ನೂ ಹಿಂದುಳಿದಿದ್ದಾರೆ, ಆದರೆ ಹೆಚ್ಚಿನ ಜನಸಂಖ್ಯೆ ಇದರಲ್ಲಿರುವುದು ಇತರ ವರ್ಗಗಳಲ್ಲಿರುವ ಸಂಪಾದನಾ ಶಕ್ತಿ ಇವರಿಗಿಲ್ಲ. ಇಂತಹವರ ಕಷ್ಟಗಳನ್ನು ನಿವಾರಣೆ ಮಾಡಿ ಸಾಧಾರಣವಾಗಿ ಜೀವನ ಮಾಡಲು ಅವಕಾಶ ಮಾಡಿಕೊಡುವುದರಲ್ಲಿ ಈ ಭೂಸುಧಾರಣೆ ಇನ್ನೂ ಅಪೂರ್ಣವಾಗಿದೆ.

3-00 P.M.

ಅಮೇರಿಕಾ ಮುಂತಾದ ದೇಶಗಳಲ್ಲಿ ಕೇವಲ 10 ಪರ್ಸೆಂಟ್ ಜನರು ಮಾತ್ರ ವ್ಯವಸಾಯದಲ್ಲಿ ತೊಡಗಿದ್ದಾರೆ. ಆದರೆ ಇಲ್ಲಿ 70 ರಷ್ಟು ಜನರಿದ್ದಾರೆ. ಈ ಹೊತ್ತು ನಮ್ಮಲ್ಲಿರತಕ್ಕ ವ್ಯವಸಾಯಕ್ಕೆ ಯೋಗ್ಯವಾಗಿರುವ ಎಲ್ಲ ಜಮೀನನ್ನು ಇರುವ ಎಲ್ಲ ಜನರಿಗೂ ಹಂಚುವುದಕ್ಕೆ ಸಾಧ್ಯವೇ? ನಮ್ಮ ರಾಜ್ಯದಲ್ಲಿ ಸುಮಾರು 80 ಲಕ್ಷ ಭೂಹೀನರಿದ್ದಾರೆ. ಅವರೆಲ್ಲರಿಗೂ ಹೆಚ್ಚುವರಿ ಜಮೀನನ್ನು ಹಂಚಲು ಸಾಧ್ಯವೇ ? ಆ ರೀತಿ ಹಂಚಿದ ತಕ್ಷಣ ಬಡತನವನ್ನು ಪೂರ್ಣವಾಗಿ ನಿರ್ಮೂಲ ಮಾಡುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಬರುತ್ತದೆ.

ನಮ್ಮ ಸರ್ಕಾರದವರ ಅಂಕಿ ಅಂಶಗಳ ಪ್ರಕಾರವೇ, ಪ್ರಜಾಪ್ರಭುತ್ವ ಅಸ್ತಿತ್ವಕ್ಕೆ ಬಂದು ಆಡಳಿತ ನಮ್ಮ ಕೈಯಲ್ಲಿ ಬಂದ ನಂತರ ಸುಮಾರು ಒಂಬತ್ತು ಲಕ್ಷ ಎಕರೆ ಜಮೀನನ್ನು ಭೂಹೀನರಿಗೆ ಹಂಚಿದ್ದಾರೆ. ಅದರಲ್ಲಿ ಅನೇಕರು ಅವರಿಗೆ ಹಂಚಿದ ಭೂಮಿಯನ್ನು ಮಾರಿಕೊಂಡಿದ್ದಾರೆ. ಹಾಗೆಕೊಟ್ಟ ಭೂಮಿಯನ್ನು ನಿರ್ವಹಿಸತಕ್ಕ, ಅದನ್ನು ಉತ್ತಮಗೊಳಿಸತಕ್ಕ, ಅದರಲ್ಲಿ ಉತ್ಪಾದನೆ ಮಾಡಿ ಸಂಪಾದನೆ ಮಾಡತಕ್ಕ ಶಕ್ತಿ ಅವರಿಗೆ ಇಲ್ಲದೆ ಇರುವುದರಿಂದ ಅವರು ಜಮೀನನ್ನು ಮಾರಿಕೊಂಡಿದ್ದಾರೆ ಎಂದು ಹೇಳಬಹುದು. ಭೂಸುಧಾರಣೆಯಿಂದಲೇ ನಾವು ಬಡತನವನ್ನು ನಿರ್ಮೂಲ ಮಾಡುತ್ತೇವೆಂದು ಹೇಳುವುದಕ್ಕೆ ಸಾಧ್ಯವಿಲ್ಲ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ.

ಭೂಮಿಯನ್ನು ಮಿತಿಗೊಳಿಸುವಾಗ ಕನಿಷ್ಠ ಮಿತಿ ಎಷ್ಟು ಇರಬೇಕು, ಐದು ಜನರಿರುವ ಸಂಸಾರಕ್ಕೆ ಎಷ್ಟು ಮಟ್ಟದ ಆದಾಯವನ್ನು ಅದು ಕೊಡಬಲ್ಲದು, ಎನ್ನುವುದನ್ನು ತೀರ್ಮಾನ ಮಾಡಬೇಕು. ಗರಿಷ್ಠ ಮಿತಿ ಎಷ್ಟು ಇರಬೇಕು ಎಂದು ಹೇಳುವಾಗ ನಾವು ಎಷ್ಟು ನಿಗದಿ ಮಾಡುತ್ತೇವೆ ಅಷ್ಟನ್ನು ಎಲ್ಲರಿಗೂ ಕೊಡುವುದಕ್ಕೆ ಸಾಧ್ಯವಿಲ್ಲ . ವ್ಯವಸಾಯವನ್ನೇ ವೃತ್ತಿಯಾಗಿ

ಇಟ್ಟುಕೊಂಡಿರುವವರು ವ್ಯವಸಾಯದಿಂದ ಎಷ್ಟು ಸಂಪಾದನೆ ಮಾಡುವುದಕ್ಕೆ ಅವಕಾಶವಿದೆ ಎಂದು ನೋಡಿಕೊಂಡು, ಎಲ್ಲರಿಗೂ ಎಷ್ಟು ಜಮೀನನ್ನು ಹಂಚುವುದಕ್ಕೆ ಸಾಧ್ಯ, ಕನಿಷ್ಠ ಮಿತಿ ಎಷ್ಟು ಇರಬೇಕು, ಗರಿಷ್ಠ ಮಿತಿ ಎಷ್ಟು ಇರಬೇಕು, ಎಂದು ತೀರ್ಮಾನವಾದ ಮೇಲೆ, ಭೂಮಿಯಿಂದ ಎಷ್ಟು ಉತ್ಪಾದನೆ ಬಂತು ಎಂದು ತೀರ್ಮಾನವಾದ ಮೇಲೆ, ಉಳಿದವರಿಗೆ ಬೇರೆ ರೀತಿಯ ಏರ್ಪಾಡನ್ನು ಮಾಡಬೇಕೇ ವಿನಾ, ಪ್ರತಿಯೊಬ್ಬರಿಗೂ ಭೂಮಿಯನ್ನು ಕೊಡುವುದರಿಂದ ಗರೀಬಿ ಹಟಾವೋ ಆಗುವುದಕ್ಕೆ ಬದಲಾಗಿ ಗರೀಬಿ ಬಢಾವೋ ಆಗುತ್ತದೆ ಎಂದು ನಾನು ಹೇಳಬಯಸುತ್ತೇನೆ.

ಈ ಹೊತ್ತಿನ ದಿವಸ ಭಾರತದ ಕೃಷಿಕ ಬಲ ಹೀನ, ಅವನು ಮೂಕ, ರಾಜಕೀಯವಾಗಿಯಾಗಲೀ ಆರ್ಥಿಕವಾಗಿಯಾಗಲೀ ಶೋಷಣೆಗೆ ಒಳಗಾಗಿರುವ ಪಶು ಇದ್ದಹಾಗೆ ಇದ್ದಾನೆ. ಎಲ್ಲರೂ ಅವನನ್ನು ಶೋಷಣೆ ಮಾಡುತ್ತಿದ್ದಾರೆ. ಜಮೀನನ್ನು ಉತ್ತು ಬೀಜ ಹಾಕಿದ ಕೂಡಲೇ ಹುಳ ಹುಪ್ಪಟೆ ಬರುತ್ತವೆ, ಅನಂತರ ಸರಿಯಾಗಿ ಮಳೆ ಬೀಳದೆ ಪೈರು ಮತ್ತು ಬೆಳೆ ಸರಿಯಾಗಿ ಬರುವುದಿಲ್ಲ, ಕೊನೆಯದಾಗಿ ಸರ್ಕಾರದವರು ಫೋರ್ಸ್ ಮಾಡಿ ಅವನಲ್ಲಿರುವ ಬೆಳೆಯನ್ನು ಮಾರುಕಟ್ಟೆ ದರ ಏನಿರುತ್ತದೆ ಅದಕ್ಕಿಂತ ಕಡಮೆ ದರದಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಶೋಷಣೆ ಅವರಿಗೆ ತಪ್ಪಿಲ್ಲ. ಅವನನ್ನು ಎಲ್ಲರೂ ಶೋಷಣೆ ಮಾಡುವುದು ತಪ್ಪಬೇಕು. ವ್ಯವಸಾಯದಲ್ಲಿ ತೊಡಗಿರುವವನು ಎಲ್ಲಿಯವರೆಗೆ ಉತ್ಪಾದನೆಯನ್ನು ಜಾಸ್ತಿ ಮಾಡುವುದಿಲ್ಲ ಅಲ್ಲಿಯವರೆಗೆ ನಮ್ಮ ದೇಶದ ಆಹಾರ ಸಮಸ್ಯೆ ನಿವಾರಣೆಯಾಗುವುದಿಲ್ಲ. ಎಲ್ಲರಿಗೂ ಗೊತ್ತಿರುವ ಹಾಗೆ ರೈತನಿಗೆ ಇರುವ ಹೊಡೆತ ಬೇರೆಯವರಿಗೆ ಇಲ್ಲ. ಕ್ಷಾಮ ಡಾಮರಗಳ ಹೊಡೆತ ರೈತನನ್ನು ಬಿಟ್ಟು ಇನ್ನು ಬೇರೆ ಯಾರಿಗೂ ಬರುವುದಿಲ್ಲ. ಇದು ರೈತನಿಗೆ ಮಾತ್ರ ಸೀಮಿತವಾಗಿದೆ. ರೈತನ ಸ್ಥಿತಿ ಬಹಳ ಆತಂಕಕಾರಿಯಾಗಿರುತ್ತದೆ. ನಾವು ಆಹಾರದಲ್ಲಿ ಸ್ವಪರಿಪೂರ್ಣತೆಯನ್ನು ಪಡೆಯಬೇಕಾದರೆ ರೈತನ ಸ್ಥಿತಿ ಉತ್ತಮವಾಗಬೇಕು ಮತ್ತು ವ್ಯವಸಾಯದ ಉತ್ಪಾದನೆ ಜಾಸ್ತಿಯಾಗಬೇಕು. ಇದಕ್ಕೆ ಮನಸ್ಸು ಹಚ್ಚಬೇಕು ಅಂದ ಮೇಲೆ ವ್ಯವಸಾಯವನ್ನು ಆಧುನೀಕರಿಸಬೇಕು. ನಮಗೆ ಹೆಚ್ಚು ಉತ್ಪಾದನೆ ಬೇಕಾಗಿದ್ದಲ್ಲಿ ಆಧುನಿಕ ರೀತಿಯಲ್ಲಿ ವ್ಯವಸಾಯವನ್ನು ಕೈಕೊಳ್ಳಬೇಕು. ವಿದ್ಯಾವಂತ ಯುವಕರು ಎಲ್ಲಿಯವರೆಗೆ ವ್ಯವಸಾಯವನ್ನು ಕೈಕೊಳ್ಳುವುದಿಲ್ಲ ಅಲ್ಲಿಯವರೆಗೆ ನಾವು ಅಧಿಕವಾದ ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ನಾವು ಏನು ಭೂಸುಧಾರಣೆಯನ್ನು ಮಾಡುತ್ತಿದ್ದೇವೆ ಅದು ವಿದ್ಯಾವಂತ ಯುವಕರನ್ನು ವ್ಯವಸಾಯಕ್ಕೆ ಆಕರ್ಷಿಸುವಂತೆ ಇರಬೇಕು. ಅಂದ ಮೇಲೆ ಉತ್ಪಾದನೆ ಜಾಸ್ತಿ ಮಾಡಬೇಕಾದರೆ ವ್ಯವಸಾಯ ಪದ್ಧತಿಯನ್ನು ಆಧುನೀಕರಿಸಬೇಕು. ಇತರ ದೇಶಗಳಲ್ಲಿ ಈ ಹೊತ್ತು ಆಹಾರವನ್ನು ತಾವು ಬೆಳೆದು ಬೇರೆ ದೇಶಗಳಿಗೂ ಕಳುಹಿಸುತ್ತಿದ್ದಾರೆ. ಹೀಗಿರುವಾಗ ಈ ಯಾಂತ್ರಿಕ ಯುಗದಲ್ಲಿ ನಾವು ಕಣ್ಣುಮುಚ್ಚಿಕೊಂಡು ಉತ್ಪಾದನೆ ವಿಚಾರದಲ್ಲಿ ಯೋಜನೆ ಮಾಡದೆ ಯಾವುದೋ ರೀತಿಯ ಹಳೇ ಪದ್ಧತಿಯನ್ನು ಅನುಸರಿಸುವುದು ಸರಿಯೇ ಎಂದು ಯೋಚನೆ ಮಾಡಬೇಕಾಗಿದೆ. ಇನ್ನು ಮುಂದೆ ಉತ್ಪಾದನೆ ಜಾಸ್ತಿಯಾಗಬೇಕಾದರೆ, ವ್ಯವಸಾಯ ಪದ್ಧತಿಯನ್ನು ಆಧುನೀಕರಿಸಬೇಕಾಗಿದ್ದರೆ ಮತ್ತು ಯಾಂತ್ರೀಕರಣ ಮಾಡಬೇಕಾಗಿದ್ದರೆ ವಿದ್ಯಾವಂತ ಯುವಕರು ವ್ಯವಸಾಯವನ್ನು ಕೈಗೊಳ್ಳಬೇಕಾಗಿದೆ. ಈ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನಾವು ಭೂ ಮಿತಿಯ ಬಗ್ಗೆ ವಿಚಾರ ಮಾಡಬೇಕು.

ಈ ವ್ಯವಸಾಯಗಾರನ ನಿವ್ವಳ ಆದಾಯ ಬದಲಾವಣೆ ಹೊಂದಲು ಸಾಧ್ಯ ಇದೆ. ಎಲ್ಲವನ್ನೂ ಲೆಕ್ಕಾಚಾರವನ್ನೂ ಇಟ್ಟುಕೊಂಡು ಮಾಡುವ ವ್ಯವಹಾರವಲ್ಲ. ಲೆಕ್ಕಾಚಾರಕ್ಕೆ ಇಟ್ಟುಕೊಳ್ಳದೇ ಇರುವ ವ್ಯವಹಾರಗಳೂ ಅನೇಕ ಇವೆ. ಒಂದು ಉದಾಹರಣೆ ಹೇಳುವುದಾದರೆ ಒಬ್ಬ ಮನುಷ್ಯ ಒಂದು ವೃತ್ತಿಗೆ 1 ಲಕ್ಷವೋ, 2 ಲಕ್ಷವೋ ಅಥವಾ 3 ಲಕ್ಷವೋ ಬಂಡವಾಳ ಹಾಕಿದರೆ ಆ ಬಂಡವಾಳದ ಜೊತೆಗೆ ಅವರ ಬಡ್ಡಿಯನ್ನೂ ಎಷ್ಟು ಬರುತ್ತದೆ ಎಂದು ಲೆಕ್ಕ ಹಾಕುತ್ತಾನೆ. ಒಂದು ಕಡೆ ಈ ಜಮೀನು ಮಾರುವುದಾದರೆ ಎಷ್ಟು ಹಣ ಬರುತ್ತದೆ. ಅದನ್ನು ಬ್ಯಾಂಕ್‌ನಲ್ಲಿ ಇಟ್ಟರೆ ಎಷ್ಟು ಬಡ್ಡಿ ಬರುತ್ತದೆ ಎಂದು ಲೆಕ್ಕ ಹಾಕುತ್ತಾನೆ. ಇನ್ನೊಂದು ಕಡೆ ಈ ಜಮೀನಿನಲ್ಲಿ ವ್ಯವಸಾಯ ಮಾಡಿದರೆ, ಆಳು ಕಾಳುಗಳ ಸಂಬಳ, ಜಾನುವಾರಗಳ ಖರ್ಚು, ವ್ಯವಸಾಯಕ್ಕೆ ಬೇಕಾಗಿರತಕ್ಕಂಥ ಯಂತ್ರೋಪಕರಣಗಳ ಮೇಂಟೇನನ್ಸ್ ಖರ್ಚು ಇವೆಲ್ಲಾ ಕಳೆದು ಎಷ್ಟು ಉಳಿಯುತ್ತದೆ ಎಂದು ಲೆಕ್ಕ ಹಾಕುತ್ತಾನೆ. ಇದೂ ಅಲ್ಲದೆ ಅನೇಕ ಸಾರಿ ರೈತ ಅನಿರೀಕ್ಷಿತವಾದ ಕೆಲವು ದುರಂತಕ್ಕೆ ಸಿಕ್ಕಿ ಹಾಕಿಕೊಳ್ಳಬೇಕಾಗುತ್ತದೆ. ಅಂದರೆ ಚಂಡಮಾರುತದ ಹಾವಳಿಗೆ ಅತಿವೃಷ್ಟಿ ಅನಾವೃಷ್ಟಿ ಇವೆಲ್ಲಾ ಬರುತ್ತದೆ. ಈ ರೀತಿಯಾಗಿ ಈ ಖರ್ಚನ್ನೆಲ್ಲಾ ಕಳೆದು ನೋಡಿದರೆ ಅವನಿಗೆ ಎಷ್ಟು ಆದಾಯ ಬರುತ್ತದೆ ಎಂದು ನಿಗದಿ ಮಾಡಲಿಕ್ಕೆ ಅವನಿಗೆ ಇಂತಿಷ್ಟೇ ಭೂಮಿ ಇರಬೇಕು ಎಂದು ನಿಗದಿ ಮಾಡಬೇಕೆಂದು ಹೇಳುತ್ತೇನೆ.

(ಶ್ರೀ ಹೆಚ್. ಟಿ. ಕೆಂಚೇಗೌಡ)

ಉದಾಹರಣೆಗೆ ಹೇಳುವುದಾದರೆ ಈಗ ಒಬ್ಬ ಮನುಷ್ಯನಿಗೆ 18 ಎಕರೆ ನಿಗದಿ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಆ ರೈತ ಆ 18 ಎಕರೆಗಳಲ್ಲೂ ಕೂಡ ಪೂರ್ಣ ಉತ್ಪತ್ತಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಹೇಗೆಂದರೆ ಗದ್ದೆಯಲ್ಲಿ ಭತ್ತವನ್ನು ಹಾಕಬೇಕಾದರೆ ಅದರ ಬದಿಗೆ 1½–2 ಎಕರೆ ಹೋಗುತ್ತದೆ, ಅವನ ಎತ್ತು ಕರುಗಳಿಗೆ ಹಸಿರು ಮೇವನ್ನು ಹಾಕಬೇಕಾಗಿರುವುದರಿಂದ ಅದಕ್ಕೆ ಒಂದೆರಡು ಎಕರೆ ಇಟ್ಟುಕೊಳ್ಳಬೇಕಾಗುತ್ತದೆ. ಮತ್ತು ವ್ಯವಸಾಯದ ಗೊಬ್ಬರಕ್ಕಾಗಿ, ವ್ಯವಸಾಯದ ಯಂತ್ರೋಪಕರಣಗಳನ್ನು ಇಡುವುದಕ್ಕಾಗಿ ಸ್ವಲ್ಪ ಸ್ಥಳಾವಕಾಶವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಇಷ್ಟೂ ಅಲ್ಲದೆ ಎಲ್ಲಾ ಭೂಮಿಯೂ ಚೆನ್ನಾಗಿರುವುದಿಲ್ಲ, ಕೆಲವು ಕರಳು ಭೂಮಿಯೂ ಇರುತ್ತೆ, ಆದ ದರಿಂದ ಇವೆಲ್ಲಾ ಲೆಕ್ಕಾಚಾರ ಹಾಕಿ ನೋಡಿದರೆ ಒಬ್ಬ ರೈತನಿಗೆ 18 ಎಕರೆ ಇರಬೇಕೆಂದು ನಿಗದಿ ಮಾಡಿದರೂ ಕೂಡ ಕನಿಷ್ಟ ಪಕ್ಷ 4 ಎಕರೆಯ ದರೂ ಇವಕ್ಕೆಲ್ಲಾ ಬಿಟ್ಟರೆ ಇನ್ನು ಕೇವಲ 14 ಎಕರೆ ಮಾತ್ರ ವ್ಯವಸಾಯಕ್ಕೆ ಉಪಯೋಗಕ್ಕೆ ಬರತಕ್ಕಂಥಾದ್ದು ಎಂದು ಇಷ್ಟು ಮಾತ್ರ ಹೇಳಬಯಸುತ್ತೇನೆ. ಈ ಒಂದು ಖರ್ಚು ಕುಂದಾಚಾರಗಳನ್ನು ಲೆಕ್ಕ ಇಟ್ಟುಕೊಂಡು ಬಡ್ಜೆಟ್ ತಯಾರು ಮಾಡಿದರೆ 2 ಬೆಳೆ ಬರತಕ್ಕಂಥ ಒಂದು ಎಕರೆಯ ಉತ್ಪತ್ತಿ 500 ರೂಪಾಯಿ ಆಗುತ್ತದೆ. ಇಷ್ಟು ಆದಾಯ ಬರಬೇಕಾದರೂ ಕೂಡ ಕೆಲವೊಂದು ಬಾಬುಗಳು ಬಿಟ್ಟು ಹೋಗುತ್ತದೆ. ಅದು ಯಾವುವು ಎಂದರೆ ಈ ಜಮೀನಿನ ರೈತನೊಬ್ಬನೇ ಮಾಡುವುದಕ್ಕಾಗುವುದಿಲ್ಲ. ಅತನ ಹೆಂಡತಿ ಮಕ್ಕಳು ಎಲ್ಲರೂ ಸೇರಿರುತ್ತಾರೆ. ಆ ರೈತನ ಹೆಂಡತಿ ತಾನು ಬೆಳಗ್ಗೆ 4 ಗಂಟೆಗೆ ಎದ್ದು ಸಾಯಂಕಾಲ 5 ಗಂಟೆಯವರೆಗೂ ದುಡಿಯಬೇಕು. ಇದಕ್ಕೆ ಸಂಬಳ ಲೆಕ್ಕ ಹಾಕುವುದಕ್ಕಾಗುವುದಿಲ್ಲ. ಇದರ ಜೊತೆಗೆ ಆತನ ಮಕ್ಕಳ ದುಡಿಯುತ್ತಾರೆ. ಅವರಿಗೆ ಸಂಬಳ ಲೆಕ್ಕ ಹಾಕುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ರೈತ ಸೂಪರ್‌ವಿಷನ್ ಮಾಡುತ್ತಾನೆ, ಅವನ ಸಂಬಳ ಲೆಕ್ಕ ಹಾಕುವುದಕ್ಕಾಗುವುದಿಲ್ಲ. ಇದನ್ನೆಲ್ಲಾ ಲೆಕ್ಕ ಹಾಕಿದರೆ ಅವನಿಗೆ ಲಾಭ ಬರುವುದಿಲ್ಲ. ಲಾಭ ಬಂದಿದ್ದರೆ ರೈತನ ಆರ್ಥಿಕ ಸ್ಥಿತಿ ಬಹಳ ಚೆನ್ನಾಗಿರುತ್ತಿತ್ತು. Agriculture is not a remunerative occupation. ಈಪ್ರೊತ್ತು 25 ಎಕರೆ ಇರಬೇಕೆಂದು ಇಟ್ಟುಕೊಳ್ಳೋಣ. ಯಾವ ಕಮಿಟಿ ಮಾಡಿದರೂ ಇದರ ಅಂಕಿಸಂಖ್ಯೆಗಳನ್ನು ಕಂಡುಹಿಡಿಯಲ್ಲಿಲ್ಲ. ಎಲ್ಲಕ್ಕಿಂತಲೂ ರೈತನಿಗೆ ಹೆಚ್ಚು ಸಾಲ ಇದೆ. ಯಾವ ಬ್ಯಾಂಕ್‌ಗಳಲ್ಲಾಗಲಿ, ಸೊಸೈಟಿಗಳಲ್ಲಾಗಲಿ ಎಲ್ಲೆಲ್ಲಿ ಸಾಲ ಸಿಕ್ಕುತ್ತದೋ ಅಲ್ಲೆಲ್ಲಾ ಸಾಲ ಇದೆ. ಅವನಿಗೆ ಎಷ್ಟು ಎಕರೆಯೇ ಇರಲಿ ಸಾಲ ಇರುತ್ತದೆ. ವ್ಯವಸಾಯಕ್ಕಾಗಿ ಎಷ್ಟೋ ಕೋಟಿ ರೂಪಾಯಿಗಳನ್ನು ರೈತರಿಗೆ ಸಾಲ ಕೊಟ್ಟಿದ್ದಾರೆ. ಅದರ ವಿಚಾರ ಬೇರೆ. ಇವೆಲ್ಲಾ ಇದ್ದರೂ ಕೂಡ, 18 ಎಕರೆ ಇರಬೇಕು ಎಂದು ಮಿತಿ ಇಟ್ಟರೂ ಕೂಡ ವರ್ಷ ಒಂದಕ್ಕೆ ಒಂದು ಎಕರೆಗೆ 500 ರೂಪಾಯಿಗಳಿಸುತ್ತಾನೆಂದು ಇಟ್ಟುಕೊಳ್ಳೋಣ ಅಲ್ಲಿಗೆ ಅವನ ಪೂರ್ತಾ 18 ಎಕರೆಗೆ 9 ಸಾವಿರ ವಾರ್ಷಿಕ ವರಮಾನ ಆದಹಾಗೆ ಆಯಿತು, ಅಂದರೆ ತಿಂಗಳಿಗೆ 750 ರೂಪಾಯಿ ಬಂದಹಾಗೆ ಆಗುತ್ತದೆ. ಇಷ್ಟರಲ್ಲಿ ಯಾವರೀತಿಯಾಗಿ ಸುಜೀವನ ನಡೆಸಬಲ್ಲ; ಇದರಲ್ಲಿ ಅವನ ಊಟ ಉಪಚಾರಕ್ಕೆ ಮೀಸಲಾಗಿಟ್ಟು, ಔಷಧೋಪಕರಣಗಳ ಕೆಲವು ಖರ್ಚುಗಳಿಗೂ ಸಾಕಾಗಿ ಆವನು ತನ್ನ ಮನೋರಂಜನೆಗೆ ಬೇಕಾದ ವಾಹನ ಸೌಕರ್ಯ, ರೇಡಿಯೋ ಮುಂತಾದವನ್ನು ಇಟ್ಟುಕೊಳ್ಳಬೇಕಾದರೆ ಈ ವರಮಾನದಿಂದ ಹೇಗೆ ನಡೆಸಬಲ್ಲ ಅನ್ನುವುದನ್ನು ಯೋಚನೆ ಮಾಡಬೇಕು. ಶ್ರೀಮಾನ್ ಶೀಗನಾಳಿ ಚಂದ್ರಶೇಖರ್‌ರವರು ಮಾತನಾಡುತ್ತಾ ದೊಡ್ಡ ದೊಡ್ಡ ಅಧಿಕಾರಿಗಳ ಮಕ್ಕಳನ್ನು ಓದುವುದಕ್ಕೆ ಫಾರಿನ್‌ಗೆ ಕಳುಹಿಸುತ್ತಾರೆಂದು ಹೇಳಿದರು. ಹೀಗಿರುವಾಗ ನಮ್ಮ ರೈತರು ತಮ್ಮ ಮಕ್ಕಳನ್ನು ಮೈಸೂರು ದೇಶದಲ್ಲಿರುವ ಒಂದು ಇಂಜಿನೀಯರಿಂಗ್ ಕಾಲೇಜಿನಲ್ಲಾಗಲಿ, ಮೆಡಿಕಲ್ ಕಾಲೇಜಿನಲ್ಲಾಗಲಿ ಓದಿಸುವ ಅವಶ್ಯಕತೆ ಇಲ್ಲವೇ? ಆ ರೈತನಿಗೆ ತಿಂಗಳಿಗೆ 750 ರೂಪಾಯಿ ವರಮಾನ ಬರುವುದಾದರೆ ಆತನು ತನ್ನ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಹೇಗೆ ಕೊಡಬಲ್ಲ. ಅವನ ಮಕ್ಕಳಿಗೆ ವೈದ್ಯಕೀಯ ಸೌಲಭ್ಯವನ್ನು ಹೇಗೆ ಕೊಡಬಲ್ಲ, ಅವನ ಮಕ್ಕಳಿಗೆ ಮದುವೆ ಮುಂಜಿ ಹೇಗೆ ಮಾಡಬಲ್ಲ. ಮನೆಯಲ್ಲಿ ಹಬ್ಬ ಮುಂತಾದುವಕ್ಕೆ ಹೇಗೆ ಖರ್ಚು ಮಾಡಬಲ್ಲ ? ಈ ವಿಚಾರ ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಆ ರೈತ ಪೂರ್ತಾ 18 ಎಕರೆಯಲ್ಲೂ ವ್ಯವಸಾಯ ಮಾಡಿ ಅವನಿಗೆ ಬರುವ ವರಮಾನ ಗರಿಷ್ಟ ಮಿತಿ ತಿಂಗಳೊಂದಕ್ಕೆ 750 ರೂಪಾಯಿ ಎಂದು ಏನು ಲೆಕ್ಕಾಚಾರ ಹಾಕಿದ್ದೇವೋ ಅದರಲ್ಲಿ ಈ ಖರ್ಚುಗಳನ್ನೆಲ್ಲಾ ಯಾವರೀತಿ ಮಾಡಬಲ್ಲ ಎನ್ನುವುದಕ್ಕೆ ಉದಾಹರಣೆ ಹೇಳಿದೆ. ಇದು ಗರಿಷ್ಟ ಮಿತಿಯ ವಿಚಾರವಾಯಿತು,

ಇನ್ನೂ ಮಾನ್ಯ ಸದಸ್ಯರು ಕನಿಷ್ಟ ಮಿತಿಯ ಬಗ್ಗೆ ಏನೂ ಮಾತನಾಡುತ್ತಾ ಇಲ್ಲ ಎಂದು ಹೇಳಬಹುದು. ಆ ಬಗ್ಗೆ ಹೇಳುವುದಾದರೆ ಈಪ್ರೊತ್ತು 4ನೇ ದರ್ಜೆ ನೌಕರರ ವಿಚಾರ ತೆಗೆದುಕೊಂಡರೆ ಬಿನ್ನಿಮಿಲ್‌ನಲ್ಲಿರುವ ನೌಕರರಿಗೆ ಕನಿಷ್ಟ ಪಕ್ಷ ತಿಂಗಳೊಂದಕ್ಕೆ 250 ರೂಪಾಯಿ ಆದಾಯ

ಇರುತ್ತದೆ. ಅದೇರೀತಿ ಭೂಮಾಲೀಕನಿಗೂ ಕೂಡ ಒಂದು ತಿಂಗಳಿಗೆ ಒಂದು ಸಂಸಾರಕ್ಕೆ 250 ರೂಪಾಯಿ ಆದಾಯ ಇರಬೇಕು ಅಂತ ಏನಾದರೂ ನಿರ್ಣಯ ಮಾಡಿ. ಅದು ಬಿಟ್ಟು ಎಲ್ಲರಿಗೂ ಭೂಮಿಯನ್ನು ಒಂದೊಂದು ಎಕರೆ ಹಂಚಿಬಿಡುತ್ತೇವೆ ಎಂದು ಹೊರಟರೂ ಕೂಡ ಆ ರೈತನ ಬಡತನ ಪರ್ಮನೆಂಟ್ ಇರುತ್ತದೆಯೇ ವಿನಃ ಸ್ವಜೀವನ ಮಾಡುವುದಕ್ಕಾಗುವುದಿಲ್ಲ. ಆ ರೈತನಿಗೆ ನೀರಾವರಿ ಇರತಕ್ಕಂಥಾ ಕಡೆ ಒಂದು ಎಕರೆ ಭೂಮಿಯನ್ನು ಕೊಡುವುದಾಗಲಿ, ಅಥವಾ ಎರಡು ಎಕರೆ ಖುಷ್ಕಿ ಜಮೀನು ಕೊಟ್ಟರೂ ಕೂಡ ಅದರಿಂದ ಬೆಳೆಯುತಕ್ಕಂಥ ಉತ್ಪತ್ತಿಯಿಂದ ಅವನು 2—3 ತಿಂಗಳೂ ಕೂಡ ಜೀವನ ಮಾಡುವುದಕ್ಕಾಗುವುದಿಲ್ಲ. ಇನ್ನು ಬಾಕಿ 9—10 ತಿಂಗಳು ಹೊಟ್ಟೆಗಿಲ್ಲದೆ, ಊಟಕ್ಕೆ ಇಲ್ಲದೆ ಹಾಗೆಯೇ ಇರಬೇಕಾಗುತ್ತದೆ. ಅವನ ಬಡತನ ಹಾಗೆಯೇ ಪರ್ಮನೆಂಟ್ ಆಗಿ ಉಳಿಯುತ್ತದೆ, ಈ ರೀತಿ ಹಂಚಿದರೆ ಯಾವರೀತಿಯ ಪ್ರಯೋಜನವೂ ಆಗುವುದಿಲ್ಲ ಎಂದು ರೈತರ ವಿಚಾರದಲ್ಲಿ ಇಷ್ಟು ಮಾತ್ರ ಹೇಳಬಯಸುತ್ತೇನೆ.

ಇನ್ನು ಕಾರ್ಮಿಕರ ವಿಚಾರ. ದೊಡ್ಡ ದೊಡ್ಡ ಬಂಡವಾಳ ಶಾಹಿಗಳ ಹತ್ತಿರ ಅನ್‌ಅಕೌಂಟೆಡ್ ಮನಿ ಏನು ಇದೆಯೋ ಅದು, ಮಾರ್ವಾಡಿ ಇರತಕ್ಕಂತ ಐಶ್ವರ್ಯವನ್ನೂ ತೆಗೆದುಕೊಂಡು ಪ್ರತಿಯೊಬ್ಬ ಕಾರ್ಮಿಕನಿಗೂ ಕ್ಯಾಪಿಟಲ್ ಹಾಕಿ ಕೈಗಾರಿಕೆಗಳನ್ನು ಒದಗಿಸಿ ಕೊಟ್ಟರೆ ತನ್ಮೂಲಕ ದೇಶದ ಉತ್ಪಾದನೆಯನ್ನೂ ಹೆಚ್ಚಿಸುವ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟು ಬಡತನ ನಿವಾರಣೆ ಮಾಡಬೇಕೇ ವಿನಃ ಜಮೀನನ್ನೇ ಅವಲಂಬಿಸಿಕೊಂಡಿರತಕ್ಕಂಥ ಎಲ್ಲರಿಗೂ ಭೂಮಿ ಹಂಚಿ ಅದರಿಂದ ಬಡತನ ನಿವಾರಣೆ ಮಾಡುತ್ತೇವೆ ಎಂದರೆ ಅದು ಕೇವಲ ಕನಸಾಗುತ್ತದೆ ಎಂದು ಹೇಳುತ್ತೇನೆ.

[MR DEPUTY SPEAKER in the Chair]

18 ಎಕರೆ ಇಟ್ಟ ಪಕ್ಷದಲ್ಲಿ ಅಷ್ಟು ಹೆಚ್ಚು ಆದಾಯ ಬರುವುದಿಲ್ಲ ಎಂದು ಹೇಳಿದೆ. ಇದೇ ರೀತಿ 27 ಎಕರೆ ಒಂದು ಬೆಳೆ ಬೆಳೆಯುತಕ್ಕದ್ದಕ್ಕೆ ನಿಗದಿಮಾಡಿದ್ದಾರೆ. ಅದರ ಯೋಗ್ಯತೆ ಅಷ್ಟೇ ಖುಷ್ಕಿ ಜಮೀನು ವಿಚಾರದಲ್ಲಿ ಗ್ಯಾರಂಟಿಯಿಲ್ಲ. ಕ್ಷಾಮಡಾಮರದಿಂದ 4—5 ಡಿಸ್ಟ್ರಿಕ್ಟುಗಳ ಜನರು ಒದ್ದಾಡುತ್ತಿದ್ದಾರೆ ಹೊಟ್ಟೆಗಿಲ್ಲದೆ ಬಟ್ಟೆಗಿಲ್ಲದೆ ಕುಡಿಯುವುದಕ್ಕೆ ನೀರು ಇಲ್ಲದೆ. ಈ ಸ್ಥಿತಿಯಿಂದ ಒದಗುವುದಾದರೆ ಎಷ್ಟು ಎಕರೆ ಇಟ್ಟರೂ ಏನೂ ಪ್ರಯೋಜನವಾಗುವುದಿಲ್ಲ. 100 ಎಕರೆಯಾಗಲಿ ಸರಿಯಾಗಿ ಸಮರ್ಪಕವಾಗಿ ಸಂಪಾದನೆ ಮಾಡಲು ಸಾಧ್ಯವಿಲ್ಲ. ವ್ಯವಸಾಯಗಾರ ಕ್ಷಾಮದ ದವಡೆಗೆ ಸಿಕ್ಕಿ ಹಾಕಿಕೊಂಡು ನರಳುತ್ತಾನೆ. ನರಳುತ್ತಿರುವವನು ಇತರರಜೊತೆಗೆ ಒಂದು ಮಟ್ಟಕ್ಕೆ ಬರಬೇಕಾದರೆ 3—4 ವರ್ಷಬೇಕು. ರೈತನ ಆದಾಯ ಅನಿಶ್ಚಿತ ಮತ್ತು ಗ್ಯಾರಂಟಿಯಿಲ್ಲ. ನಾವು ಭೂಮಿತಿ ನಿಗದಿ ಮಾಡುವ ಕಾಲದಲ್ಲಿ ಮುಂದೆ ಆಹಾರ ಉತ್ಪಾದನೆ ಅಧಿಕವಾಗಬೇಕು ಮತ್ತು ಸ್ವಯಂಪೂರ್ಣತೆ ತರಬೇಕು ಎನ್ನುವುದನ್ನು ದೃಷ್ಟಿಯಲ್ಲಿ ಇಟ್ಟುಕೊಳ್ಳುವುದಾದ ಯಂತ್ರೋಪಕರಣಗಳನ್ನು ಅವಲಂಬಿಸಿ ವ್ಯವಸಾಯ ಮಾಡುವುದಾದರೆ ಅದರ ವಿವೇಚನೆ ನಿಗದಿ ಮಾಡಬೇಕೇ ವಿನಃ ಅಡ್‌ಹಾಕ್ ಆಗಿ ನಿಗದಿ ಮಾಡುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ ನಮ್ಮ ಅಕ್ಕಪಕ್ಕದ ರಾಜ್ಯದವರು ಸಹ ಭೂಮಿತಿ ವಿಚಾರದಲ್ಲಿ ಏನುಮಾಡಿದ್ದಾರೆ ಎನ್ನುವುದನ್ನು ನೋಡಬೇಕು. ಗರಿಷ್ಠ ಮಿತಿಯಬಗ್ಗೆ ನಮ್ಮ ಕೇಂದ್ರ ಸರ್ಕಾರದವರು ಆದೇಶವನ್ನು ಕೊಟ್ಟಿದ್ದರೂ ಪಂಜಾಬು ಮತ್ತು ಹರಿಯಾನ ಏನು 18 ಎಕರೆಗೆ ಮಿತಿಯನ್ನು ನಿಗದಿಮಾಡಿದ್ದಾರೆ. ಪಂಜಾಬು ಮತ್ತು ಹರಿಯಾನದಲ್ಲಿರುವ ಉತ್ಕೃಷ್ಟ ಜಮೀನಿನಂತೆ ಅವರ ಜಮೀನಿಗೆ ಹೋಲಿಸಿದರೆ ಅವರ ಒಂದು ಎಕರೆ ನಮ್ಮ 4-5 ಎಕರೆಗೆ ಸಮನಾಗಿರುತ್ತದೆ. ಅಂದಮೇಲೆ ಇಷ್ಟೊತ್ತು ಮೈಸೂರು ದೇಶದಲ್ಲಿ 18 ಎಕರೆಗಳಿಗಿಂತ ಕಡಿಮೆ ಮಿತಿಗೊಳಿಸುತ್ತಾರೆಂದು ಹೇಳಿದರೆ ಅದು ತಪ್ಪಾಗುತ್ತದೆ ಎಂದು ಹೇಳುತ್ತೇನೆ. ಇದರ ಜೊತೆಗೆ ಇನ್ನು ಕೆಲವು ಭೂಸುಧಾರಣೆಯಲ್ಲಿ ಅಳವಡಿಸಿದ್ದಾರೆ. 12 ಸಾವಿರ ರೂಪಾಯಿ ಆದಾಯ ಬರತಕ್ಕವರಿಗೆ ಭೂಮಿ ಇರಬಾರದು ಎಂದು ಹೇಳಿದ್ದಾರೆ ಇದನ್ನು ತಿದ್ದುಪಡಿಯಿಂದ ತೆಗೆದುಹಾಕಬೇಕು. ಯಾತಕ್ಕೆಂದರೆ ಯಾವನೋ ಒಬ್ಬ ಸ್ಕೂಲು ಮಾಸ್ಟರು ಅಧಿಕಾರದಲ್ಲಿರುತ್ತಾನೆ. ಅವನು ಎರಡುವರ್ಷದೊಳಗೆ ರಿಟೈರ್ ಆಗುತ್ತಾನೆ, ಅವನು ಹೋಗಿ ಪುನಃ ಆತನ ಮಕ್ಕಳು ಮರಿ ಯಾವರೀತಿ ಸಾಕಬೇಕು ? ಸಾವಿರಾರು ರೂಪಾಯಿ ಸಂಬಳ ಬರುತ್ತದೆ ಎಂದು ಅವನಿಗೆ ಭೂಮಿ ಇಲ್ಲದಹಾಗೆ ಮಾಡಿಬಿಟ್ಟರೆ ನಾಳೆ ಸಂಬಳ ಬರದೇ ಇದ್ದಾಗ ಆತನು ಯಾವರೀತಿ ಜೀವನ ಮಾಡಬೇಕು ಎಂದು ಯೋಚನೆಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ಪೆನ್‌ಷನ್ ಬರುತ್ತದೆ.

ಶ್ರೀ ಎಚ್. ಬಿ. ಕೆಂಚೇಗೌಡ.—ಅವನು ಇರುವತನಕ ಪೆನ್‌ಷನ್ ಬರಬಹುದು. ಸತ್ತುಹೋದ ಮೇಲೆ ಮಕ್ಕಳಿಗೆ ಏನು ಮಾಡುವುದು? ಎರಡನೆಯದಾಗಿ ಈ ರೀತಿ ಒಂದು ನಿಯಮವನ್ನು ಹಾಕುವುದ

(ಶ್ರೀ ಹೆಚ್. ಬಿ. ಕೆಂಚೇಗೌಡ)

ರಿಂದ ವ್ಯವಸಾಯಗಾರರ ಬೇರೆ ಕೆಲಸಗಳನ್ನು ಕೈಗೊಳ್ಳಬಾರದು. ಅವನು ಕಡ್ಡಾಯವಾಗಿಯೂ ವ್ಯವಸಾಯ ಮಾಡಿಕೊಂಡಿರಬೇಕು ಎಂದು ನಿಗದಿಯನ್ನು ಹಾಕಿಕೊಂಡ ಹಾಗೆ ಆಗುತ್ತದೆ. ಆದರಿಂದಾಗಿ, 12 ಸಾವಿರ ರೂಪಾಯಿ ಉತ್ಪತ್ತಿ ಇರುವವರಿಗೆ ಭೂಮಿ ಇರಬಾರದು ಎನ್ನುವುದನ್ನು ತೆಗೆದುಹಾಕಬೇಕು. 16 ಕಿಲೋಮೀಟರು ಅಂತರದಲ್ಲಿ ಜಮೀನು ಇರಬೇಕೆಂದು ಇನ್ನೊಂದು ತಿದ್ದುಪಡಿ ಇದೆ. ಈಗ ಒಳ್ಳೆ ರಸ್ತೆಗಳು ಮತ್ತು ವಾಹನ ಸೌಕರ್ಯಗಳು ಇವೆ. ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು ಎಂದು ಆಸೆ ಆಕಾಂಕ್ಷೆ ಇರುವ ಕಾಲದಲ್ಲಿ ತಮ್ಮ ಜಮೀನಿನ ಪಕ್ಕದಲ್ಲಿ ಫಾರಂ ಹೌಸ್ ಕಟ್ಟಿಕೊಂಡು ವಾಹನದಲ್ಲಿ ಅಥವಾ ಬಸ್ಸಿನಲ್ಲಿ ಹೋಗಿ ವ್ಯವಸಾಯವನ್ನು ಸೂಪರ್‌ವೈಸ್ ಮಾಡುವ ಅವಕಾಶ ಇರುವುದರಿಂದ ಈ 16 ಕಿಲೋಮೀಟರ್ಸ್ ಎಂದು ಇರುವುದನ್ನು ತೆಗೆದುಹಾಕಬೇಕು. ಎರಡು ಬೆಳೆಗೆ 18 ಎಕರೆ, ಒಂದು ಬೆಳೆಗೆ 27 ಎಕರೆ, ಖುಷ್ಕಿ ಜಮೀನು 54 ಎಕರೆ, ಡ್ರಾಟ್ ಏರಿಯಾ ಇರುವ ಜಮೀನಿಗೆ 100 ಎಕರೆಯವರೆಗೆ ಭೂಮಿತಿಯನ್ನು ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಈ ಬಿಲ್ಲನ್ನು ವಿರೋಧಿಸುತ್ತೀರಾ ? ಅಥವಾ ಸಪೋರ್ಟ್ ಮಾಡುತ್ತೀರಾ ?

ಶ್ರೀ ಎಚ್. ಬಿ. ಕೆಂಚೇಗೌಡ.—ನಾನು ನೆನ್ನೆ ಅದನ್ನು ಕ್ಲಿಯರ್ ಆಗಿ ಹೇಳಿದ್ದೇನೆ. ಈ ಬಿಲ್ಲಿನ ವಿಚಾರವಾಗಿ ಕೇಂದ್ರ ಸರ್ಕಾರದವರು ಏನು ಆದೇಶ ಕೊಟ್ಟಿದ್ದಾರೆ ಆ ಮಿತಿಯೊಳಗೆ ಮಾತ ನಾಡುತ್ತಾರೆ. ಪುನಃ ಪಾರ್ಟಿಯಲ್ಲಿ ತೀರ್ಮಾನವಾದಾಗ ನಮ್ಮ ಪಾರ್ಟಿ ತೀರ್ಮಾನಕ್ಕೆ ನಾನು ಬದ್ಧರಾಗುತ್ತೇನೆ ಎಂದು ಮೊದಲೆ ಹೇಳಿದ್ದೇನೆ. ವಿರೋಧ ಮಾಡುವ ಪ್ರಶ್ನೆಯಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ. ಪಾರ್ಟಿ ತೀರ್ಮಾನಕ್ಕೂ ಇದಕ್ಕೂ ಸಂಬಂಧವಿಲ್ಲ. ಈ ಬಿಲ್ಲಿನ ಬಗ್ಗೆ ನಿಮ್ಮ ಅಭಿಪ್ರಾಯ ಏನು ? ಬೆಂಬಲ ಕೊಡುತ್ತೀರಾ ! ವಿರೋಧಿಸುತ್ತೀರಾ ?

ಶ್ರೀ ಎಚ್. ಬಿ. ಕೆಂಚೇಗೌಡ. ವಿರೋಧ ಮಾಡುವ ಪ್ರಶ್ನೆ ಏಳುವುದಿಲ್ಲ. ನಾನು ಹೇಳಿದ ಸಲಹೆಗಳನ್ನು ಅಳವಡಿಸಿ ಈ ತಿದ್ದುಪಡಿ ವಿಧೇಯಕವನ್ನು ಸಪೋರ್ಟ್ ಮಾಡುತ್ತೇನೆ. ಈ ಸಂದರ್ಭದಲ್ಲಿ ಅಧ್ಯಕ್ಷರು ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ (ಅರಸೀಕೆರೆ). ಸಭಾಧ್ಯಕ್ಷರೇ, ಈ ಭೂಸುಧಾರಣಾ ವಿಧೇಯಕವನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಒಂದು ರೂಪವನ್ನು ಕೊಟ್ಟು ರೈತಾಪಿ ಜನರಿಗೆ ಒಂದು ವರಪ್ರಸಾದವನ್ನು ಕೊಡುತ್ತೇವೆ ಎನ್ನತಕ್ಕ ಒಂದು ಭಾವನೆಯಿಂದ ಸರ್ಕಾರ ಮನಸ್ಸುಮಾಡಿ ಈ ಭೂಸುಧಾರಣಾ ವಿಧೇಯಕವನ್ನು ತಂದಿದ್ದಾರೆ ಎಂದು ನನಗನಿಸುತ್ತದೆ. ಈ ಸರ್ಕಾರದವರು ಈ ಭೂಸುಧಾರಣಾ ವಿಧೇಯಕವನ್ನು ತರುವುದಕ್ಕೆ ಮುಂಚೆ ನಮ್ಮ ರಾಷ್ಟ್ರದಲ್ಲಿ ಯಾವ ಯಾವ ಜನರಿಗೆ ಯಾವ ವರ್ಗಕ್ಕೆ ಏನೇನು ಸೌಲಭ್ಯಗಳು ಇವೆ. ಏನೇನು ಸೌಲಭ್ಯಗಳು ಇಲ್ಲ ಎನ್ನತಕ್ಕಂಥದ್ದನ್ನು ಮೊಟ್ಟಮೊದಲು ಮನಗಂಡು ಮಾಡಬೇಕಾಗಿತ್ತು ಎಂದು ನನಗನಿಸುತ್ತದೆ. ಉದಾಹರಣೆಗೆ ಹೇಳುವುದಾದರೆ ಇವೊತ್ತಿನ ದಿವಸ ಭೂಸುಧಾರಣಾ ವಿಧೇಯಕದಲ್ಲಿ ಹೆಚ್ಚಿಗೆ ಇರುವಂತಹ ಭೂಮಿಯನ್ನು ತೆಗೆದುಕೊಂಡು ಕಡಿಮೆ ಇರುವವರು ಮತ್ತು ಭೂಮಿ ಇಲ್ಲದೆ ಇರುವವರಿಗೆ ಕೊಡುತ್ತೇವೆ ಎನ್ನುವ ಮಾತು ಏನು ಇದೆ ಅದು ನಿಜಕ್ಕೂ ಕೂಡ ಸಮಾತಳವಾದ ಚಿತ್ರತಕ್ಕ ಈ ಸರ್ಕಾರಕ್ಕೆ ಯೋಗ್ಯವಲ್ಲ. ರಾಷ್ಟ್ರದಲ್ಲಿ ಒಂದು ವರ್ಗದ ಜನ 4 6 ಹೆಂಡತಿಯರನ್ನು ಮದುವೆ ಮಾಡಿಕೊಂಡು 8 - 10 ಮಕ್ಕಳು ಮಾಡತಕ್ಕ ಒಂದು ವರ್ಗ ಇದೆ

3-30 P.M.

ಇನ್ನೊಂದು ವರ್ಗದ ಜನ ಒಂದು ಮದುವೆಮಾಡಿಕೊಂಡ ಮೇಲೆ ಬೇರೆ ಮಾಡಿಕೊಳ್ಳುವ ಹಾಗಿಲ್ಲ. ಈ ಒಂದು ವರ್ಗದ ಜನ ಏನು ಇದ್ದಾರೆ, ಅವರು ವ್ಯವಸಾಯವನ್ನು ಹೆಚ್ಚು ಅವಲಂಬಿಸಿರತಕ್ಕ ಜನ ಅಲ್ಲ; ಕೈಗಾರಿಕೆ, ಇನ್ನು ಏನಾದರೂ ಉದ್ಯಮಗಳನ್ನು ಮಾಡತಕ್ಕ ಜನ. ಅವರಿಗೆ ಹೆಚ್ಚುವರಿ ಜಮೀನು ಜಾಸ್ತಿ ಇರುವುದರಿಂದ, ಇವರಿಂದ ಜಮೀನನ್ನು ಕಿತ್ತು ತೆಗೆದುಕೊಂಡು ಜಮೀನು ಇಲ್ಲದವರಿಗೆ ಕೊಡುತ್ತಾರೆ ಎನ್ನುವ ಮನೋಭಾವನೆ ದೇಶದಲ್ಲಿ ಬೆಳೆಯುತ್ತಿದೆ. ಮನೆಯಲ್ಲಿ ನಾಲ್ಕು ಜನ ಇದ್ದರೂ, ಇನ್ನಿಬ್ಬರು ಹೆಂಡಿರನ್ನು ಮದುವೆ ಮಾಡಿಕೊಳ್ಳುವುದಕ್ಕೆ ಹವಣಿಸುತ್ತಾರೆ. ಅವರಿಗೆ ಕಾನೂನಿನ ತೊಡಕು ಇಲ್ಲ. ಒಂದು ಕುಟುಂಬದಲ್ಲಿ 8 ಜನ ಹೆಂಡಿರು

ಇದ್ದರೆ ಅವರಿಗೆ 64 ಮಕ್ಕಳು ಇದ್ದರೆ, ಅವರೆಲ್ಲರಿಗೂ ಕೂಡ ಈ ಜಮೀನನ್ನು ಕೊಡತಕ್ಕ ಪ್ರಸಂಗ ಮಾಡಿ, ಅವರು ಯಾವುದೋ ಒಂದು ವರ್ಗವನ್ನು ಬೆಳೆಸುತ್ತಾರೆ. ಇವತ್ತಿನ ದಿವಸ ಅನುಚೀನವಾಗಿ ರೈತಾಪಿ ಕೆಲಸ ಮಾಡಿಕೊಂಡು ಬಂದಿರತಕ್ಕ ರೈತ, ಶ್ರೀಮಾನ್ ಕೆಂಚೇಗೌಡರು ಹೇಳಿದ ಹಾಗೆ ಭೂಮಿತಾಯಿ ದೇವರು, ತನ್ನ ಸರ್ವಸ್ವ ಎಂದು ಬೆವರು ಸುರಿಸಿ ದೇಶಕ್ಕೆ ಒಳ್ಳೆಯದಾಗಬೇಕು ಎನ್ನುವ ಉದಾತ್ತ ಧ್ಯೇಯದಿಂದ ಭೂಮಿಯನ್ನು ಸಾಗು ಮಾಡುತ್ತಿದ್ದಾನೆ. ಅಂಥವನಿಂದ ಜಮೀನನ್ನು ಕಸಿದು ನಾವು ಬೇರೆಯವರಿಗೆ ಕೊಡುತ್ತೇವೆ, ಗರೀಬಿ ಹಟಾವ್ ಮಾಡುವುದಕ್ಕೆ ಬದಲಾಗಿ ಗರೀಬಿ ಬಡಾವ್ ಮಾಡಿ ದೇಶದಲ್ಲಿ ಅಶಾಂತಿಯ ವಾತಾವರಣವನ್ನು ಬಿತ್ತುತ್ತಿದ್ದೇವೆ. ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ಗೆಳೆಯರಾದ ಕೆಂಚೇಗೌಡರು ಹೇಳಿದ ಹಾಗೆ ಪಂಜಾಬ್ ಮತ್ತು ಬೇರೆ ದೇಶದಲ್ಲಿ ಇರತಕ್ಕ ಭೂಮಿಯನ್ನು ನಮ್ಮ ದೇಶದ ಭೂಮಿಗೆ ಹೋಲಿಸಿದರೆ ಅಲ್ಲಿ ಒಂದು ಎಕರೆ ಜಮೀನಿನಲ್ಲಿ ಬೆಳೆಯತಕ್ಕ ಬೆಳೆಯನ್ನು ಇಲ್ಲಿ 4–5 ಎಕರೆಯಲ್ಲಿ ಬೆಳೆಯುವುದಕ್ಕೆ ಸಾಧ್ಯವಿಲ್ಲ. ಮಾನ್ಯ, ಆದ್ದರಿಂದ ನಿಮ್ಮ ಅಧಿಕಾರ ಉಳಿಯಬೇಕಾದರೆ ಭೂಮಿತಿಯನ್ನು ಚೆನ್ನಾಗಿ ಪರಿಶೀಲನೆ ಮಾಡಬೇಕು. ಮಾನ್ಯ ಸದಸ್ಯರಾದ ಮಾನ್ಯ ಕಾಗೋಡು ತಿಮ್ಮಪ್ಪ ಮತ್ತು ಗುಂಡೂರಾಯರ ಭೂಮಿತಿಯ ಬಗ್ಗೆ, ಮಾತನಾಡುವುದಾದರೆ, ಆಡಳಿತ ಪಕ್ಷವಾಗಲೀ ಅಥವಾ ಮತ್ತೊಂದು ಪಕ್ಷವಾಗಲೀ ಅವರಿಗೆ ಎಷ್ಟೆಷ್ಟು ಭೂಮಿ ಇದೆಯೋ ಅಷ್ಟಷ್ಟು ಮಿತಿ ಪ್ರಪೋಸ್ ಮಾಡುತ್ತಾರೆ. ಒಬ್ಬರಿಗೆ ಐದು ಎಕರೆ ಇದ್ದರೆ, ಐದು ಎಕರೆ. ಒಬ್ಬರಿಗೆ 20 ಎಕರೆ ಇದ್ದರೆ 20 ಎಕರೆ ಮಿತಿ ಎಂದು ಹೇಳುತ್ತಾರೆ. ಇದನ್ನು ಸಮಗ್ರದೃಷ್ಟಿಯಿಂದ ರಾಜ್ಯದಲ್ಲಿ ರೈತನ ಜೀವನ ಉತ್ತಮವಾಗಬೇಕಾದರೆ, ಉತ್ಪಾದನೆ ಹೆಚ್ಚಿ ರೈತ ಶಕ್ತಿಯುತ ಬಲಿಯುತ ಆಗಬೇಕಾದರೆ ವಿವೇಚನ ಶಕ್ತಿ ಇಟ್ಟುಕೊಂಡು ವಿಚಾರ ಮಾಡಬೇಕು.

ಶ್ರೀ ಕೋಣಂದೂರು ಲಿಂಗಪ್ಪ.—ರೈತ ಯಾರು ?

ಶ್ರೀ ಎಚ್. ಎಸ್. ಸಿದ್ದಪ್ಪ.—ರೈತರು ಯಾರು ಎಂದು ಹೇಳಿದರೆ, ಭೂಮಿಯಲ್ಲಿ ಯಾರು ಉಳುವವರು ಇದ್ದಾರೆಯೋ ಅವರನ್ನು ರೈತರು ಎಂದು ಹೇಳುತ್ತೇವೆ. ರಾಯರ ಕೆಲಸ ಮಾಡುವವರನ್ನಲ್ಲ. ಈ ವಿಧೇಯಕವನ್ನು ತರಬೇಕಾದಂಥ ಜನ ರೈತನ ಉದ್ಧಾರ ಎಷ್ಟು ಮಾಡಿದ್ದೀವೆ, ಅವನ ಪರಿಸ್ಥಿತಿ ಹೇಗೆ ಇದೆ, ಅವನ ಮಕ್ಕಳು ಅವನ ಕುಟುಂಬವನ್ನು ಸುಖವಾಗಿ ಸಾಕತಕ್ಕ ಚೈತನ್ಯ ಇದೆಯೇ ಎನ್ನತಕ್ಕದನ್ನು ಪರ್ಯಾಲೋಚಿಸಬೇಕು. ಇವತ್ತಿನ ದಿವಸ ಒಂದು ಕಡೆ ಹೇಳುತ್ತಾರೆ, ಭೂಮಿಯಲ್ಲಿ ಉತ್ಪಾದನೆ ಹೆಚ್ಚಿಸಬೇಕು ಎಂದು. ಮೆಕಾನೈಸ್ ಮಾಡಬೇಕು ಎಂದು. 10 ಎಕರೆ ಮಿತಿ ಮಾಡುವುದಾದರೆ, ಮೆಕಾನೈಸ್ ಪ್ರಾರಂಭ ಮಾಡುವುದಕ್ಕೆ ವಿಧ ವಿಧವಾದಂಥ ಟ್ರ್ಯಾಕ್ಟರು ಮತ್ತು ಅನೇಕ ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೆ ರೈತನಿಗೆ ಚೈತನ್ಯ ಇದೆಯೇ! ಮೆಕಾನೈಸ್ ಫಾರಂ ಮಾಡುವುದಕ್ಕೆ ಸಾಧ್ಯವಿದೆಯೇ! ಎಂಬ ವಿಚಾರ ಮಾಡಬೇಕು. ಇವತ್ತಿನ ದಿವಸ ಈ ವಿಷಯ ಸರಕಾರಿ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಭೂ ಅಭಿವೃದ್ಧಿ ಬ್ಯಾಂಕುಗಳಿಂದ ಮತ್ತು ಅನೇಕ ಸಹಕಾರ ಸಂಘಗಳಿಂದ ರೈತನಿಗೆ ಕೊಡತಕ್ಕ ಸಾಲಕ್ಕೆ ಯಾವ ಮಿತಿ ಹಾಕಿದ್ದಾರೆ! ಕಂದಾಯದ 50 ಪಟ್ಟಷ್ಟು ರೈತನಿಗೆ ಸಾಲ ಕೊಡುತ್ತಾರೆ. 10 ಎಕರೆ ಭೂಮಿ ಇಟ್ಟುಕೊಂಡಿರುವವರಿಗೆ ಸಹಕಾರ ಸಂಘಗಳಿಂದಾಗಲೀ, ಸರ್ಕಾರದಿಂದಾಗಲಿ ಧನ ಸಹಾಯ ಪಡೆದು, ರೈತ ಉತ್ತಮ ವ್ಯವಸಾಯ ಮಾಡುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ವಿಚಾರ ಮಾಡಬೇಕು. ಇವತ್ತಿನ ದಿವಸ ಉದಾಹರಣೆಗಾಗಿ ನನ್ನ ಸ್ವಂತ ಜೀವನದ ಉದಾಹರಣೆಯನ್ನು ಹೇಳುವುದಾದರೆ, ನನಗೆ ಬರೀ 4 ಹೆಣ್ಣು ಮಕ್ಕಳು, ನನ್ನ ಹತ್ತಿರ ವ್ಯವಸಾಯ ಮಾಡುವ ಜನ ಇಲ್ಲ. ಜಮೀನು ಮಾರೋಣವೆಂದರೆ, ಜಮೀನು ತೆಗೆದುಕೊಳ್ಳದೆ ಇರುವ ಪರಿಸ್ಥಿತಿ ಮಾಡಿ ಇಟ್ಟಿದ್ದೀರಿ. ಬೇರೆ ವೃತ್ತಿಯನ್ನು ಅವಲಂಬಿಸುವುದಕ್ಕೂ ಕೂಡ ಅವಕಾಶ ಇಲ್ಲದ ಹಾಗೆ ಮಾಡುತ್ತಿದ್ದೀರಿ. ಭೂಮಿತಿ ಬರುತ್ತದೆ, ಇರುವ ಜಮೀನು ಕಿತ್ತುಕೊಳ್ಳುತ್ತಾರೆ ಎಂದು. 30 ಸಾವಿರ ರೂಪಾಯಿ ಬಾಳತಕ್ಕ ಜಮೀನನ್ನು 5 ಸಾವಿರ ರೂಪಾಯಿಗೆ ತೆಗೆದುಕೊಳ್ಳುವುದಕ್ಕೆ ಯಾರೂ ತಯಾರಾಗಿಲ್ಲ. ಈ ರೀತಿ ರೈತನ ಆರ್ಥಿಕಶಕ್ತಿ ದಿನೇ ದಿನೇ ಕುಗ್ಗುತ್ತಾ ಇದೆ. ಅದಕ್ಕೆ ಬದಲಾಗಿ ವಿವೇಚನಾಶೀಲರಾಗಿ ಈ ಭೂ ಸುಧಾರಣೆಯನ್ನು ಪರಿಶೀಲನೆ ಮಾಡಿ ಈ ಸಭೆಯ ಮುಂದೆ ತಂದಿದ್ದರೆ ಚೆನ್ನಾಗಿತ್ತು ಎಂದು ನನಗನ್ನಿಸುತ್ತದೆ. ಇವತ್ತಿನ ದಿವಸ ರೈತ ದ್ರಾಕ್ಷಿ ಬೆಳೆ, ಕಬ್ಬಿನ ಬೆಳೆ ಬೆಳೆಯಬೇಕಾಗಿದ್ದರೆ ಅವನ ಕುಟುಂಬ ಪೂರ್ಣವಾಗಿ ಎಲ್ಲಾ ಜನರೂ ಕೂಡ ಅದಕ್ಕಾಗಿ ದಣಿಯುತ್ತಾನೆ. ಅಷ್ಟು ದಣಿದರೂ ಕೂಡ ಅವರು ಇವತ್ತಿನ ದಿವಸ ನಮ್ಮ ಕೋಣಂದೂರು ಲಿಂಗಪ್ಪನವರ ಹಾಗೆ ಇಸ್ತ್ರಿ ಬಟ್ಟೆಯನ್ನು ಹಾಕಿಕೊಳ್ಳುವ ಶಕ್ತಿ ಇಲ್ಲ. ಭೂಸುಧಾರಣೆ ಮಾಡಬೇಕು, ಸಮಾಜವಾದ ತರಬೇಕು ಎಂದು ಹೇಳುತ್ತಾರೆ. ಸಮತಾವಾದ ಬಿತ್ತತಕ್ಕ ಜನ, ರೈತನ ಜೀವನ ಸುಖವಾಗಿ ಮಾಡಿಕೊಳ್ಳುವುದಕ್ಕೆ, ಅವನ ಬಗ್ಗೆ ಸಮತಾವಾದದ ಮಾತನ್ನು ಆಡುತ್ತಾರೆಯೇ?

(ಶ್ರೀ ಹೆಚ್. ಎಸ್. ಸಿದ್ದಪ್ಪ)

ಎಲ್ಲಾ ಹಂಚುತ್ತೇವೆ ಎಂದು ಹೇಳುವ ಜನ ಪಟ್ಟಣವಾಸಿಗಳ ಆದಾಯವನ್ನು ಮೊದಲು ಮಿತಿಗೊಳಿಸಿದ್ದಾರೆಯೇ? ಅನೇಕ ವಿಧವಾದ ವೃತ್ತಿಗಳಿಂದ ಹಣ ಸಂಪಾದನೆ ಮಾಡುವ ಶ್ರೀಮಂತರ ಆದಾಯವನ್ನು ಮೊದಲು ಹಂಚಿಕೆ ಮಾಡಿ, ಅನಂತರ ಬಡ ರೈತನು ಬೆವರು ಸುರಿಸಿ ಮಾಡಿರುವ ಜಮೀನನ್ನು ಹಂಚುವುದಕ್ಕೆ ಕಾಯಿದೆ ತನ್ನಿರಿ. ಆಗ ನಿಮ್ಮ ಸಮಾಜವಾದವನ್ನು ಒಪ್ಪಬಹುದಿತ್ತು. ಒಬ್ಬನಿಗೆ ಎರಡು ವಾಸದ ಮನೆ ಇದ್ದರೆ, ಒಂದು ಮನೆ ತೆಗೆದುಕೊಳ್ಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ವೀರಶೈವರ, ಒಕ್ಕಲಿಗರ ಕಾಫಿ ಕ್ಲಬ್ ಗಳು ಎಷ್ಟು ಇವೆ, ಉಡಿಪಿ ಕಾಫಿ ಕ್ಲಬ್ ಎಷ್ಟು ಇದೆ ಎಂದು ವಿಚಾರಣೆ ಆಗಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಹರಿಜನರ ಕಾಫಿ ಕ್ಲಬ್ ಎಷ್ಟು ಇದೆ, ಕುಂಚಿಟಿಗರ ಕಾಫಿ ಕ್ಲಬ್ ಎಷ್ಟು ಇದೆ ಅದು ಬರಲಿ.

ಶ್ರೀ ಎಚ್. ಎಸ್. ಸಿದ್ದಪ್ಪ.—ಸಮಾಜವಾದ ಹೇಳುವ ಜನ ಹರಿಜನರ ಕಾಫಿ ಕ್ಲಬ್ ಎಂದು ಹೇಳಿದರೆ ವ್ಯಾಪಾರವಾಗುವುದಿಲ್ಲ. ಅವರು ಬ್ರಾಹ್ಮಣರ ಕಾಫಿ ಕ್ಲಬ್ ಎಂದು ಹೇಳಬೇಕಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಅರ್ಬನ್ ಸೀಲಿಂಗ್ ತರಬೇಕಾದರೆ, ಮೊದಲು ಅದನ್ನು ತನ್ನಿ, ಆಮೇಲೆ ಲ್ಯಾಂಡ್ ಸೀಲಿಂಗ್ ತನ್ನಿ ಎಂದು ಹೇಳುತ್ತೇನೆ. ಅರ್ಬನ್ ಸೀಲಿಂಗ್ ಬುದ್ಧಿವಂತರ ಕೈನಲ್ಲಿದೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ಈ ಭೂಸುಧಾರಣೆ ಮಸೂದೆಯನ್ನು ನಮ್ಮ ಗೆಳೆಯರು ಅವರ ದೃಷ್ಟಿಕೋನಕ್ಕೆ ಬದಲಾವಣೆ ಮಾಡಿ ಮಾತನಾಡಿದ್ದಾರೆ.

ಶ್ರೀ ಡಿ. ಬಿ. ಕಲ್ಮಣ್ಕರ್.—ಎಷ್ಟು ಭೂಮಿತಿ ಇಡಬೇಕು ಹೇಳಿ!

ಶ್ರೀ ಎಚ್. ಎಸ್. ಸಿದ್ದಪ್ಪ.—ಕೆಂಚೇಗೌಡರು ಹೇಳಿದ ಭೂಮಿತಿಗೆ ನಾವು ತಯಾರು. ಮಾನ್ಯ ಸದಸ್ಯರಾದ ಶಿವಯ್ಯನವರು ಒಪ್ಪುವುದಾದರೆ ಅಧ್ಯಕ್ಷರ ಮುಖಾಂತರ ಹೇಳುತ್ತೇನೆ, ಐದು ಎಕರೆ ಭೂಮಿತಿ ಇರಲಿ ಎಂದು. ಅವರು ಒಪ್ಪಿಕೊಳ್ಳುತ್ತಾರೆಯೇ? ನನಗೆ ಬರೀ ಹೆಣ್ಣು ಮಕ್ಕಳು, ನನಗೆ ಜಮೀನಿನ ಮೇಲೆ ಆಸೆ ಇಲ್ಲ. ಈ ಕಂಡಿಷನ್ ಒಪ್ಪಿಕೊಳ್ಳುವುದಾದರೆ ಮಾಡಿ ಎಂದು ಪ್ರಾರ್ಥನೆ ಮಾಡುತ್ತೇನೆ. ನಾನು ಐದು ಎಕರೆ ಮಿತಿಗೆ ತಯಾರಿದ್ದೇನೆ. ನಾವು ಎಲ್ಲರೂ ಒಪ್ಪಿಕೊಳ್ಳುವುದಕ್ಕೆ ತಯಾರು ಇದ್ದೇವೆ.

Sri D.B. KALMANKAR.—Is it that your party stand is like that ? or is it your individual view ?

ಶ್ರೀ ಎಚ್. ಎಸ್. ಸಿದ್ದಪ್ಪ.—ಭೂಮಿತಿಯನ್ನು ನಿಗದಿಗೊಳಿಸುವಾಗ ನಮ್ಮ ದೇಶದಲ್ಲಿ 75 ರಿಂದ 80 ರಷ್ಟಿಗೇನು ರೈತರಿದ್ದಾರೆ ಅವರೆಲ್ಲರ ಸಮಗ್ರ ದೃಷ್ಟಿ ಇಡಬೇಕೇ ಹೊರತು ಕೆಲವೊಂದು ಶಾಸನಸಭೆ ಸದಸ್ಯರ ಅಥವಾ ಇತರರ ದೃಷ್ಟಿ ಇಟ್ಟು ಮಾಡುವುದಾದರೆ ಹೇಗಾಗುವುದೆಂದರೆ ನೀವೇನು ಚುನಾವಣೆ ಸಮಯದಲ್ಲಿ ನಿಮ್ಮ ನಾಯಕರ ಚಿತ್ರ ಇಟ್ಟುಕೊಂಡು ಪ್ರಚಾರಮಾಡಿದಂತಾಗುವುದು. ಶಿವದೇವರ ಫೋಟೋ ಹಿಡಿದುಕೊಂಡು ಹಣ ಸಂಪಾದನೆ ಮಾಡುವಂತೆ ಓಟು ಸಂಪಾದನೆ ಮಾಡಲು ನೀವು ಇಂದಿರಾ ಗಾಂಧಿಯವರ ಫೋಟೋ ಹಾಕಿ ಭಿಕ್ಷೆ ಬೇಡುವ ಸ್ಥಿತಿ ಬರಬಾರದು, ಜನರನ್ನು ದುಸ್ಥಿಗೆ ತಾವು ತಂದಿದ್ದೀರಿ ಎಂದು ಹೇಳಿ ಈ ಭೂಸುಧಾರಣೆ ತಿದ್ದುಪಡಿ ಮಸೂದೆಯ ಮೇಲೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† Sri B. SUBBAIAH SHETTY. (Surathkal).—Mr. Deputy Speaker, Sir, I welcome this piece of legislation. However, the present Bill could be made more realistic and more helpful in the quick implementation of the Land Reforms Act by certain Amendments.

The current land reforms movement emerged as an adjunct to the freedom movement and the Congress party identified itself very

rightly with the farmers and the landless labour and I am glad the Government is very honest in inplementing the Land Reforms Act. Since 25 years we have been talking about land reforms in this Assembly and in several other Assemblies but even today I am really pained that we are in the same stage of discussion on the same problems. I got a glue why for 25 years implementation has been postponed. By hearing the speeches of the Congress (O) members I feel that it was the deliberate intention that the implementation should be delayed. Actually after giving some hopes to the poor people during the elections, they came here and safeguarded their interest. This was abundantly clear from the trend of the speeches during this discussion.

Before I go into the provisions of the Bill, regarding land reforms movement, I would like to draw the attention of the House to certain words of Shri Jawaharlal Nerru in 'Discoverey of India'. On page 303 he says:

> "A more direct blow came from the introduction of the landlord system, changing the whole conception of ownership of land. This conception had been one of communal ownership, not so much of the land as of the produce of the land. Possibly not fully appreciating this, but more probably taking the step deliberately for reasons of their own, the British Governors, themselves representing the English landlord class, introduced something resembling the English system in India. At first they appointed revenue-farmers for short terms, that is, persons who were made responsible for the collection of the revenue or land tax and payment of it to the Government. Later these revenue-farmers developed into landlords. The village community was deprived of all control over the land and its produce; what had always been considered as the chief interest and concern of that community now became the private property of the newly created landowner. This led to the breakdown of the joint life and corporate charecter of the community, and the co-operative system of services and functions began to disappear gradually."

So, it is abundantly clear that this landlord system has deliberately been injected by the British Imperialism to have a strangehold in India at that time. Further I would also refer to what the Governor-General William Benting said in 1829. This makes it clear how at that time the British Imperialism depended mainly on the landlords for their survival in India.

> "Even security was wanting against extensive popular tumults or revolution. I should say that the permanent settlement, though a failure in many respects, has this great advantage at least of having created a vast body of rich

(SRI B. SUBBAIAH SHETTY)

> landed proprietors deeply interested in the continuance of British domination and having complete command over the mass of the people."

As William Benting said, this rich landed gentry had complete sway over the masses and the aspirations of the masses have been strangled. So far we have been paying only lip service to democracy and real democracy has not come to the masses. Now, unless we implement this Land Reforms Act effectively and urgently, the democracy which we talk about will not be within the reach of the poor peasants. So, it is abundantly clear that the present landlord system is alligned to our lands and it is not indigenous or according to our genius. Our genius lay in the fact that the land belonged to the community and not to any individual member of the community. From this background we have to look into the Land Reforms Act. What we are going to do today by this Land Reforms Act is to undo what the British had done-to undo the wrong which the British had done to the rural community.

Now coming to the Land Reforms Bill proper, I would like to take you to Section 4 of the Act. Section 4 of the Act deals mainly with deemed tenancy. It says that if any one tenant lawfully cultivates, he shall be deemed to be tenant. The spirit behind this section is to give protection to the tenants who did not have the lease deeds or some other records. But the spirit of this section was not kept up by the law courts. The interpretation given by our High Court to this section has taken away the spirit of the particular section completely. In this connection, I would like to refer to a case reported in 1971—Mysore Law Journal at Page 633 wherein a tenant has been evicted in 1963 though he was cultivating the land himself—that was an admitted fact, even the court has given a finding that he has been cultivating the land; but he was evicted against the provisions of certain sections. The court held that he was not lawfully holding the land and hence an order was made against him. This clearly shows how the law courts mainly the High Court is biased towards the landlords. Hence it is imperative that the amendments which we make shall be clear and should not give room for the law courts to twist and give an interpretation prejudicial to the tenants and against the spirit in which we pass this amendment. Therefore an amendment to Section 4 just to overcome this difficulty regarding the lawful cultivation shall have to be made.

And amendment to Section 8 has been made. It says that rent shall be 10 times the land revenue. But it has been made applicable from the date of commencement of the Mysore Land Reforms (Amendment) Act 1972. We remember that in this session itself we passed an Act to give relief to the tenants regarding the payment

of rentals. If that relief has to be given, we may have to make certain amendment to Section 8(2). The payment of 10 times land revenue has been made retrospective, *i.e.*, from 2nd October 1965 and not from the commencement of this Act. This defeat the very purpose of passing that tenant relief Act. There is a proviso to this section which says 'that in the case of lands classified as dry but possessing irrigation facilities from sources which is the property of the State Government an additional rent shall be payable.' I do not know why an additional rent has to be paid. This additional tax has been levied for an expenditure incurred by the Government for irrigation purposes. When the Government has spent so much money, then why the advantage should go to the landlord and why the tenant is made responsible for the payment of amount? Hence this proviso should be deleted. In this context my submission is, the area notified by the Government as Malnad area, in this case I submit that South Canara, Coorg, Chikmagalur, North Canara and Shimoga Districts, shall be notified as Malnad area in this proviso itself so that it could be made abundantly clear without giving any room for further thoughts. So, it will be better if it is made abundantly clear by notifying this area as Malnad area.

I go to Section 14: Section 14 is directly connected with section 44. Section 14 deals with resumption of lands and Section 44 deals about vesting of lands. Section 44 is conditional for deciding the cases which come under Section 14. In Section 14, it has been said that the landlord has been given a chance to resume the land either for his personal cultivation or for non-agricultural purposes. Now in the present Bill, the non-agricultural purpose has been deleted; but for personal cultivation is still there. Why this has ben put here, I do not know. There are many cases pending in the court. So, if we delete all these cases, some anomaly might arise. My submission is that particular contention may not be correct. Section 14 (1) (*a*) re: resumption of land for personal cultivation could also be deleted and I am sure no anomaly would arise. Another contention which I hear is, the resumption should be allowed for the minors when he comes of age, widows when she remarries and for the soldiers when he comes back. I should say that this is the highest act of ingratitude to them. My submission is that for these categories of persons, the responsibility should be that of the State. If that responsibility cannot be shouldered by the State, then some scheme has to be evolved and we should not burden that poor tenant to maintain those people. To make the tenant to maintain those people may not be correct. The minor who attains the age of 18 years, he would demand half of the land. Is it not a greatest act of ingratitude done to the tenant? The tenant will have to pay at the cost of his own minor children. I therefore plead that Section 14 should be completely deleted.

Mr. DEPUTY SPEAKER.—We are concerned with the amendment Bill. The hon. member need not go into clauses of the Bill. He has to speak within the ambit of the proposed amendments and not the original clauses.

4-00 P.M.

Sri B. SUBBAIAH SETTY.—Actually I am speaking on the proposed amendments of the Bill. It would be relevant here if I bring to your notice about the observations made by the National Land Reforms Committee. They have prescribed a limitation on all intermediaries between the tiller and the State. It has been said long back and we are doing it today. We have not yet abolished the intermediaries. It would be quite appropriate if we abolish the intermediaries on the 25th Anniversary of India's Independence. It would be right if we do this act that the entire land which is with the tenants shall vset with the State immediately on the passing of this amendment. And unless we delete this section 14 by an amendment, we cannot carry out this intention. Therefore it is imperative that this particular section should be deleted and all the lands held by the tenants shall be made vested with the Government with immediate effect.

There is another section *viz.* 21 (3) which has made this position clear and I welcome it wholeheartedly. In Section 22, we find an under-current of the myth of superior right of landlord. This myth is unwarranted. If the tenant uses the land for something else, he should be evicted. That does not apply to the persons who are holding the lands for the landlords. Why a distinction has been made only against the tenants? So, for these things, a separate section has to be made and this should be made applicable for all the persons and not simply for the tenants. The bias against the tenants should be removed from the Act. Under section 27, regarding the planting of trees, it should be presumed that all the trees which are existing on the land should be treated as having been planted by the tenant. A proviso should be added to section 27.

There is an important provision relating to the dwelling houses of the agricultural labourers. These houses are in a precarious condition. There are many cases pending in the courts for eviction. Even the tenants who are living in the towns and cities, they have got some protection in the form of Rent Control Act; but these labourers and village artisans do not have any protection. If the landlord approaches the court for eviction, he can get possession of his land. The labourer has not been given any protection under section 38. If he proves that he has built and occupied the dwelling house, then only he need not be evicted. But you know how difficult it is for a poor labourer or a village artisan to prove that he has built that house. My submission in this connection is that whatever houses

have been occupied by the landlords' labourers and village artisans, whether they are built by landlords or otherwise, they shall be made vested with the tenants. They must be made the full owner of the Houses. The definition of tenant in the Bill requires a little change. It must be made comprehensive by including the agricultural labourer who is occupying a dwelling house. This should be included in the definition of the tenant.

In this amending Bill we see that the premium payable by the tenant is linked directly with the amount payable to the landlord. My submission is that this should be deleated. The premium payable by the tenant should be reduced and the compensation payable to the landlord should be reduced. A fund may be created known as agricultural rehabilitation fund for the benefit of small landlords and also for agricultural labourers in the rural areas. We must delete the premium payable and the amount payable to the landlords. The amount realised by this method, a separate fund might be created known as agriculturists relief fund. I also feel that small land-holders have been hard hit. That fact that is making the poor tenant to pay 20 times instead of 15 times is not correct. My submission is a tenant or a small land-holder is also a small tenant. To suit the convenience of the small land-holders it is not correct to make a small tenant to pay more. In this connection my submission is if we are earnest in helping these small land-holders who lose all their holdings should be treated as displaced persons and give them all the facilities which are being given to displaced persons.

Coming to the ceiling part, under the proposed Bill, I whole-heartedly support it. On the technical grounds the case in favour of smaller holdings is almost irrefutable. Indian Scientists are rapidly on the way to perfecting a new agricultural technology which under favourable circumstances can result in a much higher level of productivity per acre on small holdings. It is possible for the Indian farmer, unlike his European Counterpart to raise crops throughout the year and the recent developments of numerous short duration crop varieties has already converted this theoretical possibility into a practical proposition. Experiments in multiple and relay cropping at the I.A.R.I. have shown that as much as 15 tonnes of food per hectare can be produced in a single year. This involves an intensity of operations which can only be managed on small farms of ten acres or less. But if large numbers manage to produce even a third of the yields obtained, it will still exceed the average output per acre of the typical mechanised farmer with a large holding in the most progressive Districts to-day highly labour intensive nature of operations involved in paddy indicates that smaller holdings can be more efficiently cropped than larger farms, and also there is the problem of rural poverty which is most important reason for further reducing the size of holdings. Over 70 per cent of the population depends on the land and will continue to do so for many years to come. Unless

(SRI B. SUBBAIAH SHETTY)

we create sufficient employment opportunities by rapid industrialisation in the urban centres we cannot make these rural unemployed to flow to the urban area. Therefore we have to recognise the fact that the rural unemployed have to be provided with jobs.

Therefore it cannot be said to-day that these rural unemployed should be driven out of the villages to the urban areas not giving them any land at all. There is yet 71 per cent of the land is owned by less than a 1/5th of the rural house-holds, each with a holding of 10 acres or more. The vast majority—the remaining 81 per cent own a mere 29 per cent of the cultivated land. Most of them do not even manage to grow enough for their own needs. It is almost certain that their share of the cultivated acreage will be larger still with all its explosive social implications.

Therefore the case is that the ceiling should be made very low and the arguments have been advanced that they should be made economical in the sense that the man should be able to send his child to a Convent School or to the Medical College and all these things have been told. My submission is the reduction of land does not base on the arguments. These arguments are common and it is simply put forward just to prevent the explosive situation in the rural area. Shall we post pone these arguments of social injustic and invite the social explosion ? Therefore, it would not be correct to say, to-day by putting forward a plenty of arguments regarding personal comforts, that the ceiling should be increased to 18, 25, 100 acres. The point is not that. The problem is that of social explosiveness and another point is regarding the Co-operative Societies, relating to co-operative farming. We have seen so far that the co-operative ventures have not been successful in this country. But we must find out reasons why this has not been successful and the remedical measures should be taken. We should not keep quiet just because it has failed in this country. Therefore, my humble submission is in this State we must try this co-operative farming as an experimental measure. When this venture has been so successful in the socialistic countries, why con't we try here with certain modifications such progressive measure ? We can very well do that. With these words I conclude my speech. Thank you.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ಭೂಸುಧಾರಣಾ ವಿಚಾರ ನಮ್ಮ ರಾಜ್ಯದಲ್ಲಿ ಆರಂಭವಾದ ದಿನವನ್ನು ನಾವು ಸ್ವಲ್ಪ ನೆನಪಿಗೆ ತಂದುಕೊಳ್ಳುವುದು ಅವಶ್ಯಕವೆಂದು ನಾನು ಭಾವಿಸುತ್ತೇನೆ. ಭಾರತ ದೇಶವು ಸ್ವಾತಂತ್ರ್ಯಗಳಿಸಿದ ಮೇಲೆ ನಮ್ಮ ರಾಜ್ಯದಲ್ಲಿ ಮೊಟ್ಟಮೊದಲ ಬಾರಿ ಭೂಸುಧಾರಣೆಯ ಮಾತು ಹಾಗೂ ಹೋರಾಟದ ವಿಷಯ ಕೇಳಿ ಬಂದುದು 1949-50ನೇ ಇಸವಿಯಲ್ಲಿ ಕಾಗೋಡು ಹೋರಾಟದಲ್ಲಿ. ಕಾಗೋಡಿನ ಭೂಮಾಲೀಕರು ಆಗ ಅಲ್ಲಿಯ ಗೇಣೀದಾರರಿಂದ ಮಿತಿಮೀರಿದ ಗೇಣಿಯನ್ನು ವಸೂಲು ಮಾಡುತ್ತಿದ್ದಾಗ, ರೈತನು ಕಷ್ಟಪಟ್ಟು ದುಡಿದುದನ್ನು ಭೂಮಾಲೀಕರೆ ದೋಚಿಕೊಂಡು ಹೋಗುತ್ತಿದ್ದಾಗ, ಅದನ್ನು ಪ್ರತಿಭಟಿಸಿ ಮಣ್ಣಿನ ಮಗ ಯಾರಿದ್ದಾನೆ, ಯಾರು ಅದರಲ್ಲಿ ದುಡಿಮೆಯನ್ನು ಮಾಡುತ್ತಾನೆ ಅತನಿಗೆಯೇ ಹೆಚ್ಚು

ಅದರಿಂದ ಲಭ್ಯವಾಗಬೇಕು ಎನ್ನುವ ನ್ಯಾಯ ಸಮ್ಮತವಾದ ನೀತಿಯ ಮೇಲೆ ಹೋರಾಟವನ್ನು ಆರಂಭ ಮಾಡಿದ್ದು 1949-50ನೆ ಇಸವಿಯಲ್ಲಿ ನಮ್ಮ ಸೋಸಿಯಲಿಸ್ಟ್ ಪಕ್ಷ. ಆ ಹೋರಾಟವು ಕಾಗೋಡಿನಲ್ಲಿ ನಡೆಯಿತು.

ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಮ್ಮ ಕಾಂಗ್ರೆಸ್ ಸ್ನೇಹಿತರು ಭೂ ಸುಧಾರಣೆಯನ್ನು ತಾವೇ ಮಾಡುತ್ತಿರುವ ಹಾಗೂ ಈ ಕಡೆ ಮತ್ತು ಆ ಕಡೆ ಎಲ್ಲಾ ಮಾನ್ಯ ಸದಸ್ಯರೂ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಈಗ ಈ ಕಡೆ ಇರುವವರು ಆ ಕಡೆ ಇದ್ದಾಗ 1952 ನೇ ಇಸವಿಯಲ್ಲಿ ಗೇಣಿ ಕಾನೂನನ್ನು ತರುವ ಹಾಗೆ ಮಾಡಿದ್ದವರು. ಈಗ ಈ ಕಡೆ ಇರುವವರು ಆ ಕಡೆ ಇದ್ದಾಗ 1952 ನೇ ಇಸವಿಯಲ್ಲಿ ಗೇಣಿಕಾನೂನನ್ನೂ ತರುವ ಹಾಗೆ ಮಾಡಿದ್ದರು. ಈಗ ಈ ಕಡೆ ಇರತಕ್ಕವರು ಈ ತಿದ್ದುಪಡಿ ಮಸೂದೆಯನ್ನು ತರುವ ಹಾಗೆ ಮಾಡಿದ್ದಾರೆ. ಎಲ್ಲಕ್ಕೂ ಕೂಡ ಮೂಲ ಕಾರಣ ಕಾಗೋಡು ಹೋರಾಟ. ಈಗ ಈ ಸಭೆಯ ಸದಸ್ಯರಾಗಿರುವ ಶ್ರೀ ಕಾಗೋಡು ತಿಮ್ಮಪ್ಪನವರು ಅದೇ ಊರಿನವರು. ಅವರು ಒಬ್ಬ ಗೇಣಿದಾರ ಕುಟುಂಬದವರು ಇಂಥ ಗೇಣಿದಾರ ಕುಟುಂಬದವರ ಮೇಲೆ ಅಲ್ಲಿಯ ಭೂಮಾಲಿಕರು ಏನು ದಬ್ಬಾಳಿಕೆಯನ್ನು ನಡೆಸಿ, ಭೂಮಿಯನ್ನು ಉತ್ತು ಬೆಳೆವ ಜನಗಳಿಗೆ ಮಣ್ಣು ಕೊಟ್ಟು ಬೆಳೆದ ಧಾನ್ಯವನ್ನು ಅವರೇ ದೋಚಿಗೊಂಡು ಹೋಗುತ್ತಿದ್ದರು. ಆ ಸಂದರ್ಭದಲ್ಲಿ ಅವರ ವಿರುದ್ಧ ನಮ್ಮ ಸೋಷಲಿಸ್ಟ್ ಪಾರ್ಟಿಯವರು ಪ್ರತಿಭಟನೆಯನ್ನು ಮಾಡಿದರು. ಈ ಸಂದರ್ಭದಲ್ಲಿ ನಮ್ಮ ಪೂಜ್ಯ ಗುರುಗಳಾದ ಶ್ರೀ ಗೋಪಾಲಗೌಡರನ್ನು ಸ್ಮರಿಸುವುದು ಅವಶ್ಯಕ. ಏತಕ್ಕೆಂದರೆ ಅವರು ಇಂಥಾ ಹೋರಾಟದ ನಾಯಕತ್ವವನ್ನು ವಹಿಸಿ ಅಲ್ಲಿ ಹೋರಾಟ ನಡೆಸಿದರು. ಅದರಂತೆ ಈ ಮೇಲ್ಮನೆಯ ಸದಸ್ಯರಾಗಿರತಕ್ಕ ಶ್ರೀ ವೈ. ಆರ್. ಪರಮೇಶ್ವರಪ್ಪನವರು ಇಲ್ಲಿ ಉಪಸ್ಥಿತರಾಗಿರತಕ್ಕ ಶ್ರೀ ಹಮೀದ್ ಷಾ ಅವರು, ಶ್ರೀಮಾನ್ ಶಿವಯ್ಯನವರು, ಇವರೆಲ್ಲರೂ ಆ ಹೋರಾಟದಲ್ಲಿ ಪಾಲ್ಗೊಂಡಿದ್ದರು. ಮತ್ತು ಈ ಹೋರಾಟದಲ್ಲಿ ಪಾಲ್ಗೊಂಡ ಡಾ. ಲೋಹಿಯಾ ಅವರನ್ನು ಇಂದು ನಾವು ಸ್ಮರಿಸಿಕೊಳ್ಳಬೇಕಾಗಿದೆ ಈ ಹೋರಾಟದ ಆರಂಭದಿಂದ ಇಂದಿನವರೆಗೆ ಅದು ನಡೆದುಕೊಂಡೇ ಬಂದಿದೆ. ಭೂಸುಧಾರಣೆಯನ್ನು ಜಾರಿಗೆ ತರಬೇಕು, ಉಳುವವನೇ ಹೊಲದ ಒಡೆಯನಾಗಬೇಕು ಎನ್ನುವ ಕೂಗು ರಾಜ್ಯದಲ್ಲಿ ಆರಂಭವಾದದ್ದು ಕಾಗೋಡಿನ ಹೋರಾಟ ಕಾಲದಿಂದ. ಇದನ್ನು ಸೋಷಲಿಸ್ಟ್ ಪಾರ್ಟಿ ಆರಂಭ ಮಾಡಿತು. ನಾನು ಇದನ್ನು ಪಕ್ಷದ ದೃಷ್ಟಿಯಿಂದ ಹೇಳುತ್ತಿಲ್ಲ ಚಾರಿತ್ರಿಕ ವಾಸ್ತವಿಕ ವಿಚಾರವನ್ನು ಹೇಳುತ್ತಿದ್ದೇನೆ. ಭೂಕ್ರಾಂತಿಯಾಗಬೇಕು, ಭೂಸುಧಾರಣೆಯನ್ನು ತರಬೇಕು ಎಂದು ಕಳೆದ 25 ವರ್ಷಗಳಿಂದ ನಮ್ಮ ಪಾರ್ಟಿ ಅವಿಶ್ರಾಂತವಾಗಿ ಹೋರಾಟ ಮಾಡಿಕೊಂಡು ಬಂದಿರುವುದಕ್ಕೆ ಸಾಕಷ್ಟು ರುಜುವಾತು ಇದೆ. ಸೋಷಲಿಸ್ಟ್ ಪಾರ್ಟಿಯವರ ಹೋರಾಟದ ಪ್ರತಿಫಲದಿಂದ ಇಡೀ ರಾಷ್ಟ್ರದಲ್ಲಿ ಭೂಸುಧಾರಣೆಯನ್ನು ತರಬೇಕು ಎನ್ನುವ ಒಂದು ವಾತಾವರಣ ನಿರ್ಮಾಣವಾಯಿತು. ಆದ್ದರಿಂದ ಭೂಸುಧಾರಣೆಯ ಒಂದು ವಾತಾವರಣವನ್ನು ನಿರ್ಮಾಣ ಮಾಡಿದಂತಹ ಒಂದು ಕೀರ್ತಿ ಸೋಷಲಿಸ್ಟ್ ಪಾರ್ಟಿಗೆ ಸಲ್ಲಬೇಕು ಎಂದು ನಾನು ನಿರ್ವಿವಾದವಾಗಿ ಹೇಳುತ್ತೇನೆ. ಇವೊತ್ತಿನ ದಿವಸ ತಂದಿರತಕ್ಕ ಭೂಸುಧಾರಣೆಯ ತಿದ್ದುಪಡಿ ಮಸೂದೆ ಇದೆ ಇದನ್ನು ತರುವುದಕ್ಕೆ ಮುಂಚೆ ಹಿಂದಿನ ಸರ್ಕಾರದಲ್ಲಿ ಎಂದರೆ 1961ನೇ ಇಸವಿಯಲ್ಲಿ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ರೆವಿನ್ಯೂ ಮಂತ್ರಿಗಳಾಗಿದ್ದಾಗ ಒಂದು ಸುಧಾರಣೆಯ ಗೇಣಿ ಶಾಸನವನ್ನು ತಂದಿದ್ದರು. ಅದು ಮೂಲ ಮಸೂದೆ, ಮತ್ತು ಕ್ರಾಂತಿಕಾರಕವಾದ ಮಸೂದೆಯಾಗಿತ್ತು ಎಂದು ಹೇಳುತ್ತಾರೆ. ಆದರೆ ಅದನ್ನು ಜಾರಿಗೆ ತರುವುದಕ್ಕೆ ಬಿಡದೆ ಅದಕ್ಕೆ ಸಾಕಷ್ಟು ಅಡ್ಡಗಾಲನ್ನು ಇಟ್ಟು ಅದನ್ನು ನಿರ್ಜೀವವಾಗಿ ಮಾಡಿದ್ದರು. ಈಗ ಅದಕ್ಕೆ ತಿದ್ದುಪಡಿ ಸೂಚನೆ ಮಾಡಿ ಈ ಸಭೆಯಲ್ಲಿ ತಂದ ಕೀರ್ತಿ ಕಾಂಗ್ರೆಸ್ಸಿಗೆ ಸಲ್ಲುತ್ತದೆ ಅದನ್ನು ಜಾರಿಗೆ ಕೊಡುವಾಗ ಅತ್ಯಂತ ವಿಳಂಬ ಮಾಡಿದ ಕೀರ್ತಿ ಕಾಂಗ್ರೆಸ್ಸಿಗೆ ಸಲ್ಲುತ್ತದೆ. ಇವೊತ್ತು ಸರ್ಕಾರದವರು ತಂದಿರತಕ್ಕ ಭೂಸುಧಾರಣಾ ತಿದ್ದುಪಡಿ ಮಸೂದೆ ಕೂಡ ನಮ್ಮ ದೃಷ್ಟಿಯಲ್ಲಿ ಪ್ರಗತಿದಾಯಕ ಮಸೂದೆಯಲ್ಲ. ಇವರು ಏನೋ ಒಂದು ಕೇಳುತ್ತಾರೆ ಮಾಡ್ತೀವಿ ಎಂದು ಪ್ರಯತ್ನ ಮಾಡಿರುವ ಪ್ರಗತಿಯ ಮಾರ್ಗದಲ್ಲಿ ನಡೆಯುವ ಒಂದು ಸಣ್ಣ ಹೆಜ್ಜೆ ಎಂದು ನಮ್ಮ ಸ್ಪಷ್ಟ ಅಭಿಪ್ರಾಯ. ಇದರಿಂದ ಭೂಸುಧಾರಣೆಯಾಯಿತು, ಉಳುವವನೇ ಹೊಲದ ಒಡೆಯ ಆದ ಎನ್ನುವ ಮಾತನ್ನು ಒಪ್ಪುವುದಕ್ಕಾಗುವುದಿಲ್ಲ. ನಿಜವಾಗಿ ಮಣ್ಣಿನ ಮಗ ಯಾರು ಇದ್ದಾನೆ ಅವನಿಗೆ ಭೂಮಿ ಹೋಗಬೇಕು. ಯಾರು ಭೂಮಿಯಲ್ಲಿ ಕೃಷಿ ಮಾಡಿ ಕಷ್ಟಪಟ್ಟು ಬೆವರು ಸುರಿಸಿ ಬೆಳೆಯನ್ನು ಬೆಳೆಯುತ್ತಾರೆ ಅವನೇ ಹೊಲದ ಒಡೆಯ, ರೈತ. ಕೆಲವು ಗೇಣಿದಾರ ರೈತರೂ ಇದ್ದಾರೆ, ಸ್ವಂತ ಸಾಗುವಳಿ ಮಾಡತಕ್ಕ ರೈತರೂ ಇದ್ದಾರೆ. ಯಾರು ಭೂಮಿಯನ್ನು ಸ್ವಂತವಾಗಿ ಉತ್ತು, ಬಿತ್ತಿ ಬೆಳೆಯುತ್ತಾರೆ ಅವನು ರೈತ ಎಂದು ಹೇಳುತ್ತಾರೆ. ಅವನಿಗೆ ಭೂಮಿ ಹೋಗಬೇಕು. ಲ್ಯಾಂಡ್ ಟು ದಿ ಟಿಲ್ಲರ್. ಆದರೆ ಇವೊತ್ತು

(ಶ್ರೀ ಕೋಣಂದೂರು ಲಿಂಗಪ್ಪ)

ಮಾಡಿದಂತಹ ವಿಧಿಯ ಪ್ರಕಾರ ಎಲ್ಲಿಗೆ ಬಂದಿದೆ ಎಂದರೆ ಲ್ಯಾಂಡ್ ಟು ದಿ ಸೂಪರ್‌ವೈಜರ್ ಎನ್ನುವಂತೆ ಆಗಿದೆ. ಭೂಸುಧಾರಣೆಯಾಗಬೇಕು, ಲ್ಯಾಂಡ್ ಟು ದಿ ಟಿಲ್ಲರ್ ಆಗಬೇಕು, ಉಳುವವನೇ ಭೂಮಿಯ ಒಡೆಯನಾಗಬೇಕು ಎಂಬುದು ಉದ್ದೇಶ. ಈಗ ಲ್ಯಾಂಡ್ ಟು ದಿ ಸೂಪರ್‌ವೈಜರ್ ಎಂದು ಆಗಿದೆ. ಯಾರು ಸೂಪರ್‌ವಿಜನ್ ಮಾಡುತ್ತಾರೆಯೋ ಅವರು ದೊಡ್ಡ ರೈತರು. ದೊಡ್ಡ ರೈತರು ಯಾರು ಎಂದರೆ ಪೇಟೆಯಲ್ಲಿ ಕುಳಿತುಕೊಂಡು ಭೂಮಿಯನ್ನು ಉತ್ತು ಬಿತ್ತಿ ಬೆಳೆದು ರೈತ ತೆಗೆದುಕೊಂಡು ಹೋಗಿ ಹಾಕಿದ್ದನ್ನು ತಿಂದು ಬೊಜ್ಜು ಬೆಳೆಸಿಕೊಂಡಿರುವವರು ದೊಡ್ಡ ರೈತರು ಎಂದು ನಾನು ತಿಳಿದುಕೊಂಡಿದ್ದೇನೆ. ನಿಜವಾದ ರೈತ ಯಾರು ಎಂದರೆ ಯಾರು ಭೂಮಿಯನ್ನು ಉತ್ತು ಬಿತ್ತಿ ಬೆವರು ಸುರಿಸಿ ಬೆಳೆಯನ್ನು ಬೆಳೆಯುತ್ತಾರೆಯೋ ಅವನು ರೈತ. ಯಾರು ಭೂಮಿಯನ್ನು ಉಳುವುದಿಲ್ಲ, ಅವರ ಕೈಯಲ್ಲಿ ಭೂಮಿ ಇರಕೂಡದು. ಅವರು ಅದರಿಂದ ಬಂದತಕ್ಕ ಬೆಳೆಯನ್ನು ಉಣ್ಣುವುದಕ್ಕೆ ಹಕ್ಕು ಇಲ್ಲ ಎಂದು ನಮ್ಮ ವಾದ. ಶ್ರೀಮಾನ್ ಸುಬ್ಬಯ್ಯ ಶೆಟ್ಟಿಯವರು ಮತ್ತು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದಹಾಗೆ ಈ ಮಸೂದೆಯಲ್ಲಿ 14ನೇ ಸೆಕ್ಷನ್ ತೆಗೆಯಬೇಕು. ಅದನ್ನು ತೆಗೆಯುವವರೆಗೂ ನಿಜವಾದ ಭೂಸುಧಾರಣೆಯ ಸಾರ್ಥಕತೆಯನ್ನು ಕಂಡುಹಿಡಿಯುವುದಕ್ಕೆ ಆಗುವುದಿಲ್ಲ. ಆ 14ನೇ ಸೆಕ್ಷನ್ ಭೂಸುಧಾರಣಾ ಮಸೂದೆಯಲ್ಲಿ ಇರುವವರೆಗೂ ಲ್ಯಾಂಡ್ ಟು ದಿ ಸೂಪರ್‌ವೈಜರ್ ಆಗುತ್ತದೆ. ಈ 14ನೇ ಸೆಕ್ಷನ್ ಇದೆ ಇದು ಭೂಮಾಲೀಕರು ಗೇಣಿದಾರರಿಂದ ಭೂಮಿಯನ್ನು ಬಿಡಿಸಿಕೊಳ್ಳುವ ಸೆಕ್ಷನ್ ಆದ್ದರಿಂದ ಇದನ್ನು ಮೊದಲು ಭೂಸುಧಾರಣಾ ಮಸೂದೆಯಿಂದ ತೆಗೆದುಹಾಕಬೇಕು. ಅದನ್ನು ತೆಗೆಯುವವರೆಗೂ ಇದನ್ನು ಭೂಸುಧಾರಣೆ ಎಂದು ಕರೆಯುವುದಕ್ಕೆ ಹಿಂದೆಮುಂದೆ ನೋಡಬೇಕಾಗುತ್ತದೆ.

ಇನ್ನು ಸಣ್ಣ ಹಿಡುವಳಿಗಳಿಂದ ಹೆಚ್ಚು ಉತ್ಪತ್ತಿ ಆಗುವುದಿಲ್ಲ ದೊಡ್ಡ ದೊಡ್ಡ ಹಿಡುವಳಿಗಳು ಇದ್ದರೆ ಅದರಿಂದ ಉತ್ಪತ್ತಿ ಹೆಚ್ಚು ಆಗುತ್ತದೆ ಉದಾಹರಣೆಗೆ ಅಮೇರಿಕಾ ನೋಡಿ, ಅಲ್ಲಿ ನೋಡಿ ಇಲ್ಲಿ ನೋಡಿ ಎಂದು ಹೇಳುತ್ತಾರೆ. ಇದು ನಮಗೆ ಗೊತ್ತಿದೆ. ಜಪಾನ್‌ನಲ್ಲಿ 5 ಎಕರೆಯ ಹಿಡುವಳಿ 9[illegible] ಪರ್ಸೆಂಟ್ ಇದೆ. ನಮ್ಮ ಭಾರತದಲ್ಲಿ 84 ಪರ್ಸೆಂಟ್ ಹಿಡುವಳಿ ಇದೆ. 40 ಪರ್ಸೆಂಟ್ ಹಿಡುವಳಿದಾರರು ಇದ್ದಾರೆ.

ಉಪಾಧ್ಯಕ್ಷರು.—ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಇದನ್ನು ಹೇಳಿದ್ದಾರೆ. ಬೇರೆ ಪಾಯಿಂಟ್ ಇದ್ದರೆ ಹೇಳಿ.

4-30 P.M.

ಇಲ್ಲಿರತಕ್ಕಂಥ ತಾರತಮ್ಯವನ್ನು ನಾವು ವಿವೇಚಿಸಿದ್ದೇ ಆದರೆ, ಇದರಲ್ಲಿ ಎಷ್ಟು ಏರುಪೇರು ಇದೆ ಎಂಬುದನ್ನು ಮನಗಾಣುವುದಕ್ಕೆ ಸಾಧ್ಯವಿದೆ. ಒಬ್ಬರಿಗೆ 3-4 ಎಕರೆ ಭೂಮಿಯನ್ನು ಕೊಟ್ಟರೆ, ಅವರಿಗೆ ಅದನ್ನು ರೂಢಿಸಿಕೊಳ್ಳುವುದು ಕಷ್ಟ, ಅವರಿಗೆ ಆರ್ಥಿಕ ತೊಂದರೆ ಇರುತ್ತವೆ, ಆದ್ದರಿಂದ ಉತ್ಪತ್ತಿ ಜಾಸ್ತಿ ಅವರಿಂದ ಆಗುವುದಿಲ್ಲ ಎಂದು ಹೇಳುವುದು ಅಷ್ಟು ಸರಿಯಲ್ಲ. ಸಣ್ಣ ಸಣ್ಣ ಹಿಡುವಳಿಯಿಂದ ಹೆಚ್ಚು ಉತ್ಪನ್ನವಾಗುವುದಿಲ್ಲ ಎಂಬ ಮಾತನ್ನು ಕಮ್ಯೂನಿಸ್ಟ್ ರಾಜ್ಯದವರು ಹೇಳುತ್ತಾರೆ, ಬಂಡವಾಳಶಾಹಿ ರಾಜ್ಯವಾದ ಅಮೇರಿಕಾದವರು ಸಹ ಹೇಳುತ್ತಾರೆ. ಈ ಕಾರಣದಿಂದ ಸಾಮೂಹಿಕವಾಗಿ ಬೇಸಾಯ ಮಾಡಬೇಕು, ದೊಡ್ಡ ದೊಡ್ಡ ಹಿಡುವಳಿ ಇರಬೇಕು, ಸೀಲಿಂಗ್ ಲಿಮಿಟ್ ಹೆಚ್ಚು ಇರಬೇಕು ಎಂದು ಹೇಳುತ್ತಾರೆ. ಸೀಲಿಂಗ್ ಲಿಮಿಟ್ ಇರಬಾರದು ಎಂದು ಹೇಳುವವರು ಸಹ ಇದ್ದಾರೆ. ಈ ವಿಚಾರದಲ್ಲಿ ಕಮ್ಯೂನಿಸ್ಟ್ ರಾಜ್ಯದವರ ಮತ್ತು ಬಂಡವಾಳಶಾಹಿ ರಾಜ್ಯಗಳವರ ಅಭಿಪ್ರಾಯ ಒಂದೇ ಆಗಿದೆ. ಹಿಡುವಳಿ ಒಂದು ಮಿತಿಯೊಳಗೆ ಇರಬೇಕು, ಪ್ರತಿಯೊಬ್ಬರಿಗೂ ಜಮೀನು ಇರಬೇಕು ಎಂದು ಹೇಳುವವರು ನಾವು. ಸಣ್ಣ ಹಿಡುವಳಿದಾರರು ಹೆಚ್ಚು ಇದ್ದರೇನೆ ಒಳ್ಳೆಯದು. ಇದಕ್ಕೆ ಜಪಾನ್ ದೇಶವನ್ನು ಉದಾಹರಣೆಗೆ ತೆಗೆದುಕೊಂಡರೆ, ಅಲ್ಲಿ ಸಣ್ಣ ಹಿಡುವಳಿದಾರರೇ ಹೆಚ್ಚು ಮಂದಿ ಇದ್ದಾರೆ. ಮತ್ತು ಅವರು ಹೆಚ್ಚು ಉತ್ಪತ್ತಿ ಮಾಡುತ್ತಿದ್ದಾರೆ. ಅದರ ಅಂಕಿಅಂಶಗಳು ನನ್ನಲ್ಲಿ ಇವೆ. ಅದರ ವಿವರಗಳನ್ನು ಈಗ ಹೇಳುವುದಕ್ಕೆ ಹೋಗುವುದಿಲ್ಲ. ಈಗ ತಂದಿರತಕ್ಕ ಭೂಸುಧಾರಣೆಯಿಂದ ಎರಡು ಪರ್ಸೆಂಟ್ ಜನರಿಗೆ ತೊಂದರೆಯಾಗಬಹುದು ಎಂಬ ಮಾತನ್ನು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ. ವ್ಯಕ್ತಿ ಅಥವಾ ಮನುಷ್ಯ ಎಂಬ ಪದಕ್ಕೆ ವಿವರಣೆಯನ್ನು ಇಲ್ಲಿ ಈ ರೀತಿ ಕೊಟ್ಟಿದ್ದಾರೆ —

> " 'ಮನುಷ್ಯ' ಎಂದರೆ, ಒಬ್ಬ ಸ್ವಾಭಾವಿಕ ವ್ಯಕ್ತಿ ಅಥವಾ ಸ್ವಾಭಾವಿಕ ವ್ಯಕ್ತಿಗಳು ಇರುವ ಒಂದು ಕುಟುಂಬ ಎಂದು ಅರ್ಥ, ಆದರೆ ಅದರಲ್ಲಿ ಸಂಯುಕ್ತ ಹಿಂದೂ

ಕುಟುಂಬ ಅಳಿಯ ಸಂತಾನ ಕುಟುಂಬ, ಸ್ವತ್ತನ್ನು ಪಡೆಯಲು ಶಕ್ತಿಯುಳ್ಳ ಸಂಸ್ಥೆ ಕಂಪನಿ, ನಿಗಮಿತವಾದ ಅಥವಾ ಆಗಿರದ ವ್ಯಕ್ತಿಗಳ ಸಂಘ ಅಥವಾ ಇತರ ಸಂಸ್ಥೆ ಸೇರತಕ್ಕದಲ್ಲ."

ಈ ರೀತಿ ಹೇಳಿರುವುದರಿಂದ, ಈ ಭೂಸುಧಾರಣಾ ತಿದ್ದುಪಡಿಯ ಕಕ್ಷೆಯಲ್ಲಿ ಶ್ರೀಮಾನ್ ಚೆನ್ನಬಸಪ್ಪನವರ ನಂದೀಪುರ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ, ಶ್ರೀಮಾನ್ ಘೋರ್ಪಡೆಯವರ ವಿದ್ಯಾಸಂಸ್ಥೆಗಳ ಹೆಸರಿನಲ್ಲಿರತಕ್ಕ ಜಮೀನುಗಳು ಬರುವುದಿಲ್ಲ. ಬುದ್ಧಿವಂತರಾದವರು ಈಗಾಗಲೇ ವ್ಯವಸ್ಥಿತವಾಗಿ ಏನು ವಿತರಣೆ ಮಾಡಿದ್ದಾರೆ, ಅದು ಯಾವುದಕ್ಕೂ ವಿನಾಯಿತಿ ಕೊಡದೆ, ಎಲ್ಲವನ್ನೂ ಈ ಭೂಸುಧಾರಣಾ ಮಿತಿಯೊಳಗೆ ತರಬೇಕೆಂಬುದು ನಮ್ಮ ಸ್ಪಷ್ಟವಾದ ಅಭಿಪ್ರಾಯ. ಒಂದು ಕೈಯಲ್ಲಿ ತೆಗೆದುಕೊಳ್ಳುವುದು, ಮತ್ತೊಂದು ಕೈಯಲ್ಲಿ ಕೊಡುವುದು, ಇವೆರಡೂ ಇದರಲ್ಲಿ ಸೇರಿದೆ. ಅದು ಸರಿಯಲ್ಲ. ಎಲ್ಲವೂ ಇದರ ವ್ಯಾಪ್ತಿಯೊಳಗೆ ಬರುವಂತೆ ಸರ್ಕಾರದವರು ತಿದ್ದುಪಡಿ ಮಸೂದೆಯನ್ನು ತರಬೇಕಾಗಿತ್ತು. ಈ ಬಗ್ಗೆ ಸರ್ಕಾರದವರು ಪುನಃ ಯೋಚನೆ ಮಾಡುವುದು ಒಳ್ಳೆಯದು.

ಮತ್ತೊಂದು ಮುಖ್ಯವಾದ ವಿಷಯವೆಂದರೆ, ಸರ್ಕಾರದವರು ಯಾರಿಂದ ಭೂಮಿಯನ್ನು ಪಡೆದುಕೊಳ್ಳುತ್ತಾರೋ, ಅವರಿಗೆ ಪರಿಹಾರ ಕೊಡುವ ವಿಷಯ ಇದರಲ್ಲಿ ಇದೆ. ಸಣ್ಣ ಹಿಡುವಳಿದಾರರ ಹಿತಸಂರಕ್ಷಣೆ ಗೇಣಿದಾರರ ಹಿತಸಂರಕ್ಷಣೆಯಷ್ಟೇ ಮುಖ್ಯವಾದುದು. ಸಣ್ಣ ಹಿಡುವಳಿದಾರರು ಎಂದರೆ ಯಾರು? ನಮ್ಮ ದೃಷ್ಟಿಯೊಳಗೆ ಯಾರು ಸೀಲಿಂಗ್ ಲಿಮಿಟ್‌ಗಿಂತ ಕಡಿಮೆ ಭೂಮಿಯನ್ನು ಹೊಂದಿದ್ದು, ಅದನ್ನೇ ಗೇಣಿಗೆ ಕೊಟ್ಟು, ಅದರಿಂದ ಬರುವ ವರಮಾನವನ್ನೇ ಅವಲಂಬಿಸಿರುತ್ತಾರೋ, ಅವರೇ ಸಣ್ಣ ಹಿಡುವಳಿದಾರರು. ಇಂದು ಶ್ರೀಮಾನ್ ಶೀರ್‌ನಾಳಿ ಚಂದ್ರಶೇಖರಯ್ಯನವರು ಸಹ ಸಣ್ಣ ಹಿಡುವಳಿದಾರರಾಗಿದ್ದಾರೆ. ಅವರ ಬಗ್ಗೆ ನಾನು ಈಗ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಅವರಲ್ಲಿರುವ ಜಮೀನನ್ನು ಬೇರೆಯವರಿಗೆ ಕೊಟ್ಟುಬಿಟ್ಟಿದ್ದಾರೆ. ಅವರು ಗೇಣಿ ಆಳಿಸುತ್ತಿರುವ ವಿಚಾರವನ್ನಾಗಲೀ, ಜಮೀನನ್ನು ಮಾರಾಟ ಮಾಡಿದ ವಿಷಯವನ್ನಾಗಲೀ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಮುಖ್ಯವಾಗಿ ಹತ್ತು ಎಕರೆಗಿಂತ ಕಡಿಮೆ ಜಮೀನು ಯಾರಿಗೆ ಇರುತ್ತದೋ, ಅವರಿಂದ ಜಮೀನನ್ನು ಸ್ವಾಧೀನಪಡಿಸಿಕೊಂಡರೆ, ಆ ಜಮೀನಿನ ಮಾರ್ಕೆಟ್ ಬೆಲೆಯನ್ನು ಒಂದೇ ಗಂಟಿನಲ್ಲಿ ಸರ್ಕಾರದವರೇ ಕೊಡಬೇಕು. ಗೇಣಿದಾರರಿಂದ ಪಡೆದು ಕೊಡುವುದೇ ಬೇಡ. ಇಂದು ನಮ್ಮ ರಾಜ್ಯದಲ್ಲಿ 10 ಎಕರೆಯೊಳಗೆ ಜಮೀನು ಇರತಕ್ಕಂಥವರು 17 ಲಕ್ಷ ಮಂದಿ ಇದ್ದಾರೆ. ಈ ಮಿತಿಯೊಳಗೆ 68 ಲಕ್ಷ ಎಕರೆ ಜಮೀನು ಬರುತ್ತದೆ. ಈ 17 ಲಕ್ಷ ಮಂದಿಯ ಪೈಕಿ 3-4 ಲಕ್ಷ ಜನರು ಜಮೀನು ಕಳೆದುಕೊಳ್ಳುವ ಪರಿಸ್ಥಿತಿ ಬರಬಹುದು. ಅಂತಹವರಿಗೆ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಿ. ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಎಲ್ಲ ಕ್ಷೇತ್ರಗಳಲ್ಲಿಯೂ ಸಮಾನತೆ ಬರಬೇಕೆಂದು ಈಗಾಗಲೇ ಮಾತನಾಡಿದಂತಹ ಶ್ರೀಮಾನ್ ಕಂಚೇಗೌಡರು ಮತ್ತು ಶ್ರೀಮಾನ್ ವೀರಪ್ಪಗೌಡರು ಏನು ಹೇಳಿದರು, ಆ ಮಾತನ್ನು ನಮ್ಮ ಸೋಷಿಯಲಿಸ್ಟ್ ಪಕ್ಷದವರು ಕಳೆದ 25 ವರ್ಷಗಳಿಂದಲೂ ಹೇಳಿಕೊಂಡು ಬಂದಿದ್ದಾರೆ. ವ್ಯವಸಾಯ ಕ್ಷೇತ್ರದಲ್ಲಿ ರೈತರಿಗೆ ಸೀಲಿಂಗ್ ತಂದು, ಬೇರೆ ಕ್ಷೇತ್ರಗಳತ್ತ ತರಬಾರದು ಎಂದು ಹೇಳುತ್ತಿರುವವರು ಕಾಂಗ್ರೆಸ್‌ನವರು. ಎಲ್ಲ ಕ್ಷೇತ್ರಗಳಲ್ಲಿಯೂ ಸೀಲಿಂಗ್ ಲಿಮಿಟ್‌ನ್ನು ಇವರು ಏತಕ್ಕೆ ತರಬಾರದಾಗಿತ್ತು? ಈಗ ತಂದಿರತಕ್ಕಂಥಾದನ್ನು ಮುಂದುವರಿಸುವುದಕ್ಕೆ ಆ ರೀತಿ ಅವರು ಹೇಳುತ್ತಿರುವುದು ಜಾಣತನದ ಮಾತಾಗುತ್ತದೆ. ನಗರದ ಆಸ್ತಿಯ ಮೇಲೆ ಮೊದಲು ಮಿತಿ ಹಾಕಬೇಕು. ರಾಷ್ಟ್ರಪತಿಯವರಿಂದ ಹಿಡಿದು ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ನಾಲ್ಕನೇ ದರ್ಜೆಯ ನೌಕರರವರೆಗೆ ವರಮಾನದ ಮಿತಿ ಹಾಕಬೇಕು. ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿಗಿಂತ ಹೆಚ್ಚು ಆದಾಯ ಯಾರಿಗೂ ಇರಬಾರದು. ಎಲ್ಲ ಕ್ಷೇತ್ರಗಳಲ್ಲಿಯೂ ಏಕಕಾಲದಲ್ಲಿ ಮಿತಿ ತರುವುದರ ಮೂಲಕ ಎಲ್ಲವನ್ನೂ ಸರಿದೂಗಿಸುವುದಕ್ಕೆ ಸಾಧ್ಯ ಎಂದು ನಾವು ಹಿಂದಿನಿಂದಲೂ ಹೇಳುತ್ತಿದ್ದೇವೆ, ಈಗಲೂ ಹೇಳುತ್ತಿದ್ದೇವೆ, ಮುಂದೆಯೂ ಹೇಳುತ್ತೇವೆ. ಸರ್ಕಾರಕ್ಕೆ ಧೈರ್ಯವಿದ್ದರೆ, ಏನಾದರೂ ಶಕ್ತಿ ಇದ್ದರೆ ಅಥವಾ ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಜನರಿಗೆ ಭರವಸೆ ಕೊಟ್ಟಿರುವ ಪ್ರಕಾರ ಮಾತನ್ನು ಉಳಿಸಿಕೊಳ್ಳಬೇಕು ಎಂಬ ನಿಷ್ಠೆಯಿದ್ದರೆ ಈಗ ತಂದಿರತಕ್ಕಂಥ 10 ಎಕರೆಯ ಮಿತಿ ಇದೆ, ಆ ಮಿತಿಯನ್ನು ಉಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಜೊತೆಯಲ್ಲಿ ಹತ್ತು ಎಕರೆ ಮಿತಿ ಎಂದು ಇಲ್ಲಿ ಮಾಡಲಾಗಿದೆ. ಶ್ರೀಮಾನ್ ಚನ್ನಬಸಪ್ಪನವರ ನಂದಿಪುರದಲ್ಲಿ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ ಮೂಲಕ ಮಾಡುತ್ತಿರುವ ಭೂಮಿಗೆ ಹಾಗೂ ಶ್ರೀಮಾನ್ ಘೋರ್ಪಡೆಯವರು ಮಾಡಿರುವ ವಿದ್ಯಾಸಂಸ್ಥೆಗಳ ಭೂಮಿಗೆ ಹೀಗೆ ಎಲ್ಲ ಕಡೆಗಳಲ್ಲಿ ಸೀಲಿಂಗ್ ಲಿಮಿಟ್ಟನ್ನು ಹಾಕಬೇಕು, ನಾವು ಇಂತಹ ಸೀಲಿಂಗನ್ನು ತರಬೇಕೆಂದು ಎಲ್ಲ ಕಡೆಗಳಲ್ಲೂ ಹೇಳುತ್ತಲೇ ಬರುತ್ತಿದ್ದೇವೆ. ಸೀಲಿಂಗ್ ಲಿಮಿಟ್ ತರದೇ ಸಮಾಜವಾದವನ್ನು ತರಲಿಕ್ಕೆ ಸಾಧ್ಯವಾಗುವುದಿಲ್ಲ.

(ಉಪಾಧ್ಯಕ್ಷರು)

ಇನ್ನು ಗೇಣಿಯ ಬಗ್ಗೆ ಇದರಲ್ಲಿ ಹೇಳುವುದು ಗೇಣಿಯು ಹತ್ತು ಪಟ್ಟು ಕೊಡಬೇಕೆಂದು ಇದೆ. ಹತ್ತು ಪಟ್ಟು ಎಂದು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ನಾವು ಎಲ್ಲ ಲೆಕ್ಕ ಹಾಕಿದ್ದೇವೆ ಅದರ ವಿವರಗಳನ್ನು ಇಲ್ಲಿ ಕೊಡಲು ಹೋಗುವುದಿಲ್ಲ. ಈಗ ಕೊಡತಕ್ಕ ಗೇಣಿಯೇ ಹೆಚ್ಚಾಗಿರುತ್ತದೆ. ಮೂಲಭೂತವಾಗಿ ಗೇಣಿಯನ್ನು ನಾಶ ಮಾಡಬೇಕೆಂದು ಇರುವಾಗ ಮಾತ್ರ ಉಳುವವನಿಗೇ ಹೊಲವಿರಬೇಕು ಎಂದು ಮಾಡಬೇಕೆಂದಿರುವಾಗ ಹತ್ತು ಪಟ್ಟು ಎಂದು ಕೊಡುವುದು ಸರಿಯಾಗುವುದಿಲ್ಲ. ಇದನ್ನು ಐದು ಪಟ್ಟಿನಷ್ಟು ಎಂದು ಮಾಡಬಹುದು. ಏಕೆಂದರೆ ಅವರು ಕಂದಾಯ ಬೇರೆ ಕೊಡಬೇಕಾಗಿ ಬರುತ್ತದೆ. ಐದು ಪಟ್ಟು ಎಂದು ಇದ್ದರೆ ಸಾಕು. ಭೂಸುಧಾರಣೆ ತರುತ್ತೇವೆ ಎಂದು ಈ ಭೂಸುಧಾರಣೆ ಹೆಸರಿನಲ್ಲಿ ಒಂದು ದೊಡ್ಡ ಕ್ರಾಂತಿಯನ್ನು ಮಾಡುತ್ತೇವೆಂದು ಜನರಿಗೆ ಭರವಸೆ ಕೊಡುತ್ತಿರುವುದನ್ನು ವಂಚನೆ ಮಾಡುವ ಸರಕಾರ ಇಪ್ಪತ್ತೈದು ವರ್ಷಗಳಿಂದಲೂ ಮಾಡುತ್ತಿದ್ದೀರಿ. ಇದೊಂದು ಪರಂಪರೆಯಾಗಿದೆ ಇದರಲ್ಲಿ ಹೆಚ್ಚು ಆಸಕ್ತಿ ಇರುವ ಹಿಂದೆ ಇದೇ ಪಕ್ಷದಲ್ಲಿದ್ದ ಶ್ರೀ 'ವರನ್' ಕೃಷ್ಣರವರು ಹಾಗೂ ನಮ್ಮ ಪಕ್ಷದಲ್ಲಿ ಅಧ್ಯಕ್ಷರಾಗಿದ್ದ ಶ್ರೀ ಅಜೀಜ್ ಸೇಟ್‌ರವರು ಹಾಗೂ ಇನ್ನಿತರ ಸದಸ್ಯರುಗಳು ಇದರ ಬಗ್ಗೆ ಏಕೆ ಇಷ್ಟು ಜಿಜ್ಞಾಸೆ ಮಾಡುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಹಿಂದೆ ಕಾಗೋಡು ಹೋರಾಟ ಆರಂಭವಾದಾಗಿನಿಂದಲೂ ಇದು ಬರುತ್ತಿದೆ. ಭೂಸುಧಾರಣೆ ಮಾಡಬೇಕೆಂದು ಹೇಳುತ್ತಲೇ ಬರುತ್ತಿದ್ದಾರೆ. ಮುಂದೆ ಹೆಜ್ಜೆ ಇಟ್ಟು ಅದಕ್ಕೆ ಹಿಂದೆ ಈಗ ಹೋದರೆ ಅದು ಪಾಪದ ಕಾರ್ಯವಾಗುತ್ತದೆ. ಆ ರೀತಿ ಮಾಡಬಾರದು ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಆರ್. ಶ್ರೀನಿವಾಸಯ್ಯ (ಶಾಂತಿ ನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಕಂದಾಯ ಸಚಿವರು ತಂದಿರತಕ್ಕ ಭೂಸುಧಾರಣೆ ತಿದ್ದುಪಡಿ ಮಸೂದೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನನ್ನ ಹಿಂದೆ ಭಾಷಣ ಮಾಡಿದವರು ಅವರದೇ ಆದ ಭಾಷೆಯಲ್ಲಿ ಹಾಗೂ ಶೈಲಿಯಲ್ಲಿ ಪರ ಹಾಗೂ ವಿರೋಧವಾಗಿ ಇಲ್ಲಿ ಮಾತನಾಡಿದರು, ಇದು ನನ್ನ ಗಮನಕ್ಕೂ ಸಹ ಬಂದಿದೆ. ಆದರೂ ಕೆಲವು ಅಂಕಿ ಅಂಶಗಳ ಆಧಾರದ ಮೇಲೆ ಈಗ ತಂದಿರತಕ್ಕ ಭೂಸುಧಾರಣೆ ಸರಿಯಾಗಿ ವ್ಯಕ್ತ ಮಾಡಿ ತಂದಿದ್ದಾರೆ. ಈ ತರತಕ್ಕ ಭೂಸುಧಾರಣೆ ಮಸೂದೆ ಬಗ್ಗೆ ಅನೇಕ ಜನರಲ್ಲಿ ಅನೇಕ ತರಹದ ಅಭಿಪ್ರಾಯಗಳು ಬೇರೂರಿವೆ. ಇದಕ್ಕೆ ಕಾರಣವೇನೆಂದರೆ... ಮುಖ್ಯವಾಗಿ ಈಗ ಭೂಸುಧಾರಣೆಯನ್ನು ತಂದಿರತಕ್ಕ ಉದ್ದೇಶ ನಾಲ್ಕು. ಇದು ಎಲ್ಲರಿಗೂ ಗೊತ್ತಿದೆ, ಮೊದಲನೇದಾಗಿ ರೀ ಡಿಸ್ಟ್ರಿಬ್ಯೂಷನ್ ಆಫ್ ಲ್ಯಾಂಡು, ಇದಕ್ಕಾಗಿ ಕ್ರಾಂತಿಕಾರಕವಾದ ಅಗ್ರೇರಿಯನ್ ರೆವಲ್ಯೂಷನ್ ಆಗಬೇಕು ಎನ್ನುವುದನ್ನು ಪ್ರತಿಯೊಬ್ಬರು ಒಪ್ಪುತ್ತಾರೆ. ಎರಡನೇದು ಜಮೀನಿನಲ್ಲಿ ಇರತಕ್ಕ ಒತ್ತಡವನ್ನು ಕಡಿಮೆ ಮಾಡುವುದು, ಮೂರನೆಯದು, ಈಗ ಬರತಕ್ಕ ಭೂಮಿಯ ಪ್ರೊಡಕ್ಷನ್‌ನನ್ನು ಎಂದರೆ ಭೂಮಿಯ ಆದಾಯವನ್ನು ಇನ್ನೂ ಹೆಚ್ಚು ಮಾಡಬೇಕು ಎಂಬುದು ಮತ್ತು ನಾಲ್ಕನೆಯದಾಗಿ ಈ ಒಂದು ವರ್ಗದವರು ಮತ್ತೊಂದು ವರ್ಗದವರನ್ನು ಶೋಷಣೆ ಮಾಡಬಾರದು. ಈ ಮೂಲ ಉದ್ದೇಶಗಳಿಂದಲೇ ಇಲ್ಲಿ ನಾವು ಭೂಸುಧಾರಣೆಯ ಮಸೂದೆಯನ್ನು ತಂದಿರುವುದು. ಭೂಸುಧಾರಣೆ ತರಬೇಕೆಂದು 1937ರಲ್ಲೇ ಮೊದಲು ಪ್ರಾರಂಭವಾಯಿತು. 1961 ರಿಂದಲೂ ನಮ್ಮ ಮೈಸೂರು ಸಂಸ್ಥಾನದಲ್ಲಿ ಇದರ ಬಗ್ಗೆ ಹೋರಾಟ ಆರಂಭವಾಗಿ ಭೂಸುಧಾರಣೆಯ ತಜ್ಞರುಗಳ ಮೇಲೆ ಚರ್ಚೆಯಾಗಿ ಇಂತಹ ಮಸೂದೆ ಬಂದರೂ ಇದು ಕಾರ್ಯರೂಪಕ್ಕೆ ತಂದು ಈ ಮಸೂದೆಯಲ್ಲಿ ಅಡಕವಾಗಿರುವ ಅಂಶವನ್ನು ಕಾರ್ಯಗತಮಾಡಲಿಕ್ಕೆ ಇದುವರೆಗೂ ಸಾಧ್ಯವಾಗಲಿಲ್ಲ. ಇದಕ್ಕೆ ಮುಖ್ಯ ಎರಡು ಕಾರಣಗಳನ್ನು ಹೇಳಬಹುದು. ಮೊದಲನೇದು ಇದನ್ನು ಇಂಪ್ಲಿಮೆಂಟು ಮಾಡಲು ಆಗ ಇದ್ದ ಸರಕಾರಕ್ಕೆ ಆಗಲಿಲ್ಲ. ಇದಕ್ಕೆ ಕಾರಣ ಅವರ "ಹಾಫ್ ಹಾರ್ಟೆಡ್" ಪಾಲಿಸಿ ಇದ್ದ ಸರಕಾರ. ಇದಕ್ಕೆ ನಾವು ಯಾರೂ ಕಾರಣರಲ್ಲ. ಇದರ ಜೊತೆಗೆ ನಮ್ಮ ಸಂಸ್ಥಾನದಲ್ಲಿ ಭೂಸುಧಾರಣೆ ಬಗ್ಗೆ ಹೇಳುವಾಗ ನಮ್ಮಲ್ಲಿ ಎಷ್ಟು ಭೂಮಿ ಇದೆ ಎನ್ನುವುದು ನಮಗೆ ಅಂಕಿ ಅಂಶಗಳ ಆಧಾರದ ಮೇಲೆ ಸರಿಯಾಗಿ ಗೊತ್ತಿಲ್ಲ ಮತ್ತು ನಮ್ಮ ಅನೇಕ ಮಿತ್ರರು ಹೇಳಿದಂತೆ ಮತ್ತು ಅನುಭವದಲ್ಲಿ ನೋಡಿದರೆ ನೂರಕ್ಕೆ ಎಪ್ಪತ್ತು ಜನರು ವ್ಯವಸಾಯವನ್ನೇ ಅವಲಂಬನೆ ಮಾಡಿರತಕ್ಕ ಜನರು ಅಲ್ಲದೆ ಇದರಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯವಸಾಯ ಮಾಡುವವರು ನೂರಕ್ಕೆ ಎಂಬತ್ತು ಜನರಿದ್ದಾರೆ ಎಂಬುದು ಮರೆಯಬಾರದು. ನಮ್ಮ ಮೈಸೂರು ಸಂಸ್ಥಾನದಲ್ಲಿ ಒಟ್ಟು ಇರುವ ಜನಸಂಖ್ಯೆ ಸುಮಾರು (2 ಕೋಟಿ 92 ಲಕ್ಷ) ಇದೆ ಎನ್ನುವುದನ್ನು ನಾವು ಮರೆಯಬಾರದು. ಸುಮಾರು 28 ಲಕ್ಷ ಜನರು [illegible] ವ್ಯವಸಾಯ ಮಾಡುವವರು ಇದ್ದಾರೆ. ಶೇಕಡಾ 18%ರಷ್ಟು ಜನರು ಇವರಿಗೆ ಬೇರೆ ಯಾವ ಭೂಮಿಯೂ ಇಲ್ಲ ಐದರಲ್ಲಿ ಐದು ಎಕರೆಯಷ್ಟು ಇರುವ ಜನರು ಶೇಕಡಾ 17%ರಷ್ಟು ಇದೆ. ಹತ್ತು ಎಕರೆಗಳಷ್ಟು

ಇರುವವರು ಶೇಕಡಾ 69%ರಷ್ಟು ಇದ್ದಾರೆ ಮತ್ತು ಮೈಸೂರು ಸಂಸ್ಥಾನದಲ್ಲಿ ಸುಮಾರು 28 ಸಾವಿರ ಜನರು ಗ್ರಾಮಾಂತರಗಳಲ್ಲೇ ವಾಸಮಾಡಿಕೊಂಡು ವ್ಯವಸಾಯ ಮಾಡುತ್ತಿದ್ದಾರೆ. ಈಗ ಲ್ಯಾಂಡ್ ಟು ದಿ ಟಿಲರ್ ಎಂದು ಏನು ಘೋಷಣೆ ಮಾಡುತ್ತಿದ್ದೇವೆ ಅಂತಹವರಿಗೆ ಮಾತ್ರ ಅನುಕೂಲ ಮಾಡಬೇಕೆಂದೇ ಇಲ್ಲಿ ಇಂತಹ ತಿದ್ದುಪಡಿ ಮಸೂದೆ ತಂದಿದ್ದೇವೆ ಮತ್ತು ಇಂತಹ ಜನಕ್ಕೆ ಅನುಕೂಲ ಮಾಡಬೇಕೆಂದೇ ಮುಖ್ಯ ಉದ್ದೇಶದಿಂದ ಈ ಬಿಲ್ಲನ್ನು ಇಲ್ಲಿ ತಂದಿರತಕ್ಕದ್ದು. ಎಲ್ಲ ಜನರೂ ಭೂಮಿಯ ಮೇಲೆ ಇದ್ದು ವ್ಯವಸಾಯ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ. ಇದರ ಬಗ್ಗೆ ಹೊರದೇಶದ ಒಬ್ಬರು ಹೀಗೆ ಹೇಳುತ್ತಾರೆ: "India is the biggest agricultural country under the sun but still it is following the rough old crude methods." Agricultural ಹೇಳುವುದಕ್ಕೆ ಹೆಸರೇನೋ ಸುಲಭ, ಅದನ್ನು ಜಾರಿಗೆ ತರಲು ಹೇಗೆ ಆದೀತು? ಮುಖ್ಯವಾಗಿ ಇದರಲ್ಲಿ ಎರಡು ತರಹದ ಜನರಿದ್ದಾರೆ. ಕೆಲವರು ಭೂಮಿಯನ್ನೇ ನಂಬಿಕೊಂಡು ಜೀವನ ಮಾಡತಕ್ಕವರು, ಕೆಲವರು ಎಂದರೆ (ABSENTEE Land Lord) 'ಅಬ್ಸೆಂಟೀ ಲ್ಯಾಂಡು ಲಾರ್ಡ್‌ಗಳು', ಇವರನ್ನು ತೆಗೆದು ಹಾಕಬೇಕು ಎನ್ನುವುದೇ ಇದರಲ್ಲಿರುವ ಘನ ಉದ್ದೇಶ. ಇಷ್ಟು ಜನರು ಇಷ್ಟೇ ಮೈಲಿಯಲ್ಲಿ ವಾಸ ಮಾಡಿಕೊಂಡು ಬೇಸಾಯ ಮಾಡಬೇಕೆಂಬ ಇಲ್ಲರುವ ಮಸೂದೆಯಲ್ಲೂ ಅಡಕವಾಗಿ ಇದೆ. ಅಬ್ಸೆಂಟೀ ಲ್ಯಾಂಡ್ ಲಾರ್ಡ್ಸ್ ಅಥವಾ "ಮೇಲುಸ್ತುವಾರಿ" ಜನ ಯಾರಿದ್ದಾರೆ ಅವರನ್ನು ತೆಗೆಯಬೇಕು ಎನ್ನುವುದೇ ನಮ್ಮ ಮೂಲ ಉದ್ದೇಶ.

ನಮ್ಮಲ್ಲಿರುವ ಭೂಮಿಯನ್ನು ಮೂರು ಭಾಗಗಳಾಗಿ ವಿಂಗಡಿಸಬಹುದು. ತೋಟ, ಗದ್ದೆ ಮತ್ತು ಹೊಲ. ತೋಟ ಯಾರಿಗೆ ಇದೆ, ಗದ್ದೆ ಯಾರಿಗೆ ಇದೆ, ಹೊಲ ಯಾರಿಗೆ ಇದೆ ಎನ್ನುವುದನ್ನು ಯೋಚನೆ ಮಾಡಿ ನೋಡಿದರೆ, ತೋಟ ಇರುವವರು 'ಎ' ವರ್ಗ, ಗದ್ದೆ ಇರುವವರು 'ಬಿ' ವರ್ಗ, ಹೊಲ ಇರುವವರು 'ಸಿ' ವರ್ಗದ ರೈತರು ಎಂದು ಹೇಳಬಹುದು. ಈಗ ನಾವು ತಂದಿರುವ ಮಸೂದೆಯಿಂದ ಯಾರಿಗೆ ಜಮೀನಿಲ್ಲ, ಯಾರಿಗೆ ಭೂಮಿ ಇಲ್ಲ, ಯಾರು ಗ್ರಾಮಾಂತರ ಪ್ರದೇಶಗಳಲ್ಲಿ ಜಮೀನನ್ನೇ ಅವಲಂಬಿಸಿಕೊಂಡು ಜೀವನ ಮಾಡುತ್ತ ಇದ್ದಾರೆ. ಅವರಿಗೆ ಅನುಕೂಲವಾಗಲಿ ಎಂಬ ಘನ ಉದ್ದೇಶದಿಂದ ಈ ಮಸೂದೆಯನ್ನು ತಂದಿದ್ದೇವೆ. ಇವರು 80 ಪರ್ಸೆಂಟ್ ಇದ್ದಾರೆ. ನೂರು ಎಕರೆ, 500 ಎಕರೆ ಜಮೀನು ಇರುವವರು 3 ರಿಂದ 5 ಪರ್ಸೆಂಟ್ ಇರಬಹುದು. ಯಾರಿಗೆ ತೋಟ, ಗದ್ದೆ, ಕರೆ ಹಿಂದೆ, ನಾಲೆ ಹಿಂದೆ ಇದ್ದೆ, ಅನುಕೂಲವಾದ ಕುಟುಂಬಗಳು ಯಾವವು ಇವೆ ಅವರೆಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿರಲಿ, ಪಟ್ಟಣದಲ್ಲಿರಲಿ ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಡಿಸಿ, ವಿದೇಶಗಳಿಗೆ ಕಳುಹಿಸುತ್ತಾರೆ. ಕಾನ್ಸೆಂಟ್ರೇಷನ್ ಆಫ್ ವೆಲ್ತ್ ಆಗುವುದು ದೇಶದ ಹಿತದೃಷ್ಟಿಯಿಂದ ಒಳ್ಳೆಯದಲ್ಲ. ಒಬ್ಬ ಡಾಕ್ಟರ್, ಇನ್ನೊಬ್ಬ ಇಂಜಿನಿಯರ್, ಇನ್ನೊಬ್ಬ ಲಾಯರ್ ಒಂದೇ ಕುಟುಂಬದವರು ಆಗಲು ಅವಕಾಶ ಇರುವುದರಿಂದ ಒಂದೇ ಕಡೆ ಹಣ ಸೇರುವುದಕ್ಕೆ ಹೆಚ್ಚಿನ ಅವಕಾಶವಿದೆ. 5-10 ಎಕರೆ ಜಮೀನಿರುವವರು ಡಾಕ್ಟರಾಗುವುದಿಲ್ಲ, ಅವರಿಗೆ ಬೇರೆ ಕೆಲಸವಿರುವುದಿಲ್ಲ. ಭೂಮಿಯೇ ಅವನಿಗೆ ಆಧಾರ. ಈಗ ನಾವು ಅವನ ಅನುಕೂಲಕ್ಕೋಸ್ಕರ ಇದನ್ನೆಲ್ಲ ಮಾಡುತ್ತಿದ್ದೇವೆ. ಒಬ್ಬನಲ್ಲಿಯೇ ಐಶ್ವರ್ಯ ಸೇರುವುದು ತಪ್ಪಬೇಕು ಮತ್ತು ತಪ್ಪಿಸಬೇಕು. ನಾವು ಸಮಾಜವಾದವೆಂದು ಏನು ಹೇಳುತ್ತೇವೆ, ಅದನ್ನು ಅನುಷ್ಠಾನಕ್ಕೆ ತರಬೇಕು, ಕಾರ್ಯಗತ ಮಾಡಬೇಕು. ಇದಕ್ಕೆ ಭೂಮಿಯನ್ನು ಹಂಚಬೇಕಾದ್ದು ಒಂದು ವಿಧಾನ. ಭೂಮಿಯನ್ನು ಹಂಚುವುದರಿಂದಲೇ ಸಮಾಜವಾದವನ್ನು ತರುವುದಕ್ಕಾಗುವುದಿಲ್ಲವೆನ್ನುವುದನ್ನು ನಾನು ತಿಳಿದಿದ್ದೇನೆ. ಅಗ್ರೇರಿಯನ್ ರೆವಲ್ಯೂಷನ್ ತರುವ ಉದ್ದೇಶದಿಂದ ಈ ದಿಕ್ಕಿನಲ್ಲಿ ಹೋಗಿದ್ದೇವೆಂದು, ಈ ಸಂದರ್ಭದಲ್ಲಿ ನಾನು ಘಂಟಾಘೋಷವಾಗಿ ಹೇಳುತ್ತೇನೆ.

ಭೂತಾಯಿ ಹೇಳುತ್ತಾಳಂತೆ ನನ್ನ ಎದೆ ಮೇಲೆ ನೀನು ನಡೆದರೆ ನಾನು ನಿನ್ನ ಹೊಟ್ಟೆಮೇಲೆ ತುಳಿಯುತ್ತೇನೆಂದು ಅಬ್ಸೆಂಟೀ ಲ್ಯಾಂಡ್ ಲಾರ್ಡ್ಸ್ ಬಗ್ಗೆ ಹೇಳುತ್ತಾಳಂತೆ ಭೂಸುಧಾರಣೆಯನ್ನು ತರುವ ಬಗ್ಗೆ ನಮಗೆ ವಿಶೇಷವಾದ ಆಸಕ್ತಿ ಇದೆ. ಇದಕ್ಕಾಗಿ ಈ ಮಸೂದೆಯಲ್ಲಿ ಜಮೀನು ಇರುವವರಿಗೆ ನ್ಯಾಯವಾಗಿ ಸಾಕಾದಷ್ಟು ಮಿತಿಯನ್ನು ಕೊಟ್ಟಿದ್ದೇವೆ. ಇದರಲ್ಲಿ ನಾವು ಕ್ಲಾಸಿಫಿಕೇಷನ್ ಮಾಡಿರುವ ಪ್ರಕಾರ ಏಳು ತರಹದ ಜಮೀನನ್ನು ವಿಂಗಡಿಸಿದ್ದೇವೆ. ನಮ್ಮ ದೇಶದಲ್ಲಿ ವ್ಯವಸಾಯ ಮಾಡುವುದೇ ಬಹಳ ಕಷ್ಟ. ಬಹಳ ಜನ ಅದನ್ನು ಅವಲಂಬಿಸಿ ಜೀವನ ಮಾಡುತ್ತಿದ್ದಾರೆ. ವ್ಯವಸಾಯ ಮಾಡುವವರಲ್ಲಿ ಸುಮಾರು 80 ಪರ್ಸೆಂಟ್ ಜನಗಳಿಗೆ ಹೊಲ ಮಾತ್ರ ಇದೆ. ಅವನಿಗಾಗಿ ಅಂದರೆ Dry Land farmer ನಾವು ಮಾಡಿರುವ ಕೆಲಸವೆಂದರೆ ಕಾಂಟೂರ್ ಬಂಡಿಂಗ್ ಕೆಲಸ ಮಾತ್ರ ಅಂದರೆ ಅವನ ಹೊಲದಲ್ಲಿರುವ ಮಣ್ಣನ್ನು ಎತ್ತಿ ಹಾಕಿರುವ ಕೆಲಸ ಮಾತ್ರ. ಹೀಗಾದರೆ ಅವನ ಆರ್ಥಿಕ ಪರಿಸ್ಥಿತಿ ಹೇಗೆ ಮುಂದುವರಿಯುತ್ತದೆ? 54 ಎಕರೆ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯುಡು)

ಜಾಸ್ತಿ ಜಮೀನು ಕೊಟ್ಟಿರುವವರಿಂದ ಬೇಕಾದಷ್ಟು ಬೆಳೆಯ ಬಹುದು. ನಮ್ಮ ರಾಜ್ಯದಲ್ಲಿ ನಾವು ಇನ್ನೂ ಹಳೇ ಕಾಲದಾಚಾರದ ಪದ್ಧತಿಯನ್ನೇ ವ್ಯವಸಾಯದಲ್ಲಿ ಅನುಸರಿಸುತ್ತಿದ್ದೇವೆ, ನಾವು ಪಂಜಾಬ್, ಹರಿಯಾಣ ರಾಜ್ಯಗಳಿಗೆ ಹೋಗಿ ನೋಡಿದರೆ ಅವರು ಹೇಗೆ ಗ್ರೀನ್ ರೆವಲ್ಯೂಷನ್ ಮಾಡಿಕೊಂಡಿದ್ದಾರೆನ್ನುವುದು ಅಚ್ಚುಕಟ್ಟಾಗಿ ಗೊತ್ತಾಗುತ್ತದೆ. ಈಗ ನಾವು ಯಂತ್ರ ಮತ್ತು ತಂತ್ರ ಯುಗದಲ್ಲಿದ್ದೇವೆ. ನಮ್ಮ ವಿದ್ಯಾಭ್ಯಾಸದ ರೀತಿ ನೀತಿಯನ್ನು ನೋಡಿದರೆ ಇನ್ನು ಹತ್ತು ವರ್ಷಗಳಾದ ಮೇಲೆ ಜಮೀನಿನ ಮೇಲೆ ಈಗ ಇರತಕ್ಕಷ್ಟು ಒತ್ತಡ ಇರುವುದಿಲ್ಲ. ಒಂದು ಆಫೀಸಿನಲ್ಲಿ, ಕಾರ್ಖಾನೆಯಲ್ಲಿ, ಮಿಲ್ಲಿನಲ್ಲಿ ಕೆಲಸ ಮಾಡುವವರು ಜಾಸ್ತಿಯಾಗಬಹುದು. ವ್ಯವಸಾಯ ಮಾಡುವುದು ಕಷ್ಟವೆನ್ನುವುದನ್ನು ನಾವು ಖಂಡಿತ ಮರೆಯಬಾರದು. ವ್ಯವಸಾಯ ಮಾಡುವುದಕ್ಕೆ ಫಿಸಿಕಲಿ ಫಿಟ್ ಆಗಿರಬೇಕು, ವಾಟರ್ ಪ್ರೂಫ್ ಮತ್ತು ವೆದರ್ ಪ್ರೂಫ್ ಆಗಿರಬೇಕು. ಈಗಿರತಕ್ಕ ವಿದ್ಯಾಭ್ಯಾಸ ಕ್ರಮದಲ್ಲಿ ನಮ್ಮ ಮಕ್ಕಳು ಎಸ್.ಎಸ್.ಎಲ್.ಸಿ. ಮಾಡಿದ ತಕ್ಷಣ ಬೆಂಗಳೂರಿಗೆ ಬಂದು ಎಚ್. ಎಂ. ಟಿ., B.E.L. ಅಥವಾ ಟೆಲಿಫೋನ್ ಕಾರ್ಖಾನೆ ಮುಂತಾದ ಕಡೆ ಕೆಲಸಕ್ಕೆ ಸೇರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇಂಥವರು ನಿಜವಾಗಿಯೂ ವ್ಯವಸಾಯ ಮಾಡುತ್ತಾರೆಯೇ? ಪೇಟೆ ವಾಸದ ಸುಖವನ್ನು ಕಂಡಿರುವ ಹೆಣ್ಣು ಮಕ್ಕಳು ಹಳ್ಳಿ ಕಡೆ ಹೋಗಿ ಹೊಲಗಳಲ್ಲಿ ಕಳೆ ಕೀಳುವುದು ಸಾಧ್ಯವೇ? ಈ ವಿಚಾರಗಳನ್ನು ನೋಡಿದರೆ ಬೇಸಾಯ ಮಾಡುವುದಕ್ಕೇ ತೊಂದರೆ ಬರುವ ದಿನಗಳು ಬಹು ದೂರವಿಲ್ಲ ಎಂದು ಮತ್ತೆ ಒತ್ತಿ ಹೇಳುತ್ತೇನೆ. ಉತ್ತಮವಾದ ಜಮೀನು 10 ಎಕರೆಯೇ ಒಂದು ಕುಟುಂಬಕ್ಕೆ ಜಾಸ್ತಿ ಎನ್ನುವುದು ನನ್ನವಾದ. ಈಗ ನಮ್ಮ ಕಾನೂನು ಪ್ರಕಾರ ಮೂರು ಮೈನರ್ ಮಕ್ಕಳು, ಗಂಡ ಹೆಂಡತಿಗೆ 10 ಎಕರೆ ಎಂದು ಹೇಳಿರುವುದು ಬೇಕಾದಷ್ಟು ಆಯಿತು. ವ್ಯವಸಾಯವನ್ನು ಮಾಡುತ್ತಿರುವವರ ಅನುಭವವನ್ನು ಹೇಳುವುದಾದರೆ ಒಂದು ಸಣ್ಣ ಕುಟುಂಬಕ್ಕೆ ಐದು ಎಕರೆ ಮಾತ್ರ ಸ್ವಂತ ಸಾಗುವಳಿ ಮಾಡಬಹುದು. ಕೆಲವರು ಪಾಶ್ಚಾತ್ಯ ದೇಶಗಳಲ್ಲಿ ನೂರಾರು ಎಕರೆ ಜಮೀನನ್ನು ಹೊಂದಿರುತ್ತಾರೆಂದು ಹೇಳುತ್ತಾರೆ. ಪಾಶ್ಚಾತ್ಯ ದೇಶಕ್ಕೂ ನಮ್ಮ ದೇಶಕ್ಕೂ ಬಹಳ ವ್ಯತ್ಯಾಸವಿದೆ. ಅಲ್ಲಿ ಜನಸಂಖ್ಯೆ ಕಡಮೆ ಮತ್ತು ಭೂಮಿ ಜಾಸ್ತಿ ಇವೆ. ನಮ್ಮ ದೇಶದಲ್ಲಿ ಪ್ರತಿ ವರ್ಷವೂ ಜನಸಂಖ್ಯೆ ಹೆಚ್ಚುತ್ತಿದೆ. ಅದನ್ನು ಯಾರು ಮರೆಯ ಬಾರದು.

ಇನ್‌ಕ್ರೀಸ್ ಪ್ರೊಡಕ್ಷನ್ ಎಂದು ಹೇಳುವಾಗ ರಸಾಯನಿಕ ಗೊಬ್ಬರ, ಉತ್ತಮ ತಳಿಯ ಬೀಜಗಳು, ವ್ಯವಸಾಯ ಇಲಾಖೆಯವರ ಸಲಹೆ, ರೇಡಿಯೋದಲ್ಲಿ ಪ್ರತಿನಿತ್ಯವೂ ರೈತರಿಗಾಗಿ ಕೊಡುವ ಸಲಹೆಗಳು ಇವುಗಳಿಂದ ರೈತರು ವ್ಯವಸಾಯದಲ್ಲಿ ಮುಂದೆ ಬರುವುದಕ್ಕೆ ಬೇಕಾದಷ್ಟು ಅನುಕೂಲಗಳಿವೆ. ಒಬ್ಬ ಮನುಷ್ಯ ಸಾಧಾರಣವಾಗಿ ಐದು ಎಕರೆ ಭೂಮಿಯನ್ನು ಸ್ವಂತವಾಗಿ ಸಾಗುವಳಿ ಮಾಡಬಲ್ಲ. ಆದ್ದರಿಂದಲೇ ಸಾಧ್ಯವಾದಮಟ್ಟಿಗೂ ತನ್ನ ಕಾಲ ಮೇಲೆ ತಾನು ನಿಂತುಕೊಳ್ಳತಕ್ಕ ಪದ್ಧತಿಯನ್ನು ಅನುಸರಿಸಬೇಕು. ಮಾತು ಎತ್ತಿದರೆ ನಮ್ಮಲ್ಲಿ ಜಾಯಿಂಟ್ ಫ್ಯಾಮಿಲಿ ಸಿಸ್ಟಂ ಎಂದು ಹೇಳುತ್ತೇವೆ. ಎಂದರೆ ಒಬ್ಬ ಸಂಪಾದನೆ ಮಾಡಿ ಉಳಿದವರು ತಿನ್ನಬೇಕು ಎಂದು ಅರ್ಥವಲ್ಲ. ಪ್ರತಿಯೊಬ್ಬರೂ ಅವರ ಕಾಲಿನ ಮೇಲೆ ನಿಂತುಕೊಳ್ಳಬೇಕು. ಅವರು ದುಡಿದು ಇನ್ನೊಬ್ಬರಿಗೆ ಅನ್ನ ಹಾಕತಕ್ಕ ಚೈತನ್ಯವನ್ನು ಸಂಪಾದಿಸಬೇಕು. ನಾವು ಈಗ ಯಂತ್ರ ಯುಗದಲ್ಲಿದ್ದೇವೆ, ಯಂತ್ರಗಳಿಂದ ವ್ಯವಸಾಯ ಮಾಡಲು ಅನುಕೂಲವಾಗ ಮತ್ತೆ ನೂರಾರು ಎಕರೆ ಜಮೀನು ಒಬ್ಬರಿಗೆ ಇರಬೇಕು ಎನ್ನುವ ವಾದ ತಪ್ಪು. ನಮಗೆ ಇರುವಂಥ ಭೂಮಿಯನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಹೊಟ್ಟೆ ಹೊರೆಯ ಬೇಕು. ಈಗಿರತಕ್ಕ ಪರಿಸ್ಥಿತಿಯಲ್ಲಿ ಬೆಳೆಯುವವನಿಗೂ ತಿನ್ನುವವನಿಗೂ ಯಾವ ವಿಧವಾದ ಸಂಬಂಧವೂ ಇಲ್ಲ. ಮಧ್ಯವರ್ತಿ ಜನಗಳು ಅಥವಾ ವ್ಯಾಪಾರಸ್ಥರು ಏನಿದ್ದಾರೆ ಅವರ ಮೂಲಕವೇ ಬೆಳೆಯುವವನೂ ತಿನ್ನುವವನೂ ಹೋಗಬೇಕಾಗಿದೆ. ನೇಗಿಲಯೋಗಿ, ಅನ್ನದಾತ ಎಂದು ಯಾರಿಗೆ ಹೇಳುತ್ತೇವೆ, ಅವನಿಂದ ತಿನ್ನುವವನಿಗೆ ನೇರವಾಗಿ ಸಂಬಂಧವಿರುವಂಥ ವ್ಯವಸ್ಥೆಯಾಗಿ, ಅದರಿಂದ ಬರತಕ್ಕ ಪ್ರತಿಫಲವೇನಿದೆ ಅದು ರೈತನಿಗೆ ಸಿಕ್ಕುವ ವ್ಯವಸ್ಥೆಯಾಗಬೇಕು. ಬೆಳೆಯುವವನಿಗೂ ತಿನ್ನುವವನಿಗೂ ಪೂರ್ಣ ಸಂಬಂಧವಿರಬೇಕು. ಯಾವಾಗಲೂ ಸುಗ್ಗಿಯ ಕಾಲದಲ್ಲಿ ಬೆಲೆಗಳು ಕಡಿಮೆ ಆಗುತ್ತವೆ. ಆವಾಗ ಕೊಂಡ ದವಸವನ್ನು ಮೂರು ತಿಂಗಳು ಸ್ಟಾಕ್ ಇಟ್ಟು, ಬೀಜ ಹಾಕತಕ್ಕ ಕಾಲದಲ್ಲಿ ಬೆಲೆ ಏರಿಸುವುದನ್ನು ನಾವು ಕಣ್ಣಾರ ನೋಡಿದ್ದೇವೆ. ಇದಕ್ಕೆ ಯಾರು ಕಾರಣ? ನಮ್ಮ ರಾಜ್ಯದಲ್ಲಿ 5 ರಿಂದ 10 ಎಕರೆವರೆಗೆ ಜಮೀನು ಇರುವವರು 80 ಪರ್ಸೆಂಟ್ ಜನರಿದ್ದಾರೆ. ಅವರಿಗೆ ಯೋಗ್ಯವಾದ ಆದಾಯ ಬರಬೇಕು. ನಮ್ಮ ರಾಜ್ಯದಲ್ಲಿ 28 ಸಾವಿರ ಗ್ರಾಮಗಳಿವೆ. ಅವರು ಗ್ರಾಮಗಳಲ್ಲಿಯೇ ಕಚ್ಚಾಗಿ ವಾಸ ಮಾಡುತ್ತಿದ್ದಾರೆ. ಅವರ ಸ್ಥಿತಿ ಏನಾಗಿದೆ ಎಂದರೆ ಅವರು ಪಟ್ಟಣಗಳಿಗೆ ಬರುವುದಕ್ಕೆ ಆಸ್ಪದವಿಲ್ಲ. ಹಾಗೂ

ಹೀಗೂ ಪಟ್ಟಣಗಳಿಗೆ ಬಂದವರು ಯಾರೆಂದರೆ ಬಡತನದ ಬೇಗೆಗೆ ಸಿಕ್ಕಿ ಬೆಂದು ಕಂದಿದ ಜನ ಪಟ್ಟಣಕ್ಕೆ ಬರುವರು ಬಂದವರು, ಕೆಟ್ಟು ಪಟ್ಟಣ ಸೇರು ಎನ್ನುವಂತೆ ಬಂದವರಾಗಿದ್ದಾರೆ. ಪಟ್ಟಣಗಳಲ್ಲಿರುವ ಅನುಕೂಲ, ಅನಾನುಕೂಲವನ್ನು ನಾವು ಎಲ್ಲರೂ ಮನಗಂಡಿದ್ದೇವೆ. ಅನುಭವದಲ್ಲಿ ಈಗ ನಾವು ಬೆಂಗಳೂರು ಪಟ್ಟಣ, ತುಮಕೂರು, ಗುಲ್ಬರ್ಗ ಮುಂತಾದ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರುಗಳಿಗೆ ಅಥವಾ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಿಗೆ ಹೋಗಿ ನೋಡಿದರೆ ಏನೂ ಗೊತ್ತಾಗುವುದಿಲ್ಲ. ನಾವು ಗ್ರಾಮಾಂತರ ಪ್ರದೇಶಗಳಿಗೆ ಹೋದರೆ, ಅಂದರೆ ಪಟ್ಟಣಗಳಿಂದ ಹತ್ತಿಪ್ಪತ್ತು ಮೈಲಿ ದೂರ ಒಳಕ್ಕೆ ಹೋದರೆ ನಿಜವಾದ ಚಿತ್ರ ನಮಗೆ ಚೆನ್ನಾಗಿ ಕಾಣುತ್ತದೆ. ಐದು, ಹತ್ತು ಎಕರೆ ಭೂಮಿ ಇರುವ ಬಡ ರೈತನಿಗೆ. ಈ ಸುಧಾರಣೆ ಬಗ್ಗೆ ಏನೂ ಗೊತ್ತಿಲ್ಲ. ಈ ಹೊತ್ತು ಅಲ್ಲಿರುವ ರೈತನು ಒಂದು ನಿಕ್ಕರ್ ಹಾಕಿಕೊಂಡು, ಎಣ್ಣೆ ಬುಡ್ಡಿ ತೆಗೆದುಕೊಂಡು ಸಂತೆಗೆ ಹೋಗುತ್ತಾನೆ. ಮೂವತ್ತು ವರ್ಷಗಳಿಂದ ಸುಧಾರಣೆಯನ್ನು ತರುತ್ತೇವೆಂದು ಹೇಳಿ, ಇಂಪ್ಲಿಮೆಂಟಿಂಗ್ ಏಜೆನ್ಸಿಯನ್ನು ಕಂಡು ಹಿಡಿಯಲು ಸಾಧ್ಯವಾಗಲಿಲ್ಲ. ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಯಾವ ಪಕ್ಷವಿದೆ ಆ ಪಕ್ಷ ಈ ಹೊತ್ತು ಆಡಳಿತವನ್ನು ವಹಿಸಿಕೊಂಡಿದೆ. 'ಗರೀಬಿ ಹಟಾವೋ' ಗರೀಬಿ ಭಡಾವೋ? ಮಾಡುತ್ತಿದ್ದೇವೆಂದು ಕೆಲವರು ಹೇಳುತ್ತಾರೆ. ಆದರೆ ನಮ್ಮ ಮುಖ್ಯ ಉದ್ದೇಶ ಮತ್ತು ನಾವು ಮಾಡುತ್ತಿರುವ ಕೆಲಸ 'ಗರೀಬಿ ಹಟಾವೋ' ಎಂದು ಹೇಳುತ್ತೇನೆ.

5-00 P. M.

ಇದರ ಜೊತೆಗೆ ಯಾವ ರೈತ ಜಮೀನು ವ್ಯವಸಾಯ ಮಾಡಿ ಫಸಲನ್ನು ಬೆಳೆಯುತ್ತಾನೋ ಅವನಿಗೆ ಸರಿಯಾದ ಮಾರ್ಕೆಟಿಂಗ್ ಫೆಸಲಿಟೀಸ್ ಸಹಾ ಇಲ್ಲ ಎನ್ನುವುದೂ ಗೊತ್ತಿದೆ. ಆದುದರಿಂದ ಈ ಕಾನೂನು ಬಂದ ಮೇಲಾದರೂ ಕೂಡ ರೈತರ ಹಿತರಕ್ಷಣೆ ದೃಷ್ಟಿಯಿಂದ ಕ್ರಾಪ್ ಇನ್‌ಷೂರೆನ್ಸ್ ಸ್ಕೀಮನ್ನು ಜಾರಿಗೆ ತರಬೇಕು ಎಂದು ಒತ್ತಿ ಹೇಳುತ್ತೇನೆ. ಅದೇ ರೀತಿ ಯಾಗಿ ಗ್ರಾಮಾಂತರ ಪ್ರದೇಶದಲ್ಲಿ ಅವಿದ್ಯಾವಂತರು ಈ ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕಂಥ ಜನರು ಏನು ಇದ್ದಾರೋ ಅವರ ಹಿತದೃಷ್ಟಿಯಿಂದ ಈ ಕ್ರಾಪ್ ಇನ್‌ಷೂರೆನ್ಸ್ ಸ್ಕೀಮನ್ನು ಜಾರಿಗೆ ತರಬೇಕೆಂದು ಮತ್ತೊಮ್ಮೆ ಒತ್ತಾಯ ಮಾಡುತ್ತೇನೆ. ಅದರ ಜೊತೆಗೆ ಈ ಜಮೀನು ವಿತರಣೆಗೆ ಸಂಬಂಧಪಟ್ಟಂತೆ ಒಂದು ಲ್ಯಾಂಡ್ ಕಮೀಷನ್ ರಚನೆ ಮಾಡಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ನಮ್ಮ ಹತ್ತಿರ ಲ್ಯಾಂಡ್ ಇರತಕ್ಕಂಥಾದ್ದು 47 ಲಕ್ಷ ಎಕರೆ. ಇದರೊಳಗೆ 14% ಫಾರೆಸ್ಟ್ ಲ್ಯಾಂಡ್ ಕೂಡ ಸೇರಿದೆ. ನಮ್ಮ ರಾಜ್ಯದ ಜನಸಂಖ್ಯೆ ನೋಡಿದರೆ 2 ಕೋಟಿ 92 ಲಕ್ಷ ಇದೆ. ಇದನ್ನು ಹೇಗೆ ಹಂಚುವುದು ಸಾಧ್ಯ? ಎನ್ನುವ ಅನುಮಾನ ಇರುವುದರಿಂದ ಇದನ್ನು ಕೂಲಂಕಷವಾಗಿ ಪರಿಶೀಲಿಸುವುದಕ್ಕೆ ಒಂದು ಲ್ಯಾಂಡ್ ಕಮೀಷನ್ ರಚನೆ ಯಾಗಲೇ ಬೇಕು. Implementing agency is more important than passing this Bill on the floor of this House. ಇದಕ್ಕೆ ಸರ್ಕಾರಿ ಅಧಿಕಾರಿಗಳ ಸಹಾಯವೂ ಬೇಕು. ರೆವಿನ್ಯೂ ಇನ್‌ಸ್ಪೆಕ್ಟರಿಂದ ಹಿಡಿದು ರೆವಿನ್ಯೂ ಸೆಕ್ರೆಟರಿ, ರೆವಿನ್ಯೂ ಮಿನಿಸ್ಟರ್ ಲೆವಲ್ ನವರಿಗೂ ಇವರೆಲ್ಲ ಸಹಾಯ ಮಾಡಬೇಕು. ಸಾರ್ವಜನಿಕ ದೃಷ್ಟಿಯಿಂದ ಭೂಮಿ ವಿತರಣೆ ಮಾಡಲು ಲ್ಯಾಂಡ್ ಕಮೀಷನ್ ರಚನೆ ಆಗಬೇಕು. ನಾನು ಮೊದಲೇ ಹೇಳಿದ ಹಾಗೆ ಸಿಟಿಗಳಲ್ಲಿ ಇಂಡಸ್ಟ್ರಿಯಲ್ ರೆವಲ್ಯೂಷನ್ ಆಗಿದೆ, ಆದರೆ ಗ್ರಾಮಾಂತರ ಪ್ರದೇಶದಲ್ಲಿರುವ ಜನರಿಗೆ ಇದುವರೆಗೆ ಯಾವ ವಿಧವಾದ ಅಗ್ರೇರಿಯನ್ ರೆವಲ್ಯೂಷನ್ ಕೂಡ ಆಗಿಲ್ಲ. ಇದರ ಬಗ್ಗೆ ಅವರಿಗೆ ಯಾವ ಡೈರೆಕ್ಷನ್ ಕಡೆ ಹೋಗುತ್ತಿದ್ದೇವೆ ಎಂದೂ ಸಹ ಕೂಡ ಗೊತ್ತಿಲ್ಲ. ಕಾರಣ 100ಕ್ಕೆ 80 ಜನ ರೈತರು ಈ ವ್ಯವಸಾಯವನ್ನೇ ಅವಲಂಬಿಸಿಕೊಂಡಿರತಕ್ಕಂಥ ಜನ ಏನು ಇದ್ದಾರೋ ಅವರು ಕಷ್ಟ ಜೀವನವನ್ನೇ ಮಾಡುತ್ತಿದ್ದಾರೆ. ಎಲ್ಲರೂ ಕೂಡ ಕಷ್ಟಪಡುವುದು ಮಾರುದ್ದ ಬಟ್ಟೆಗಾಗಿ, ಗೇಣುದ್ದ ಹೊಟ್ಟೆಗಾಗಿಯೇ. ಆದುದರಿಂದ ರೈತನಿಗೆ 12 ಸಾವಿರ ರೂಪಾಯಿ ವರಮಾನ ಬಂದರೂ ಕೂಡ ಅವನ ಆರ್ಥಿಕ ಸ್ಥಿತಿ ಉತ್ತಮವಾಗುವುದಿಲ್ಲ; ಮತ್ತು ಅವನ ಎತ್ತು, ಕರು, ನಾಯಿ ಇವುಗಳನ್ನು ಕೂಡ ಸಾಕುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುವುದು ಸರಿಯಲ್ಲ. ಮಾನ್ಯ ಸದಸ್ಯರೊಬ್ಬರು ಇದರ ಅಂಕಿಸಂಖ್ಯೆಗಳನ್ನು ಆಧಾರವಾಗಿಟ್ಟುಕೊಂಡು ಹೇಳಿದರು, ಅವರಲ್ಲೂ ಕೂಡ ಮ್ಯಾಗ್ನಿಫೈ ಮಾಡಿಕೊಂಡು ಹೇಳುತ್ತಿದ್ದಾರೆ. ನಾನು ಹೇಳುವುದು ಏನೆಂದರೆ 12 ಸಾವಿರ ರೂಪಾಯಿ ವರಮಾನ ಇರುವವರು ಜಮೀನು ಹೊಂದಬೇಕಾದ ಅವಶ್ಯಕತೆಯೇ ಇಲ್ಲ ಎಂದು. ಏತಕ್ಕೆಂದರೆ ತಿಂಗಳಿಗೆ ಒಂದು ಸಾವಿರ ರೂಪಾಯಿಯಂತೆ ವರ್ಷಕ್ಕೆ 12 ಸಾವಿರ ರೂಪಾಯಿ ವರಮಾನ ಬಂದರೂ ಕೂಡ ಒಂದು ಜೊತೆ ಎತ್ತು ವಗೈರೆ ಸಾಕಾಗುವುದಕ್ಕೆ ಆಗದೇ ಇದ್ದಮೇಲೆ ಅದನು ಉತ್ತಮವಾದ ಜೀವನವನ್ನು ನಡೆಸುವುದಕ್ಕೆ ಹೇಗೆ ಆಗುತ್ತದೆ? ಇನ್ನೂ ಹೆಚ್ಚು ವರಮಾನ

(ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು)

ಇದ್ದರೂ ಸಹ ಅವರ ಅಭಿಪ್ರಾಯದಂತೆ. ಉತ್ತಮ ಜೀವನ ನಡೆಸುವುದಕ್ಕಾಗುವುದಿಲ್ಲ. ಅದಕ್ಕೋಸ್ಕರವಾಗಿಯೇ ಬಡವರ ಜೀವನ ಉತ್ತಮಗೊಳ್ಳಬೇಕಾದರೆ ದೇಶದಲ್ಲಿ ಗ್ರಾಮೋದ್ಯೋಗವನ್ನು ಬೆಳೆಸಬೇಕು ಎಂದು ಗಾಂಧೀಜಿಯವರು ಸಾರಿದರು. ಅಲ್ಲದೆ ಇನ್ನೊಂದು ಕಾರಣ ಏನೆಂದರೆ ನಮ್ಮ ದೇಶದಲ್ಲಿ ಜನಸಂಖ್ಯೆ ನಿಮಿಷ ನಿಮಿಷಕ್ಕೂ ಒಂದೊಂದು ಮಗು ಹುಟ್ಟುತ್ತದೆ ಎಂಬುದನ್ನು ಮರೆಯಬಾರದು ಈ ಬೆಳವಣಿಗೆಗೋಸ್ಕರವಾಗಿಯೇ ಅವರವರೇ ತಮ್ಮ ಜೀವನವನ್ನು ಮಾಡಿಕೊಂಡು ಹೋಗಲು ಈ ಗ್ರಾಮೋದ್ಯೋಗವನ್ನು ಬೆಳೆಸಬೇಕು ಎಂದು ಪೂಜ್ಯ ಗಾಂಧೀಜಿಯವರು ಹೇಳುತ್ತಿದ್ದರು. ಈಗ ಸರ್ಕಾರದವರು ಮಾಡಿರುವ ಫ್ಯಾಮಿಲಿ ಪ್ಲಾನಿಂಗ್ ರೀತ್ಯಾ ಕೀರ್ತಿಗೊಬ್ಬ ಮಗ, ಆರತಿಗೊಬ್ಬ ಮಗಳು ಇದ್ದರೆ ಸಾಕು ಎನ್ನುವ ಮನೋಭಾವನೆಯನ್ನು ಬೆಳೆಸಬೇಕು ಇದು ಮಾಡದೇ ಹೋದರೆ ಅವರು ಯಾವರೀತಿಯಾಗಿಯೂ ಉತ್ತಮವಾದ ಜೀವನ ಮಾಡುವುದಕ್ಕಾಗುವುದಿಲ್ಲ. ಕೆಲವು ಮಾನ್ಯ ಸದಸ್ಯರು ಕೇಳಿದ್ದಾರೆ ಈ ಬಗ್ಗೆ ಒಬ್ಬ ಮನುಷ್ಯನಿಗೆ ವಾರ್ಷಿಕ ವರಮಾನ 12 ಸಾವಿರ ರೂಪಾಯಿಯೇ ಇರಬೇಕು ಎಂದು ಇಟ್ಟಿರುವುದು ಏತಕ್ಕೆ ಎಂದು ಮತ್ತು ಅದರ ಜೊತೆಗೆ ವ್ಯವಸಾಯ ಮಾಡುವ ಜಮೀನಿನ ಅಂತರ 16 ಕಿಲೋಮೀಟರ್ ಅಥವಾ 12 ಮೈಲಿ ಒಳಗೆ ಇರಬೇಕು ಎನ್ನುವ ಮಿತಿ ಇಟ್ಟಿರುವುದು ಏತಕ್ಕೆ ಎಂದು ? ನನ್ನ ಉದ್ದೇಶ ಹೇಳುವುದಾದರೆ ಸರ್ಕಾರದವರು ಈ ಬಗ್ಗೆ ಏನು ಒಂದು ಸುಧಾರಣೆ ತಂದಿದ್ದಾರೋ ಅಂದರೆ ಒಂದು ಕುಟುಂಬಕ್ಕೆ ಅಂದರೆ 3 ಜನ ಮೈನರ್ಸ್ ಮಕ್ಕಳು, ಗಂಡ ಹೆಂಡತಿ ಇರುವ ಕುಟುಂಬಕ್ಕೆ ಈಗಿರುವ ಭೂಮಿತಿ ಸರಿಯಾಗಿದೆ. ಮತ್ತು 12 ಸಾವಿರ ರೂಪಾಯಿ ಇರಬೇಕು ಎಂದು ಏನು ಹೇಳಿದ್ದಾರೋ ಅದು ಸಹ ಸರಿಯಾಗಿದೆ. ಮತ್ತು ಒಬ್ಬ ಮನುಷ್ಯನಿಗೆ ಒಂದೇ ವೃತ್ತಿ ಇರಬೇಕು ಎಂದು ಏನು ಹೇಳಿದ್ದಾರೋ ಅದೂ ಸರಿಯಾಗಿದೆ. ಈಗ ಏನಾಗಿದೆ ಎಂದರೆ ಒಂದೇ ಫ್ಯಾಮಿಲಿ ಹೆಸರಿನಲ್ಲಿ ತೋಟ, ಗದ್ದೆ, ಖುಷ್ಕಿ ಜಮೀನುಗಳು ಸೇರಿಕೊಂಡಿವೆ. ಇವೆಲ್ಲಾ ಒಂದೇ ಕಡೆ ಕಾನ್ಸನ್‌ಟ್ರೇಟ್ ಆಗಿದೆ. ಈಗ ಪ್ರೊಡಕ್ಷನ್ ರೈತರ ಕೈಯಲ್ಲಿ ಇದೆ, ಡಿಸ್ಟ್ರಿಬ್ಯೂಷನ್ ಕ್ಯಾಪಿಟಲಿಸ್ಟ್ ಅವರ ಕೈಯಲ್ಲಿ ಇದೆ. ಆದುದರಿಂದ ದೊಡ್ಡ ದೊಡ್ಡ ಜಮೀನ್ದಾರರ ಹತ್ತಿರ ಇರುವ ಜಮೀನುಗಳನ್ನು ಮೊದಲು ತೆಗೆದುಕೊಳ್ಳಬೇಕು. ಆದುದರಿಂದ ಸರ್ಕಾರದವರು ಒಂದುಫ್ಯಾಮಿಲಿಗೆ 10 ಎಕರೆ ಇರಬೇಕು ಎಂದು ಏನು ಒಂದು ಸುಧಾರಣೆ ತಂದಿದ್ದಾರೋ ಅದು ಸರಿಯಾಗಿದೆ. ಕೆಲವು ಮಾನ್ಯ ಸದಸ್ಯರು ಹೇಳಿದರು 5 ಎಕರೆ 10 ಎಕರೆ ಇರತಕ್ಕ ಸಣ್ಣ ಹಿಡುವಳಿದಾರರು ಏನು ಇದ್ದಾರೆ ಅವರು ಆ ಜಮೀನನ್ನು ಉಳಿಸಿಕೊಳ್ಳುವುದಿಲ್ಲ. ಪರಭಾರೆ ಮಾಡುತ್ತಾರೆ, ಹಿಂದೆ ಆರೀತಿ ಮಾಡಿದ್ದಾರೆ ಎಂದು. ಆದಕ್ಕೆ ನಾನು ಹೇಳುವುದು ಈ ಬಗ್ಗೆ ಒಂದು ಮೆಕನೈಸ್ಡ್ ಫಾರಂ ಅಥವಾ ಕೋಆಪರೇಟೀವ್ ಫಾರ್ಮಿಂಗ್ ತಂದರೆ ಅವರ ಜೀವನ ಸುಗಮವಾಗಬಹುದು ಎಂದು ಹೇಳುತ್ತೇನೆ. ಆದ್ದರಿಂದ ಈಗ ಮಾನ್ಯ ಕಂದಾಯ ಮಂತ್ರಿಗಳು ತಂದಿರತಕ್ಕಂಥ ಈ ಮಸೂದೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ. ಜೈ ಕರ್ನಾಟಕ ಮಾತೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಉಪಾಸಭಾಧ್ಯಕ್ಷರೇ ಈಗ ತಂದಿರತಕ್ಕಂಥ ಬಿಲ್ಲನ್ನು ಆಡಳಿತ ಕಾಂಗ್ರೆಸ್‌ನಲ್ಲಿರುವ ಕೆಲವರು ಸ್ವಾಗತ ಮಾಡುತ್ತೇವೆಂದು ಹೇಳಿದರು ಇನ್ನು ಕೆಲವರು ನಮ್ಮ ಪಾರ್ಟಿಯಲ್ಲಿ ಏನು ನಿರ್ಣಯ ಬರುತ್ತದೋ ಅದಕ್ಕೆ ಬೆಂಬಲ ಇರಲೇ ಬೇಕು ಆದರೂ ಕೂಡ ಮನುಷ್ಯನಿಗೆ ಫ್ರೀಡಂ ಆಫ್ ಸ್ಪೀಚ್ ಏನು ಇದೆ. ಆದರಂತೆ ನಮ್ಮ ಮನಸ್ಸಿನಲ್ಲಿರುವುದನ್ನು ಸ್ವಚ್ಛವಾಗಿ ಹೇಳಿಬಿಡೋಣ ಎಂದು ಕೆಲವು ಮಾತುಗಳನ್ನು ಹೇಳಿದರು. ಅವರ ಭಾಷಣ ಕೇಳಿ ನನಗೆ ಬಹಳ ನಿರಾಶೆಯಾಗಿ ಹೋಯಿತು. ಶ್ರೀಮಾನ್ ಸುಬ್ಬಯ್ಯಶೆಟ್ಟರು ಮತ್ತು ಇನ್ನು ಕೆಲವು ಮಿತ್ರರು ಮಾತನಾಡಿದ್ದರಲ್ಲಿ ಸಿಲ್ವರ್ ಲೈನಿಂಗ್ ಇದೆ ಎಂದು ನನಗೆ ಅರ್ಥವಾಗುತ್ತದೆ. ಒಂದು ಸಂತೋಷದ ಸಂಗತಿ ಏನೆಂದರೆ ಅವರಿಗೆ ಫ್ರೀಡಂ ಆಫ್ ಸ್ಪೀಚ್ ಇರುವುದರಿಂದ ಇದರಲ್ಲಿ ಸ್ವಚ್ಛವಾಗಿ ಅವರ ಮನಸ್ಸಿನಲ್ಲಿದುದನ್ನು ಮಾತನಾಡಿದ್ದಾರೆ. ಇನ್ನು ಕೆಲವರು ಹೇಳುತ್ತಿದ್ದಾರೆ ಒಂದು ವರ್ಷದ ಹಿಂದಿನಿಂದಲೂ ಈ ಸಮಾಜವಾದ ಘೋಷಣೆಗೆ ನಾವು ಒಪ್ಪಿರುವುದರಿಂದ ಈ ಲ್ಯಾಂಡ್ ಸೀಲಿಂಗ್ ಬಗ್ಗೆ ನಾವು ಬದ್ಧರಾಗಿದ್ದೇವೆ ಎಂದ. ಆ ರೀತಿ ಹೇಳದೇ ಇರುವವರೂ ಎಷ್ಟೋ ಜನ ಇದ್ದಾರೆ ಎನ್ನುವುದೂ ಕೂಡ ಅವರ ಭಾಷಣದಿಂದ ಅರ್ಥವಾಗುತ್ತದೆ. ಆದರೂ ಕೂಡ ಕೆಲವು ಸದಸ್ಯರು ಈ ಬಗ್ಗೆ ಬಿಚ್ಚುಮನಸ್ಸಿನಿಂದ ಮಾತನಾಡಿದ್ದಾರೆ. ಅದರಲ್ಲಿ ನನಗೆ ಒಂದು ವಿಷಯ ಅರ್ಥವಾಗುತ್ತದೆ. ಈಗ ಭೂಮಿತಿಯನ್ನು 10 ಎಕರೆ ಅಂತ ಏನು ಮಾಡಿದ್ದಾರೆ ಅದನ್ನು 12 ಎಕರೆಯವರೆಗೆ ಹೆಚ್ಚಿಸೋಣ, ಸಾಧ್ಯವಾದರೆ 14 ಎಕರೆಯವರೆಗೂ ಹೆಚ್ಚಿಸೋಣ, ಇನ್ನೂ ಸಾಧ್ಯವಾದರೆ 18 ಎಕರೆಯವರೆಗೂ ಹೆಚ್ಚಿಸುವುದಕ್ಕೆ ಒಂದು ಗೋಲಿಹೊಡೆ

ಯೋಣ ಎನ್ನುವ ರೀತಿಯಲ್ಲಿ ಅವರುಗಳು ಮಾತನಾಡಿದ್ದಾರೆ. ಇದರಿಂದ ನನಗೆ ಅರ್ಥವಾಗುವದು ಏನೆಂದರೆ ಈಗಿರತಕ್ಕಂಥ ಲ್ಯಾಂಡ್ ಸೀಲಿಂಗ್‌ನ್ನು 10 ರಿಂದ 14 ಎಕರೆಯವರೆಗೂ ಮಾಡೋಣ ಎಂಬ ಒಳಸಂಚು ನಡೆಯುತ್ತಾ ಇದೆ ಎನ್ನುವ ಸಂಶಯ ನಮಗೆ ಬರುತ್ತದೆ. ಈರೀತಿ ಸಂಶಯ ಬಂದಿರುವುದರಿಂದ ನಮ್ಮ ಪಾರ್ಟಿ ನಿಲವು ಏನು ಇದೆ ಎಂತಲೂ ನಾನು ಹೇಳಬೇಕಾಗುತ್ತದೆ. ಆದುದರಿಂದರಿಂದ ಈ ಬಿಲ್ಲನ್ನು ಎಷ್ಟರಮಟ್ಟಿಗೆ ಒಪ್ಪಬೇಕು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುವುದಕ್ಕಾಗುದಿಲ್ಲ ಎನ್ನುವ ನಿರ್ಣಯವನ್ನು ನಾನು ಈ ಸಭೆಯ ಮುಂದೆ ಇಡಬೇಕಾಗಿದೆ.

ಈ ಬಿಲ್ಲಿನಲ್ಲಿ 2-3 ಅಂಶಗಳು ಪೂರ್ತಿ ತಪ್ಪಿ ಹೋಗಿದೆ. ಕಳೆದ 25 ವರ್ಷಗಳ ಕಾಲದಿಂದ ಕೂಡ ಲ್ಯಾಂಡ್ ಟು ದಿ ಟಿಲ್ಲರ್‌ಗೆ ದೊರೆಯುವುದಿಲ್ಲ ಎಂದು ಯಾವ ಸರ್ಕಾರವೂ ಹೇಳಲಿಲ್ಲ. ಬರೀ ಬಂಡವಾಳಶಾಹಿಗಳಿಗೆ ಮತ್ತು ಭೂಮಾಲೀಕರಿಗೆ ಕೊಡುತ್ತೇವೆ ಟಿಲ್ಲರ್‌ಗೆ ಕೊಡುವುದಿಲ್ಲವೆಂದು ಯಾವ ಸರ್ಕಾರವು ಹೇಳಲಿಲ್ಲ. ಲ್ಯಾಂಡ್ ಟು ದಿ ಟಿಲ್ಲರ್ ಕಾಯಿದೆ ತರುತ್ತೇವೆಂದು ಹೇಳಿದರೂ ಏತಕ್ಕೆ ಕಾರ್ಯರೂಪಕ್ಕೆ ಬರಲಿಲ್ಲ? ಕಾರ್ಯರೂಪಕ್ಕೆ ತರುವ ಮನಸ್ಸಿನಿಂದ ಕಾಯಿದೆಯನ್ನು ಮಾಡಲಿಲ್ಲ. ಆ ತತ್ವದಮೇಲೆ ಚರ್ಚೆ ನಡೆಯುವಾಗ ಏತಕ್ಕೆ ಹೆದರಿಕೊಳ್ಳುತ್ತೀರಿ ಮತ್ತು ಈ ಪ್ರಾವಿಷನ್ ಇಡುತ್ತೀರಿ? ಲಾಯರ್ ಕಡೆ ಹೋಗಿ ಒಂದು ಪಿಟಿಷನ್ ಹಾಕಿದರೆ ಸುಪ್ರೀಮ್ ಕೋರ್ಟಿಗೆ ಹೋಗುತ್ತಾರೆ. ಆಗ ಮಸೂದೆ ಅಂಗೀಕಾರ ಆಗಿದ್ದರೂ ಕಾರ್ಯರೂಪಕ್ಕೆ ಬರದೆ ಇರುವಂತಹ ಪ್ರಾವಿಷನ್ ಇದೆ ಎಂದು ಧೈರ್ಯದಿಂದ ಹೇಳಿಕೊಳ್ಳುವ ಸನ್ನಿವೇಶ ಈಗ ಇಲ್ಲ. ಚಿಕ್ಕಮೀನುಗಳು ಇತರ ಮೀನುಗಳ ಜೊತೆ ಹಾರಿ ಹಾರಿ ಬೀಳುತ್ತಿವೆ. ಚಿಕ್ಕಮೀನುಗಳು ಗೇಣು ನೀರು ನಿಂತರು ಅದರಲ್ಲಿ ಬದುಕಿಕೊಳ್ಳುತ್ತವೆ ಎನ್ನುವ ಆಸೆ ಇದೆ. ಈ ರೀತಿ ದೊಡ್ಡಮೀನುಗಳಿಗೆ ಮತ್ತು ಸಣ್ಣ ಮೀನುಗಳಿಗೆ ಕಾಂಟ್ರಡಿಕ್ಷನ್ ಕಂಡುಬರುತ್ತಿದೆ. ಅದು ಸ್ವಾಗತಾರ್ಹ. ಸಣ್ಣ ಮೀನುಗಳಿಗೆ ನೀವು ಹೆದರಬೇಡಿ ಹೊಂಡದಲ್ಲಿ ನೀರು ಇಲ್ಲದೆ ಇದ್ದರೆ ತಂದು ಹಾಕುತ್ತೇವೆ ನಿಮ್ಮ ಜೊತೆಗೆ ನಾವು ಇದ್ದೇವೆ ಎಂದು ಹೇಳುತ್ತೇನೆ. ಮೈಸೂರು ಸ್ಟೇಟ್‌ನಲ್ಲಿ ಭೂಮಿ ಡಿಕ್ಲೇರೇಷನ್ ಕೊಡುವಾಗ ಬೇರೆ ರಾಜ್ಯದಲ್ಲಿ ಅಂದರೆ ಆಂಧ್ರ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಎಷ್ಟು ಭೂಮಿಯಿದೆ ಎಂದು ಕನ್ಸಿಡರ್ ಮಾಡಬೇಕು. ಹಾಗೆ ಅದನ್ನು ಇಲ್ಲಿ ಕೇಳುವ ಗೋಜಿಗೆ ಹೋಗಿಲ್ಲ ಮತ್ತು ಆ ರೀತಿ ಪ್ರಾವಿಷನ್ ಈ ಬಿಲ್ಲಿನಲ್ಲಿ ತರಲಿಲ್ಲ. ಈ ಬಿಲ್ಲು ಕುಂಟುಕಾಲಿನಿಂದ ಕುಂಟುತ್ತಾ ಇದೆ. ಅದನ್ನೆ ಸರಿಯಾಗಿ ಮೊದಲು ಪ್ರಯತ್ನ ಮಾಡಬೇಕು. ಮಾನ್ಯ ರೆವಿನ್ಯೂ ಮಂತ್ರಿಗಳು ಈ ತಿದ್ದುಪಡಿಯನ್ನು ತಂದರೆ ಸ್ವಾಗತಾರ್ಹ ನಾವು ತಂದರೆ beyond the scope of the Bill ಆಗುತ್ತದೆ. ಈ ಬಿಲ್ಲಿನ ಚೌಕಟ್ಟಿನ ಒಳಗಡೆ ನಾವು ತಿದ್ದುಪಡಿ ತರುವುದಕ್ಕೆ ಅವಕಾಶವಿದೆ. ಈ ಬಿಲ್ಲಿನ ಹೊರಗಡೆ ಹೋಗುವುದಕ್ಕೆ ಆಗುವುದಿಲ್ಲ. ಈ ತರಹ ಪ್ರಾವಿಷನ್ಸ್ ಸರ್ಕಾರದ ಕಡೆಯಿಂದ ತರಬೇಕು. ನಾವು ಅಮೆಂಡ್‌ಮೆಂಟ್ ಸಜೆಸ್ಟ್ ಮಾಡಿದ್ದೇವೆ. ಇದು ಬಿಲ್ಲಿನ ಒಳಗಡೆ ಇದೆ ಎಂದಾಗಲಿ ಅಥವಾ ಹೊರಗಡೆ ಇದೆ ಎಂದಾಗಲಿ ಅಂತೂ ನಾವು ಸೇರಿಸಿ ಬಿಟ್ಟಿದ್ದೇವೆ. ಯಾರು ಡಿಕ್ಲರೇಷನ್ ಸುಳ್ಳು ಕೊಡುತ್ತಾರೆ ಅಂತವರಿಗೆ 500 ರೂಪಾಯಿ ಜುಲ್ಮಾನೆ ಹಾಕುತ್ತೇವೆ ಎಂದು ಹೇಳುತ್ತೀರಿ. 400 ಲಾರಿಗಳ ಬ್ಲಾಕ್‌ಮಾರ್ಕೆಟ್ ಮಾಡಿದವನಿಗೆ ಕೇರಳದಲ್ಲಿ ಸ್ಮಗಲ್ ಮಾಡಿದವನಿಗೆ, ಮಹಾರಾಷ್ಟ್ರದಲ್ಲಿ ಸ್ಮಗಲ್‌ಮಾಡಿದವನಿಗೆ ಎಷ್ಟು ಜುಲ್ಮಾನೆ ಹಾಕುತ್ತಾರೆ ಎಂದರೆ 250 ರಿಂದ 2 ಸಾವಿರ ರೂಪಾಯಿಯವರೆಗೆ ಹಾಕುತ್ತಾರೆ. ಅಷ್ಟೇ ಅಲ್ಲ ಒಂದು ವರ್ಷ ಜೈಲಿನಲ್ಲಿ ಕೂರಿಸುತ್ತಾರೆ. ಅಂತಹ ಪ್ರಾವಿಷನ್ ಈ ಮಂತ್ರಿ ಮಂಡಲ ತರಲಿಲ್ಲ. ಅರ್ಧ ಮನಸ್ಸಿನಿಂದ ಬಿಟ್ಟು ಬಿಟ್ಟಿದ್ದೀರಿ. ನಿಮ್ಮ ಕಡೆಯಿಂದ ತನ್ನಿ ಕೈ ಎತ್ತುವವರು ಜಾಸ್ತಿಯಾಗುತ್ತಾರೆ. ನಾವು ತಂದರೆ ಕೈ ಎತ್ತುವವರು ನಮ್ಮಲ್ಲಿ ಕಡಿಮೆ ಯಾಗುತ್ತದೆ. ಇದರಲ್ಲಿ ಪ್ರಿನ್ಸಿಪಲ್ ಇಷ್ಯೂ ಬರುತ್ತದೆ. ನಾವು ಲ್ಯಾಂಡ್ ರಿಫಾರಮ್ಸ್ ಬಿಲ್ಲು ತಂದಿದ್ದರೆ ಅದರಿಂದ ಒಂದು ಇಂಚು ಕೂಡ ಹಿಂದೆ ಸರಿಯುವುದಿಲ್ಲ ಎನ್ನುವ ಎದೆಗಾರಿಕೆ ಬೆಳೆಸಿಕೊಳ್ಳಿ, ಇನ್ನು ಅರ್ಬನ್ ಸೀಲಿಂಗ್ ತನ್ನಿ ಎಂದು ಹೇಳುತ್ತೇನೆ. ಅರ್ಬನ್ ಸೀಲಿಂಗ್, ಈ ಸೀಲಿಂಗ್, ಎರಡನ್ನು ಸೈಮಲ್ಟೇನಿಯಸ್ಸ ಆಗಿ ತರಲಿಲ್ಲ. ಆದ್ದರಿಂದ ಕೂಡಲೇ ಈ ಬಿಲ್ ಪಾಸ್‌ಮಾಡಬೇಕಾಗುತ್ತದೆ. ಮೊದಲು ಅದು ತನ್ನಿ ಆಮೇಲೆ ಇದನ್ನು ತನ್ನಿ ಎಂದು ಹೇಳುವವರು ಇದ್ದಾರೆ. 10 ಕೊಲೆ ಮಾಡಿದವನನ್ನು ಮೊದಲು ಹಿಡಿಯಿರಿ ಕೇವಲ ಮೂರು ಕೊಲೆ ಮಾಡಿದವನನ್ನು ಹಿಡಿಯುವುದಕ್ಕೆ ಆಮೇಲೆ ಬರಲಿ ಎಂದು ಹೇಳಿದ ಹಾಗೆ ಹಾಗುತ್ತದೆ, ಈಗ ಕೊಲೆ ಮಾಡಿರುವವನ್ನ ಸಿಕ್ಕಿರುವಾಗ ಅವನನ್ನು ಮೊದಲು ಹಿಡಿಯಲೇ ಬೇಕಾಗುತ್ತದೆ. ಈಗ ನಮ್ಮ ಜೊತೆಯಲ್ಲಿ ಭೂಮಿ ಕಳೆದುಕೊಂಡಿರುವವರ ಭುಜಕ್ಕೆ ಭುಜಹಾಕಿ ಕೆಂಪುಬಾವುಟ ಹಿಡಿದು ನಮ್ಮ ಜೊತೆಗೆ ಬನ್ನಿ. ನಮ್ಮ ಮಕ್ಕಳಿಗೆ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಲಿಲ್ಲವೆಂದು ಹೇಳಿ.

(ಶ್ರೀ ಪಿ. ಎನ್. ಪಾಟೀಲ್)

Land to the tiller of the soil. ಎಂದು ಹೇಳುವ ಕಮ್ಯೂನಿಷ್ಟ್ ಸ್ಲೋಗನ್‌ಗೆ ಬೆಂಬಲ ಕೊಡುವುದರ ಸಮೀಪಕ್ಕೆ ತಾವು ಬರುತ್ತೀರಿ ನಮ್ಮ ಯುದ್ಧದಲ್ಲಿ ಜಾಯಿನ್ ಆಗುತ್ತಿದ್ದೀರಿ. ಟೆನೆನ್ಸಿ ರಿಲೇಷನ್‌ಷಿಪ್ ಅಬಾಲಿಷ್ ಮಾಡುತ್ತಿದ್ದೀರಿ. ಕೇರಳದಲ್ಲಿ ಏನು ಮಾಡಿದ್ದಾರೆ ಹಾಗೆ ಇಲ್ಲಿ ಮಾಡಿದ್ದರೆ ಅದು ಸ್ವಾಗತಾರ್ಹ. ಇನ್ನು ಸೆಕ್ಷನ್ 14 (ಸಿ) ಯಾತಕ್ಕೆ ಇಡುತ್ತೀರಿ ? ವೆಸ್ಟೆಡ್ ಇಂಟರೆಸ್ಟ್ ಜೋಪಾನ ಮಾಡುವುದರಲ್ಲಿ ಸಹಾಯ ಮಾಡುತ್ತೀರೆಂದು ಸಂಶಯ ಬರುತ್ತದೆ. ಇವೊತ್ತಿನ ದಿನ ನಿಮ್ಮಲ್ಲಿ ಬಿಳಿಕೂದಲು ಕರೆಕೂದಲು ಇರುವವರು ಎಷ್ಟು ಜನರಿದ್ದಾರೆ ಎಂದು ಎಲ್ಲರೂ ನೋಡುತ್ತಿದ್ದಾರೆ. ಬರೀ ಕರೀ ಕೂದಲು ಇರುವವರು ಬರುತ್ತಿದ್ದಾರೆ. ಬಿಳಿ ಕೂದಲು ಇರುವ ಮುದುಕರನ್ನು ರಿಜೆಕ್ಟ್ ಮಾಡಿದಮೇಲೆ ನಿಮ್ಮ ತಲೆಯಲ್ಲಿ ಬಿಳಿಕೂದಲು ಬೆಳೆಸಿದಂತೆ ಕಾಣುತ್ತದೆ. ನೀವು ಜನತೆಗೆ ಕೊಟ್ಟ ಆಶ್ವಾಸನೆ ಪಾಲಿಸದೆ ಇದ್ದರೆ 25 ತಿಂಗಳುಕೂಡ ರಾಜ್ಯಭಾರ ಮಾಡುವುದಕೆ ನಿಮ್ಮಿಂದ ಆಗುವುದಿಲ್ಲ. ಜನತೆಯಿಂದ ರೆವಲ್ಯೂಷನ್ ಆಗುತ್ತದೆ. ನಿಮ್ಮನ್ನು ಉಳಿಸುವುದಕ್ಕೆ ಬರುವುದಿಲ್ಲ. ಆದುದರಿಂದ ಸೆಕ್ಷನ್ 14ನ್ನು ಕಂಪ್ಲೀಟ್ ಬ್ಯಾನಿಷ್ ಮಾಡಿ. ಉಳುವವನೇ ಹೊಲದ ಒಡೆಯ ಆಗಬೇಕು. ಬಂಡವಾಳಶಾಹಿ ಹೋಗಬೇಕು. ಕೃಷಿ ಪಂಡಿತ ಹೋಗಬೇಕು. ಸ್ಟೇಟ್ ಪಾರ್ಟಿ ಕರೆಸಿ ರವೀಂದ್ರ ಕಲಾಕ್ಷೇತ್ರದಲ್ಲಿ ನಾಟಕ ಮಾಡುವುದು ಬೇಡ. ಭೂಮಿಯಲ್ಲಿ ದುಡಿದು ಉತ್ಪನ್ನ ಮಾಡಿದ ದುಡಿದ ರೈತ, ದುಡಿದ ಕಾರ್ಮಿಕನಿಗೆ ಹರಕು ಕಂಬಳಿ ಬಟ್ಟೆ ಕೂಡ ಕೊಟ್ಟಿಲ್ಲ. ಅಬ್ಸೆಂಟೀ ಲ್ಯಾಂಡ್ ಲಾರ್ಡ್‌ಗೆ ಕೃಷಿಪಂಡಿತ ಎಂದು ಏನು ಟೈಟಲ್ ಕೊಡುತ್ತೀರಿ ಅದು ಹೋಗಬೇಕು. ಇನ್ನುಮುಂದೆ ಜನಗಳು ಅಂತಹವರಿಗೆ ಸಹಾಯಮಾಡುವುದಕ್ಕೆ ತಯಾರಿಲ್ಲ. ಮೊದಲು ಟೈಟಲ್ ತೆಗೆದುಬಿಡಿ. ಇದನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಕ್ಲೀಯರ್ ಕಟ್ ಆಗಿ ಹೇಳಬೇಕಾಗುತ್ತದೆ. ಈ ಬಿಲ್ಲಿನಲ್ಲಿ ಕೆಲವು ಸಜೆಷನ್ಸ್ ಮಾಡಬೇಕೆಂದಿದ್ದೇನೆ. ಮೂಲ ಸಿದ್ಧಾಂತಕ್ಕೆ ಹೋಗುವುದಿಲ್ಲ. ಬಡತನ ಬೆಳೆಸುತ್ತೀರಿ ಹೊಟ್ಟೆಗೆ ತಿನ್ನುವುದಕ್ಕೆ ಗತಿ ಇಲ್ಲದವರಿಗೆ ನಿರ್ಗತಿಕರಾಗಿ ಮಾಡುತ್ತೀರೆಂದು ಹೇಳುತ್ತೇನೆ. ಹಳಿ, ರೈತ ಎಷ್ಟು ದುಡಿದರು ಅರ್ಧ ಹೊಟ್ಟೆಗೆ ಸಿಕ್ಕುವುದಿಲ್ಲ, ಅವನ ಮಗನಿಗೆ ಟೆರಿಲಿನ್ ಸೂಟ್ ಬರುವುದಿಲ್ಲ. ನಾವು ಹೇಳು ವುದು ತತ್ವಶಃ ಸರಿಯಾಗಿದೆ. ನಾಯಕ ದುಡಿಯುವ ರೈತ ಇದ್ದಾನೆ. ಲ್ಯಾಂಡ್ ಲಾರ್ಡ್ಸ್‌ಗೆ ಸುಖ ಇಲ್ಲ ಎಂದು ಏನು ಲಾಂಡ್‌ಲಾರ್ಡ್ಸ್ ಪರವಾಗಿ ಹೇಳಿದ್ದೀರಿ, ಅವನಿಗೆ ಸುಖ ಇಲ್ಲದಿದ್ದರೂ ಇರುವುದಕ್ಕೆ ಒಂದು ಮನೆಯನ್ನು ಕಟ್ಟಿಸಿಕೊಂಡಿದ್ದಾನೆ. ಇಂಥ ಅನುಕೂಲ ಯಾವ ದಟ್ಟ ದರಿದ್ರ ರೈತನಿಗೆ ಇದೆ ಹೇಳಿ. 10 ಎಕರೆಗಿಂತ ನಾಲ್ಕು ಎಕರೆ ಗದ್ದೆ ಇಟ್ಟವರ ಉದಾಹರಣೆ ಯನ್ನು ತೆಗೆದುಕೊಳ್ಳಬೇಕು. 10 ಎಕರೆಗಿಂತ ಹೆಚ್ಚು ಇಟ್ಟವರು ಟೈಟಲ್ ಹೋಲ್ಡರ್ ಇದ್ದಾರೆಯೇ ? ಅವರು ಎ-1 ಪ್ಯಾಡಿ ತೆಗೆದು ಟೈಟಲ್ ತೆಗೆದು ಇದ್ದಾರೆಯೇ ? ಐದು ಎಕರೆ ಇಟ್ಟು ಡೆಮಾನ್‌ಸ್ಟ್ರೇಷನ್ ಪ್ಲಾಟ್ ಇಟ್ಟು ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿಗೆ ಹೋಗಿ ಅವರಿಂದ ರಾಸಾಯನಿಕ ಗೊಬ್ಬರ ಪಡೆದು, ಯಾರು ಕ್ರಾಪ್ ಬೆಳೆಸಿದ್ದಾರೆಯೋ ಅವರು ಫಸ್ಟ್ ಕ್ಲಾಸ್ ಪ್ಯಾಡಿ ತೆಗೆದಿದ್ದಾರೆ, ಟೈಟಲ್ ತೆಗೆದುಕೊಂಡಿದ್ದಾರೆ. ಐದು ಎಕರೆಯಲ್ಲಿ ಇಟ್ಟುಕೊಂಡಂಥವನು ಈ ರೀತಿ ಮಾಡಿ ತೋರಿಸಿದ್ದಾನೆ. ಆದರೆ 100 ಎಕರೆ ಪ್ಲಾಟ್ ಮಾಡಿ ಇಟ್ಟುಕೊಂಡಿರುವವರು ಟೈಟಲ್ ತೆಗೆದುಕೊಳ್ಳುವ ರೀತಿ ವ್ಯವಸಾಯ ಮಾಡಿ ತೋರಿಸಿದ್ದಾರೆಯೇ ? ಹಾಗೆ ವ್ಯವಸಾಯ ಮಾಡಿ ತೋರಿಸಿದ್ದರೆ ನಾನು ಒಪ್ಪುತ್ತಿದ್ದೆ. ಮಾನ್ಯ ಸದಸ್ಯರಾದ ನಾಯುಡು ಅವರು ಒಂದು ವಿಷಯವನ್ನು ಹೇಳಿದರು. ರೈತನ ಸ್ಥಿತಿಗತಿಗಳು ಈ ತರಹ ಇರುತ್ತವೆ, ಸ್ಮಾಲ್ ಹೋಲ್ಡಿಂಗ್ಸ್ ಇದ್ದರೆ, ಅದು ಎಕನಾಮಿಕ್ ಹೋಲ್ಡಿಂಗ್ಸ್, ರೈತನ ಜೀವನ ಸುಧಾರಿಸಬೇಕು ಎನ್ನುವ ಬಗ್ಗೆ ಎಸ್.ಎಲ್.ಡಿ. ಯವರು ಅಂಕಿ ಅಂಶಗಳನ್ನು ತೆಗೆದಿದ್ದಾರೆ ಎಂದು. ರೈತನ ಎಕನಾಮಿಕ್ ಕಂಡಿಷನ್ಸ್ ಸರಿಯಾಗಿ ಇಲ್ಲದಿರುವುದಕ್ಕೆ ಅವನ ಬೆನ್ನ ಹಿಂದೆ ಇರುವ ಸಾಲ ಸೋಲವೇ ಕಾರಣ. ಸೊಸೈಟಿಯವರು ಕೊಟ್ಟಿರತಕ್ಕ ಹಣ ಅವನ ಹೊಲಕ್ಕೆ ರೈತನ ಮನೆಗೆ ಮುಟ್ಟಿದೆ, ಅವನು ಮಾಡಿ ದಂಥ ಸಾಲ ಪಾವತಿ ಮಾಡುವುದಕ್ಕೆ ಹೋಗುತ್ತದೆ. ಇಂಥ ಬಂಧನದಿಂದ ಅವನನ್ನು ವಿಮುಕ್ತ ನನ್ನಾಗಿ ಮಾಡಬೇಕು. 5—10 ಎಕರೆ ಇರುವ ರೈತ 50 ಎಕರೆ ಜಮೀನು ಇರುವ ಲ್ಯಾಂಡ್ ಲಾರ್ಡ್ಸ್ ಜೊತೆಗೆ ಕಾಂಪಿಟಿಷನ್ ಮಾಡುವುದಕ್ಕೆ ಒಂದು ಹೆಜ್ಜೆಯೂ ಹಿಂದೆ ಸರಿಯುವುದಿಲ್ಲ. 10 ಎಕರೆಗಿಂತ ಹೆಚ್ಚಿಗೆ ಸೀಲಿಂಗ್ ಇಡಬೇಕಾಗಿದ್ದರೆ ನಮ್ಮ ಜನಕ್ಕೆ ದ್ರೋಹ ಮಾಡಿದಂತಾಗು ತ್ತದೆ. ಅವರಿಗೆ ದ್ರೋಹ ಮಾಡುವುದಕ್ಕೆ ಹೋಗಬಾರದು. ಸ್ವಲ್ಪ ಪಾಪ ಪುಣ್ಯ ನೋಡಬೇಕು. ದುಡ್ಡು ಇರುವ ಬಂಡವಾಳ ಶಾಹಿಗಳಿಗೆ ಪಾಪ ಪುಣ್ಯವನ್ನು ನೋಡುವುದಲ್ಲ. ಹಾಗೆ ಮಾಡಿದರೆ ಜನರು ಮಾತ್ರ ನಿಮ್ಮನ್ನು ಕ್ಷಮೆ ಮಾಡುವುದಿಲ್ಲ. ಆದ್ದರಿಂದ 10 ಎಕರೆಗಿಂತ ಹೆಚ್ಚು ಮಿತಿ ಇಡುವ ಗೋಜಿಗೆ ಹೋಗಬಾರದು. ಫ್ಯಾಮಿಲಿ ಡೆಫಿನೀಷನ್ ಕೊಡುವಾಗ ಯಾವ ಉದ್ದೇಶದಿಂದ ಕೊಡು

ತ್ತಾರೋ ಗೊತ್ತಾಗುವುದಿಲ್ಲ, ಫ್ಯಾಮಿಲಿ ಎಂದರೆ, ಗಂಡ ಹೆಂಡತಿ ಮೈನರ್ ಮಕ್ಕಳು ಮುಗಿದು ಹೋಯಿತು. ಐದು ಮಂದಿ ಮೇಜರ್ ಮಕ್ಕಳು ಇದ್ದರೆ ಏನು ಮಾಡಬೇಕು ? ಆದ್ದರಿಂದ ಈ ತಿದ್ದುಪಡಿಯ ಹಿನ್ನೆಲೆ ಏನು ಎಂದು ತಿಳಿಸಬರುತ್ತದೆ. ಮೊದಲಿನ ಆಕ್ಟ್‌ನಲ್ಲಿ ಫ್ಯಾಮಿಲಿ ಡೆಫಿನೇಷನ್‌ನಲ್ಲಿ ಸಿನ್ಸಿಯರ್ ಒಂದು ಪರ್ಪಸ್ ಇತ್ತು. ಈಗಿನ ಡೆಫಿನೆಷನ್ ಹಿನ್ನೆಲೆಯಲ್ಲಿ ಪಿತೂರಿ ಅಡಗಿದೆ ಎನ್ನುವ ಸಂಶಯ ಬರುತ್ತದೆ. ನಾವು ಅದನ್ನು ಕಿತ್ತು ಹಾಕಬೇಕಾಗಿದೆ. ಆದ್ದರಿಂದ ಮೊದಲಿನ ಫ್ಯಾಮಿಲಿ ಡೆಫಿನೆಷನ್ ಅನ್ನು ಇಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ಮಸೂದೆಯ ಬಗ್ಗೆ ಡೆಮಾಕ್ರಟಿಕ್ ಸೆಟ್ ಅಪ್‌ನಲ್ಲಿ ಡಿಸ್‌ಕಷನ್ ಮಾಡುತ್ತಾ ಇದ್ದೇವೆ. ಅಂದಾಗ 100ಕ್ಕೆ 90 ಜನತೆಯ ಕಣ್ಣೀರು ಸುರಿಸುವುದಕ್ಕೆ ಕಾಯಿದೆ ತರೋಣವೇ, 100ಕ್ಕೆ 10ರಷ್ಟು ಜನತೆಯ ಸಲುವಾಗಿ ಕಾಯಿದೆ ಇರುವುದೇ. ಇದನ್ನು ನೋಡಿದರೆ ಯಾರ ಪರವಾಗಿ ವಾದ ಬಂತು ಅಥವಾ 100ಕ್ಕೆ ಐದು ಜನರ ಪರವಾಗಿ ಕಣ್ಣೀರು ಸುರಿಯುತ್ತದೆ ಎಂದು ಗೊತ್ತಾಗುತ್ತದೆ. ಐದು ಜನರ ಪರವಾಗಿ ಕಣ್ಣೀರು ಸುರಿಯಬೇಕಾದರೆ ಈ ಕಡೆ ಸ್ಥಳದಲ್ಲಿ ಇರಬೇಕು. ಅಲ್ಲಿ ತಪ್ಪಿ ಕೂತಿದ್ದಾರೆ. ನ್ಯಾಷನಲ್ ಸರ್ವೆ ಮಾಡಿದಾಗ 50 ಎಕರೆಗಿಂತ ಹೆಚ್ಚು ಭೂಮಿ ಪಡೆದವರು 13ಪರ್ಸೆಂಟ್ ಇದ್ದಾರೆ. ಶೇ॥90 ಜನರು ನಿರುದ್ಯೋಗಿಗಳಾಗಿದ್ದಾರೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸುವುದು? ಒಂದು ಕನ್‌ಸೆಪ್‌ಷನ್ ಏನಾಗಿದೆ ಎಂದರೆ, ಮೀನ್ಸ್ ಆಫ್ ಪ್ರೊಡಕ್ಷನ್‌ನಲ್ಲಿ ಮೀನ್ಸ್ ಆಫ್ ಎಕ್ಸ್‌ಪ್ಲಾಯಿಟೇಷನ್ ಆಗಿದೆ. ಮೀನ್ಸ್ ಆಫ್ ಎಕ್ಸ್‌ಪ್ಲಾಯಿಟೇಷನ್ ನಿಂದ ವಿಮುಕ್ತಿಗೊಳಿಸುವುದಕ್ಕೆ ಮೀನ್ಸ್ ಆಫ್ ಪ್ರೊಡಕ್ಷನ್ ಇದೆ. It should be owned by the Community and not by the Individual ಎನ್ನುವ ತತ್ವಕ್ಕೆ ಬರುತ್ತದೆ. ಈ ತತ್ವಕ್ಕೆ ಹೋಗುವುದರಲ್ಲಿ ಇದು ಮೊದಲನೆಯ ಹೆಜ್ಜೆ ಎಂದು ತಿಳಿದುಕೊಳ್ಳಬೇಕಾಗುತ್ತದೆ, ಮೀನ್ಸ್ ಆಫ್ ಪ್ರೊಡಕ್ಷನ್‌ನಿಂದ ಕೆಲವು ಜನರನ್ನು ದೂರು ಮಾಡುತ್ತಿದ್ದೀರಿ. ರೈಟ್ ರೀ ಆಕ್ಷನರಿ ಫೋರ್ಸ್ಸ್ ಜನರಲ್ಲಿ ಅಶಾಂತತೆಯನ್ನು ಮಾಡಿಸುತ್ತಿದ್ದಾರೆ. ಸರ್ಕಾರ ಮಾಡುತ್ತಾ ಇರುವ ಭೂಸುಧಾರಣೆಯಿಂದ ಬಡತನ ಬೆಳೆಯುತ್ತದೆ, ಅನ್ಯಾಯವಾಗಿದೆ. ಭೂಸುಧಾರಣೆ ಇಂಟರ್‌ಡ್ಯೂಸ್ ಮಾಡುವುದರಿಂದ ನಮ್ಮ ಕಡೆ ಕ್ಷಾಮ ಬರುತ್ತದೆ. ದೇವರು ಮಳೆ ಕೊಡಲಿಲ್ಲ, ಎಂದು ಅಪಪ್ರಚಾರಗಳನ್ನು ಕ್ಯಾಪಿಟಲಿಸ್ಟ್ ಮತ್ತು ವೆಸ್ಟೆಡ್ ಇಂಟರೆಸ್ಟ್ ಜನಗಳು ಮಾಡುತ್ತಾ ಇರುತ್ತಾರೆ. ಇಂಥ ಅಪಪ್ರಚಾರಕ್ಕೆ ಹೋಗಲಾರದಂತೆ, ಕಿವಿ ಕೊಡಲಾರದಂತೆ ಸೆಲ್‌ಫ ಕಂಟೆಂಟೆಡ್ ಆಗಿ ಇರಬೇಕು. ರೆಂಟ್ ಬಗ್ಗೆ ಸೀಲಿಂಗ್ ಬಗ್ಗೆ ಬಹಳ ಕನ್‌ಫ್ಯೂಷನ್ ಕ್ರಿಯೇಟ್ ಆಗುತ್ತಾ ಇದೆ. ಇವತ್ತು ಈ ಕಾಯಿದೆಯನ್ನು ಪಾಸು ಮಾಡಿದ ಮೇಲೆ ಅದರ ಇಫೆಕ್ಟ್ ಜನತೆಯ ಮೇಲೆ ಆಗುತ್ತದೆ. ಗೇಣಿದಾರನಿಗೆ ಸುಖ ಸಿಕ್ಕುತ್ತದೆಯೇ, ಅನ್ಯಾಯವಾಗದಂತೆ ನೋಡಿಕೊಳ್ಳಬೇಕಾಗುತ್ತದೆ; ಇಲ್ಲದಿದ್ದರೆ ಗೇಣಿದಾರನಿಗೆ ಮತ್ತು ನಮ್ಮ ರೈತನಿಗೆ ಯಾವ ತರಹ ಲಾಭ ಆಗುವುದಿಲ್ಲ. ಕೆಲವು ಫಂಡ್ ಮೆಂಟಲ್ ಚೇಂಜಸ್ ಅನ್ನು ನಾವು ತರಬೇಕಾಗುತ್ತದೆ. ಈ ಬಿಲ್ಲಿನಲ್ಲಿ ಸೆಕ್ಷನ್ 14ರ ಬಗ್ಗೆ ಆಗಲೇ ಹೇಳಿದ್ದೇನೆ. ಇನ್ನು ರೆಂಟ್ ಬಗ್ಗೆ ಹೇಳುತ್ತೇನೆ. ರೆಂಟ್‌ಗೆ ಕೆಲವು ಪೀನಲ್ ಕ್ಲಾಸ್‌ಸ್ ಅನ್ನು ಕೊಟ್ಟಿದ್ದಾರೆ. ಪೀನಲ್ ಕ್ಲಾಸ್ ಅನ್ನು ರಿಮೂವ್ ಮಾಡುವವರಗೆ ಜನಕ್ಕೆ ನಾವು ಸುಖ ಕೊಡುವುದಕ್ಕಾಗುವುದಿಲ್ಲ. 8ನೇ ಸೆಕ್ಷನ್ 4ನೇ ಕ್ಲಾಸ್ ಪ್ರಾವಿಸೋ 1ರ ಪ್ರಕಾರ ಒಂದು ಎಕರೆಗೆ 66 ರೂಪಾಯಿ ರೆಂಟ್ ಕೊಡಬೇಕು ಎಂದು ಇದೆ. ಇನ್ನೊಂದು ಕಡೆ ಲ್ಯಾಂಡ್ ರೆವಿನ್ಯೂ ಕೊಡುವುದಲ್ಲದೆ ಎಕರೆ ಒಂದಕ್ಕೆ 44 ರೂಪಾಯಿ ಕೊಡಬೇಕು ಎಂದು ಪ್ರಾವಿಷನ್‌ನಲ್ಲಿ ಇಟ್ಟಿದ್ದಾರೆ. ಆಮೇಲೆ 22ರೂಪಾಯಿ ಕೊಡಬೇಕು ಎಂದು ಈ ಮೂರು ಸಬ್ ಕ್ಲಾಜ್ ಅನ್ನು ಸೇರಿಸಿದ್ದಾರೆ. ಈ ಮೂರು ಸಬ್ ಕ್ಲಾಜ್ ಅನ್ನು ತೆಗೆದುಬಿಡಬೇಕು. ಗೇಣಿದಾರನಿಗೆ ಜಮೀನು ಕೊಡುತ್ತೇವೆ ಎನ್ನುವ ಆಸೆ ತೋರಿಸುತ್ತಾರೆ. ಈ ಸಬ್ ಕ್ಲಾಜ್‌ನಿಂದ ಗೇಣಿದಾರನಿಗೆ ಜಮೀನು ಮುಟ್ಟಲಾರದಂಥ ಪಿತೂರಿ ನಡೆಸಿದಂತಾಗುತ್ತದೆ. ಗೇಣಿದಾರನಿಗೆ ಜಮೀನು ಕೊಡಿಸಬೇಕು, ಲ್ಯಾಂಡ್ ಲಾರ್ಡ್ಸ್ ಬಂಧನದಿಂದ ಜಮೀನನ್ನು ಕೊಡಿಸಿದರೆ ನಿಮ್ಮ ಕರ್ತವ್ಯ ಆಗುತ್ತದೆಯೇ ; ಈ ರೀತಿ ಮಾಡಿದರೆ ನಿಮ್ಮ ಡ್ಯೂಟಿ ಮಾಡಿದಂತಾಗುವುದಿಲ್ಲ. ವೆಲ್‌ಫೇರ್ ಸ್ಟೇಟ್‌ನಲ್ಲಿ ಪಾರ್ಟಿಯನ್ನು ಬ್ಯಾನಿಷ್ ಮಾಡಬೇಕು, ಲ್ಯಾಂಡ್ ಲಾರ್ಡ ಮತ್ತು ಟೆನೆಂಟ್‌ಗಳ ರೀಲೇಷನ್ ಅಬಾಲಿಷ್ ಮಾಡಬೇಕಾದದು ಸ್ಟೇಟ್ ರೆಸ್‌ಪಾನ್ಸಿಬಿಲಿಟಿ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಆದರಿಂದ ಈ ಮೂರು ಸಬ್ ಕ್ಲಾಜ್ ಅನ್ನು ತೆಗೆದುಬಿಡಬೇಕು. ಲ್ಯಾಂಡ್ ರೆವಿನ್ಯೂ ಅರಿಯರ್ಸ್ ಈ ವರೆಗೆ ಎಷ್ಟು ಕೇಸಸ್ ರೆಸೆಂಪ್‌ಷನ್ ಬಗ್ಗೆ ನಡೆದಿದೆ, ಆ ಕೇಸಗಳೆಲ್ಲವನ್ನೂ ಕೂಡ ವಜಾ ಮಾಡಬೇಕು. ಎಷ್ಟೇ ತಿದ್ದುಪಡಿ ಮಾಡಿದರೂ ಕೂಡ ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಸಾವಿರಾರು ರಿಸಮ್ಷನ್ ಕೇಸುಗಳು ಇವೆ. ಈ ಬಗ್ಗೆ ಈ ವಿಧೇಯಕದಲ್ಲಿ ಅವಕಾಶ ಮಾಡದಿದ್ದರೆ ಒಂದು ದೊಡ್ಡ ತಪ್ಪು ಮಾಡಿದಂತಾಗುವುದು. ಸರ್ಪ್ಲಸ್ ಭೂಮಿ ಉಳಿಯುವುದೆಂದು ಹೇಳಿಗುವುದರಲ್ಲಿ ಅರ್ಧ ಭಾಗ ಕೂಡ ರೈತರಿಗೆ ಮುಟ್ಟುವುದಿಲ್ಲ. ಅದು ಮುಟ್ಟಬೇಕಾದರೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ ಕೊಟ್ಟು ರಿಸಮ್‌ಷನ್ ಕೇಸುಗಳನ್ನು ವಜಾ ಮಾಡಬೇಕಾಗು

(ಶ್ರೀ ವಿ. ಎನ್. ಪಾಟೀಲ್)

ತ್ತದೆ. ಮೂರನೆಯ ಕ್ಲಾಜನ್ನು ತೆಗೆದುಹಾಕಬೇಕು ಎಂದು ಮುಂತಾಗಿ ನಾನು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದೇನೆ. ಕ್ಲಾಜ್ 10ರ ವಿಚಾರ ಹೇಳಿದ್ದಾಯಿತ್ತು. ಬೇರೆ ಕೆಲವು ಕ್ಲಾಜುಗಳ ವಿಚಾರದಲ್ಲಿ ಹೇಳುವುದೇನೆಂದರೆ ರೆಟ್ರಾಸ್ಪೆಕ್ಟಿವ್ ಎಫೆಕ್ಟ್ 2-10-60 ರಿಂದ ಕೊಡಬೇಕು. ಶಿವಮೊಗ್ಗ, ದಕ್ಷಿಣ ಕನ್ನಡ ಮುಂತಾದ ಮಲೆನಾಡು ಪ್ರದೇಶಗಳ ಬಗ್ಗೆ ನೋಟಿಫೈಡ್ ಏರಿಯ ಎಂದರೆ ಸಾಲದು. ರೈತರು ಮತ್ತು ಗೇಣಿದಾರರಿಗೆ ರಿಯಾಯಿತಿ ದೊರೆಯುವಂತಿರಬೇಕು.

5–30 P.M.

ಕ್ಲಾಜು 6 ಮತ್ತು 7ರಲ್ಲಿ ಕಂದಾಯವನ್ನು ಗೇಣಿದಾರ ಕೊಡಬೇಕೆಂದಿದೆ. ಅದು ಸರಿಯಲ್ಲ, ಅದನ್ನು ಜಮೀನುದಾರ ಕೊಡಬೇಕು. ಹಿಂದುಳಿದಿರುವ ಗೇಣಿದಾರರು ಕಂದಾಯ ಕೊಡುವಂತೆ ಮಾಡಬಾರದು. ಇನ್ನು ಎರಡು ವಿಷಯ ಹೇಳುತ್ತೇನೆ. ಕೇರಳದ ಆಕ್ಟಿನಲ್ಲಿ ಒಂದು ಒಳ್ಳೆಯ ಪ್ರಾವಿಷನ್ ಇದೆ ಡಿಟರ್ಮಿನೇಷನ್ ಅಂಡ್ ಅಸ್ಸೈನ್‌ಮೆಂಟ್ ಆಫ್ ಲ್ಯಾಂಡ್‌ಗೆ ಅಲ್ಲಿ ಒಂದು ಕಮಿಷನ್ ಇದೆ, ಅದೇ ಪ್ರಕಾರ ಇಲ್ಲೂ ಮಾಡಬೇಕು. ನಾವು ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದೇವೆ, ಆ ಕಡೆ ಇರುವ ಮಿತ್ರರು ಅವನ್ನು ಗಮನಿಸಬೇಕು. ಜಮೀನಿನ ವಿಚಾರದಲ್ಲಿ ಅನುಭವವುಳ್ಳ ಮಹನೀಯರೊಬ್ಬರು.—

Dr. Wolf Ladejinsky, a well-known authority on land reforms in Asia, has very aptly described this notorious phase of the ceiling legislation in India in the following words :

> "Looking back, the entire ceiling episode was one of evasions by commission and omission. With deliberately poorly drawn enactments holdings had been fictitiously divided up among close and distant relations so as to make them appear under the ceiling; many owners did not bother even with such precautionary measures. Lacking a single punitive clause in the entire mass of legislation—with the exception of the ineffective one in Maharashtra—there was no reason why they should have. It made no difference whether the ceiling applied on an individual or family basis; there was no concern about records that would have established the *bona fides* of the owners subject to ceilings, or for that matter administrative arrangements worth mentioning. Enforcement was not a problem; there was little to enforce. In sum, while officially the states accepted the ceilings programmes, they rejected them in practice—and with results one might have expected."

Why I wanted to quote this is to say that whatever legislation we may bring forth unless and until there is sincere intention to implement it, it will not serve the purpose.

Then I would like to suggest that a Land Commission should be appointed along with the Taluk Land Boards to enquire as to who is in the actual possession of the land. It should not be determined only on the basis of what has been mentioned in the Phani. For this purpose it is necessary that these Taluk Land Commissions in

consultation with the Gram Sabhas comprising of all political parties who have got some faith and determination to give land to the tiller, should enquire and determine the possessor of the land. While determining it is not the land record or phani written by the Shanbhogues that has to be considered but the deposition of the owner of the adjoining land should be given prominence. It is only then we could give the land to the tiller.

Then there must also be a Land Reforms Review Board. We have no objection even if any of the Minister is made as the Chairman of that review Board. But unless there is such a Board there cannot be any follow-up action in this behalf. This Board must be a watch dog and fully effective.

Lastly, I would like to mention that there is one redundant clause in the proposed Bill, *i.e.,* with regard to exceptions to the ceiling limits. This kind of exemption has so far helped to shield the vested interests. In this clause it is stated that ceiling limit does not apply to the charitable and religious institutions, etc. In respect of Hyderabad Inams Abolition Bill the Joint Select Committee has given its report wherein it has stated that such exception clauses should not be there. Hence, I feel that this redundant clause in the Land Reforms Bill giving exceptions to certain cases should also be deleted. Under no circumstance the ceiling limit should exceed more than 10 acres for the class I land. Once we start giving exception a question could easily be put why there should be exception to the plantation, etc. In fact the aim of the C.P.I. is to fight for nationalisation of Plantation. These exceptions could be manoeuvred by vested interests. Therefore I say that this exception proviso should not be there.

With these words, I thank the Chair and conclude my speech.

BUSINESS OF THE HOUSE

Mr. DEPUTY SPEAKER.—I have an announcement to make. That is with regard to discussion on a matter of urgent public impoitance for short duration under Rule 59 listed for to-day, it will be taken up on some other day since the Hon. Minister for Revenue is busy in the Legislative Council.

Mysore Land Reforms (Amendment) Bill, 1972

Motion to Consider (Debate Contd)

† ಶ್ರೀ ವಿ. ವಿ. ವಾಯಿ (ಶಿರಹಟ್ಟಿ).—ಸನ್ಮಾನ್ಯ ಉಪಸಭಾಪತಿಯವರೇ ಸರ್ಕಾರದವರು ಸಭೆಯ ಮುಂದು ಮಂಡಿಸಿರತಕ್ಕ ಮಸೂದೆಯನ್ನು ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ.

(ಶ್ರೀ ವಿ. ವಿ. ವಾಯಿ)

ಈಗಾಗಲೇ ನಮಗೆ ಸ್ವರಾಜ್ಯ ಬಂದು 25 ವರ್ಷಗಳ ಮೇಲಾಯಿತು. ಆದಾಗ್ಯೂ ನಮ್ಮ ಸರ್ಕಾರದವರಿನ್ನೂ ಭೂಸುಧಾರಣೆ ಕಾಯಿದೆಯನ್ನು ರಾಜ್ಯದಲ್ಲಿ ಜಾರಿಗೆ ತರಲಿಲ್ಲ. ತರುತ್ತೇವೆಂದು ಹೇಳುತ್ತಿದ್ದಾರೆಯೇ ವಿನಾ ಅದನ್ನಿನ್ನೂ ಜಾರಿಗೆ ತರುವುದಕ್ಕೆ ಸಾಧ್ಯವಾಗಿಲ್ಲ. ನಾವು ಹಿಂದೆ ಮುಂಬೈ ರಾಜ್ಯದಲ್ಲಿದ್ದಾಗ ಅಲ್ಲಿ 1956ರಲ್ಲೇ 'ಉಳುವವನೇ ಹೊಲದ ಒಡೆಯ' ಎಂಬ ಕಾಯಿದೆಯನ್ನು ಜಾರಿಗೆ ತಂದಿದ್ದರು. ಆದರೆ ನಾವಿತ್ತ ಕರ್ಣಾಟಕ ರಾಜ್ಯಕ್ಕೆ ಸೇರಿದ ಮೇಲೆ ಇಲ್ಲಿಯೂ ಕೂಡ ಆ ಕಾಯಿದೆಯನ್ನು ತರುತ್ತಾರೆಂದು ನಾವು ನಂಬಿದ್ದೆವು ಜಮೀನನ್ನು ಉಳತಕ್ಕ ರೈತ ಯಾರಿದ್ದಾನೋ ಅವನಿಗೆ ತುರ್ತಾಗಿ ಹೊಲ ದೊರಕುವದೆಂದು ನಾವು ಭಾವಿಸಿದ್ದೆವು. ಆದರೆ ನಾವಿಲ್ಲಿಗೆ ಬಂದು 16 ವರ್ಷಗಳಾದವು. ಆದರೆ ಈ ದಿವಸ ಸಹಿತ ಆ ಕಾಯಿದೆ ಇನ್ನೂ ಜಾರಿಗೆ ಬರಲಿಲ್ಲ. ಈಗ ಸಭೆಯ ಮುಂದೆ ಈ ಮಸೂದೆ ಬಂದಿರುವುದರಿಂದ ಇದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ನಮ್ಮ ದೇಶದಲ್ಲಿ ಹಿಂದೆಯೂ ಕೂಡ ಕೃಷಿಗೆ ಬಹಳ ಪ್ರಾಶಸ್ತ್ಯವಿತ್ತು. ನಮ್ಮ ದೇಶದ ಕೃಷಿಯ ವಿಚಾರದಲ್ಲಿ ನಾರದ ನೀತಿಯಲ್ಲಿ ಹೀಗೆ ಹೇಳಿದೆ:—

ಕೃಷಿ ಮೊದಲು ಸರ್ವಕ್ಕೆ ಕೃಷಿಯಿಂ
ಪಸರಿಸುವದಾ ಕೃಷಿಯನುದ್ಯೋ
ಗಿಸುವ ಜನವನು ಪಾಲಿಸುವದಾಜನಪದ ಜನರಿ
ವಸು ತೆರಳುವರು ವಸುವಿನಂಸಾ
ಧಿಸುವ ದಾವುದಸಾಧ್ಯವದರಿಂ
ಕೃಷಿ ವಿಹೀನನ ದೇಶವದು ದುರ್ದೇಶ
ಕೇಳೆಂದ

ಇದರ ಅರ್ಥ: ಯಾವ ರಾಜ್ಯದಲ್ಲಿ ಕೃಷಿ ಹೀನಸ್ಥಿತಿಯಲ್ಲಿರುತ್ತದೋ ಆ ರಾಜ್ಯದಲ್ಲಿ ಜನರು ನಿರುದ್ಯೋಗಿಗಳಾಗಿರುತ್ತಾರೆ, ಎಲ್ಲಿ ಆರಂಭ ಉತ್ತಮವಾಗಿರುವುದಿಲ್ಲವೋ ಅಲ್ಲಿ ಜನರ ಜೀವನ ಸ್ಥಿತಿ ಉತ್ತಮವಾಗಿರುವುದಿಲ್ಲ ಎಂಬುದಾಗಿ ಹೇಳಿದೆ. ಆದರೆ ಅನೇಕರೇನು ಹೇಳುತ್ತಾರೆ ದೊಡ್ಡ ದೊಡ್ಡ ಭೂಮಿಯನ್ನು ಇಟ್ಟು ಕೊಂಡು ವ್ಯವಸಾಯ ಮಾಡುವುದು ಲಾಭದಾಯಕ ಎಂದು, ಅದನ್ನು ನಾನು ಒಪ್ಪುವುದಿಲ್ಲ. ಆದರೆ ಭೂಮಿಯನ್ನು 10-15 ಎಕರೆ ಒಳಗಡೆ ಇಟ್ಟುಕೊಂಡರೆ ಅದನ್ನು ಉತ್ತಮ ರೀತಿಯಲ್ಲಿ ಬೇಸಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆಂಬ ವಿಶ್ವಾಸ ನನಗುಂಟು. ಏಕೆಂದರೆ ಜನರು ಅವರ ಜಮೀನು ಮುಚ್ಚಟವಾಗಿರುವುದರಿಂದ ಅದಕ್ಕೆ ಒಡ್ಡು ಇತ್ಯಾದಿಗಳನ್ನು ಹಾಕಿಕೊಂಡು ಆ ಭೂಮಿಯಿಂದ ಹೆಚ್ಚು ಉತ್ಪನ್ನ ಬರುವಂತೆ ಮಾಡಿಕೊಂಡಿದ್ದಾರೆ. ಆದರೆ ಇನ್ನು ಕೆಲವು ಕಡೆ ಈ ಭೂಮಿ ನಮಗೆಂದಿಗೂ ಆಗುವುದಿಲ್ಲ. ಎಂದಿದ್ದರೂ ಇದು ಒಡೆಯರ ಪಾಲೇ ಎಂಬ ಅನುಮಾನದಿಂದ ಭೂಮಿಯಲ್ಲಿ ಅಧಿಕ ಉತ್ಪನ್ನ ಬರುವಂತೆ ಮಾಡಲು ಮನಸ್ಸಿಲ್ಲದೆ ಹಾಗೇ ಡೋಲಾಯಮಾನದಲ್ಲಿದ್ದಾರೆ. ಆದರೆ ಇನ್ನಾದರೂ ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ಈಗ ಸರ್ಕಾರದವರು ಮಾಡಿರತಕ್ಕ ಹತ್ತು ಎಕರೆ ಸೀಲಿಂಗ್ ಬಹಳ ಯೋಗ್ಯ ಅದೆ. ಅದರಲ್ಲಿ ಉತ್ತಮವಾದ ಬೆಳೆಯನ್ನು ತೆಗೆಯುವುದಕ್ಕೆ ಅವಕಾಶ ಇದೆ. ಅದರಲ್ಲಿ ಜನರು ಸುಖಮಯ ಜೀವನ ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಈ ದಿವಸ ಸರ್ಕಾರದವರು ಅಧಿಕ ಭೂಮಿ ಇರತಕ್ಕವರಿಂದ ಭೂಮಿಯನ್ನು ಕಿತ್ತು ಭೂಹೀನರಿಗೆ ಹಂಚುತ್ತಿರುವಾಗ ಈ ದೇವಸ್ಥಾನ ಮತ್ತು ವಿದ್ಯಾಸಂಸ್ಥೆಗಳಿಗೆ ಕೊಟ್ಟಿರತಕ್ಕ ಭೂಮಿಯನ್ನೂ ಸೈತಾ ಕಿತ್ತು, ಅವರಿಗೆ ಸಾಕಷ್ಟು ಪರಿಹಾರಕೊಡಿ, ಆ ಭೂಮಿಯನ್ನೂ ಕೂಡ ರೈತನಿಗೆ ಹಂಚಿದರೆ, ಉಳುವವನೆ ಹೊಲದ ಒಡೆಯ, ಎಂಬ ಕಾಯಿದೆಗೆ ಅದು ಅನುಗುಣವಾಗುತ್ತದೆ. ಆದರೆ ಕೆಲವರು ರೈತಾಪಿ ಕಸುಬಿಗೂ ಕೂಡ ಬಹಳ ಭೂಮಿ ಬೇಸಾಯ ಮಾಡುವುದಕ್ಕೆ ಸಾಧ್ಯ ಇಲ್ಲದಿದ್ದರೆ ಸಾಧ್ಯವಿಲ್ಲ ಎನ್ನುತ್ತಿದಾರೆ. ಆದರೆ ಅದು ಸರಿಯಾದ ಹೇಳಿಕೆ ಅಲ್ಲ ಈ ದಿವಸ ಸರ್ಕಾರದವರು ಯಾರಿಗೆ ಭೂಮಿಯನ್ನು ಹಂಚುತ್ತಿದ್ದಾರೋ ಅವರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮ ಗೊಳಿಸತಕ್ಕ ಆ ಬಗ್ಗೆ ಅವರಿಗೆ ಸಾಲ, ಬಿತ್ತನೆ ಬೀಜ ಮತ್ತು ಗೊಬ್ಬರ ಇವುಗಳನ್ನೆಲ್ಲಾ ಒದಗಿಸುವುದಲ್ಲದೆ, ಕಂತಿನ ಮೇರೆಗೆ ಆ ರೈತನಿಗೆ ಪಂಪ್ ಸೆಟ್ ನ್ನೂ ಬಾವಿ ತಗೆಸಲು ಸಾಲವಾಗಿ ಹಣವನ್ನೂ ಕೂಡ ಸರ್ಕಾರದವರು ಕೊಡುವುದಕ್ಕೆ ತಯಾರಾಗಿದ್ದಾರೆ. ಅಂದಾಗ ಯಾರಾದರೂ ಸುಖವಾಗಿ ಬೇಸಾಯ ಮಾಡಿಕೊಂಡು ತಮ್ಮ ಜೀವನವನ್ನು ಸುಖವಾಗಿ ನಡಸಿಕೊಂಡು ಹೋಗಬಹುದು ಎಲ್ಲರೂ ಒಳ್ಳೇ ಚೆಲೋತನದಲ್ಲಿ ದುಡಿಯುತ್ತಾರೆ. ಜನರು ಚಂದ್ರಲೋಕಕ್ಕೆ ಹೋಗಿಬರತಕ್ಕ

ಕಾಲದಲ್ಲಿ ಭೂಮಿಯಲ್ಲಿ ಉತ್ತಮ ಫಸಲನ್ನು ಬರುವಂತೆ ಮಾಡುವುದೇನು ಕಷ್ಟ? ಆವತ್ತೆ ದೇಶದಲ್ಲಿ ಏಕೆ ಬರಗಾಲ ಬಂದಿದೆ ಎಂದು ಕೆಲವರು ಕೇಳಬಹುದು. ಅದು ದೈವತ್ತ್ಯಪಾದದ್ದು. ಹತ್ತು ಇಪ್ಪತ್ತು ವರ್ಷಗಳಿಗೆ ಒಮ್ಮೆ ಅದು ಬಂದೇ ಬರುತ್ತದೆ. ಅದಕ್ಕೆ ನಾವು ತಾಳಿಕೊಂಡು ಹೋಗಬೇಕು ಆದರೆ ಆ ಬರಗಾಲದ ನೆಪದಲ್ಲಿ ಭೂಮಿಯನ್ನು ಹಂಚುವುದು ಬೇಡ ಅವರಿಗೆ ಹೆಚ್ಚಿಗೆ ಭೂಮಿ ಬೇಕು ಎನ್ನುವುದು ಸರಿಯಲ್ಲ. ಚಿಕ್ಕ ಚಿಕ್ಕ ಹಿಡುವಳಿ ಇದಷ್ಟು ರೈತನ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆ ಬೇಸಾಯ ಚೆನ್ನಾಗಿ ಸಾಗುತ್ತದೆ. ಭೂಮಿ ಭೂಮಿಯನ್ನು ಹೆಚ್ಚು ಫಲವತ್ತಾಗಿ ಮಾಡುವುದಕ್ಕೆ ಅವಕಾಶವಾಗುತ್ತದೆ, ಆರ್ಥಿಕ ಸ್ಥಿತಿಯೂ ಉತ್ತಮಗೊಳ್ಳುತ್ತದೆ. ಆದರೆ ಭೂಮಿ ದೊಡ್ಡದಾದಷ್ಟೂ ಸಾರ ಕಡಮೆಯಾಗುತ್ತದೆ. ಬೆಳೆ ಚೆನ್ನಾಗಿ ಬರುವುದಿಲ್ಲ. ಉತ್ಪನ್ನ ಕಡಮೆಯಾಗುವುದು. ಆದ್ದರಿಂದ ಅದು ಒಂದು ಉತ್ತಮ ಬೇಸಾಯವಾಗುವುದಿಲ್ಲ. ಈ ದಿವಸ ಹಳ್ಳಿಗಳಲ್ಲಿ ಚಿಕ್ಕ ಚಿಕ್ಕ ಹಿಡುವಳಿ ಇಟ್ಟುಕೊಂಡಿರತಕ್ಕ ರೈತರು ಬಹಳ ಚೆನ್ನಾಗಿದ್ದಾರೆ, ಸುಖವಾಗಿದ್ದಾರೆ: ಮಕ್ಕಳು ಮರಿಗಳಿಗೆ ವಿದ್ಯಾಭ್ಯಾಸಕ್ಕೂ ಅನುಕೂಲ ಮಾಡಿಕೊಟ್ಟಿದ್ದಾರೆ. ಭೂಮಿಗೆ ಪಂಪ್ ಸೆಟ್ ಇತ್ಯಾದಿಗಳನ್ನು ಹಾಕಿಕೊಂಡು ಉತ್ತಮ ಬೆಳೆಯನ್ನು ತೆಗೆಯುತ್ತಾರೆ. ಇಷ್ಟೆಲ್ಲಾ ಒಳ್ಳೆಯದಾಗತಕ್ಕ ಅಂಶಗಳು ಇದರಲ್ಲಿ ಕಾಣುತ್ತಿರುವುದರಿಂದ ಸರ್ಕಾರದವರು ಈಗ ಈ ಕಾಯಿದೆಯನ್ನು ತರಲಿಕ್ಕೆ ಹತ್ತಿದ್ದಾರೆ. ಆದರೆ ನಾನು ಇನ್ನು ನನ್ನ ಮಾತುಗಳನ್ನು ಮುಗಿಸುವುದಕ್ಕೆ ಮುನ್ನ ಮಹಾಭಾರತದಲ್ಲಿ ಸತ್ಯದ ಮಾತು ನಡೆಸಿಕೊಡುವುದರ ಬಗ್ಗೆ ಹೇಳಿದ್ದಾರೆಂಬುದನ್ನು ತಿಳಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಪಾಂಡವರಿಗೂ ಕೌರವರಿಗೂ ಯುದ್ಧವಾಗುವುದಕ್ಕೆ ಮೊದಲು ಉತ್ತರಗೋಗ್ರಹಣದಲ್ಲಿ ಪಾಂಡವರು 12 ವರ್ಷ ವನವಾಸ 1 ವರ್ಷ ಅಜ್ಞಾತವಾಸ ಮುಗಿಸುವುದಕ್ಕೆ ಇನ್ನೂ ಒಂದು ದಿವಸ ಬಾಯಿದೆ ಇದೆ ಎಂದು ಕೌರವ ಅನ್ನುವಾಗ ಭೀಷ್ಮರು ಹೀಗೆ ಹೇಳಿದ್ದಾರೆ.

ಜಲಧಿ ಮೇರೆಯನೊಡೆದು ಹಾಯಲಿ
ನೆಲನನಿಳುಹಲಿ ದಿಗಭವಿನಮಂ
ಡಲತೆ ತಾಳಿಕೆಯುಡಲನಡೆದಾಡಲಿ ಕುಲಾದ್ರಿಗಳು
ಅಳುಪಲರಿವನೆ ಸತ್ಯಭಾಷೆಗೆ
ಕಲಿಯುಧಿಷ್ಠಿರ ನೃಪತಿಯನ್ಯಾಯ
ಕಲಿತನಲ್ಲಾ ತಂದ ಕೌರವಯೆಂದನಾ ಭೀಷ್ಮ

ಈ ಪ್ರಕಾರವಾಗಿ ಮಾನ್ಯ ಶ್ರೀ ದೇವರಾಜ್ ಅರಸ್ ಅವರು ಈ ಒಂದು ಭೂಸುಧಾರಣೆಯಿಂದ ರೈತರ ಮಕ್ಕಳ ಪುರೋಭಿವೃದ್ಧಿಗೆ ತಕ್ಕ ಕಾರ್ಯಗಳನ್ನು ಕೈಗೊಂಡು ರೈತರಿಗೆ ಸತ್ಯವಾಗಿ ಸುಖ ಸಂತೋಷವನ್ನುಂಟುಮಾಡುತ್ತಾರೆಂದು ನಂಬಿ, ಈ ಭೂಸುಧಾರಣೆಯು ತಿದ್ದುಪಡಿ ಮಸೂದೆಗೆ ನಾನು ಹೃತ್ಪೂರ್ವಕವಾಗಿ ಬೆಂಬಲಿಸುತ್ತೇನೆ.

ಕೊನೆಯದಾಗಿ ನನಗೆ ಇಷ್ಟು ಹೊತ್ತು ಮಾತನಾಡುವುದಕ್ಕೆ ಅವಕಾಶವನ್ನು ಒದಗಿಸಿ ಕೊಟ್ಟಿದ್ದಕ್ಕಾಗಿ ಮಾನ್ಯ ಉಪಾಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

MR. DEPUTY SPEAKER.—The House will now rise and meet again tomorrow at 1 P. M.

The House adjourned at Fifty Five Minutes past Five of the Clock to meet again at One of the Clock on Friday, the 8th December 1973.

WD 18799—GPB—550—19-12-73